
Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–3 | ಜನವರಿ 13–19, 2025 | ಪುಟ 16 | ರೂ.10/–
Volume-19 | Issue-3 | January 13-19, 2025 | Pages:16 | Price: 10/-



ಕಾಮ್ರೇಡ್ ಜಿ.ಸಿ.ಬಿ. ಯವರಿಗೆ ಭಾವಪೂರ್ಣ ನಮನ



ವಿಶ್ವವಿದ್ಯಾಲಯ ಧನ ಆಯೋಗದ ಹೊಸ ನಿಯಮಗಳು :

ರಾಜ್ಯಗಳ ವಿ.ವಿ.ಗಳ ಮೇಲೆ ದುರಾಕ್ರಮಣ



ಬಸ್ ಪ್ರಯಾಣದ ದರ ಹೆಚ್ಚಳ ಅನಿವಾರ್ಯವೇ?

ಸತತ ರೂಪಾಯಿ ಕುಸಿತ ಮತ್ತು ಡಾಲರ್ ಬಲವರ್ಧನೆ ಯಾಕೆ?

ಬಹುತ್ವ ಭಾರತ - ಸಶಕ್ತ ಭಾರತ ಸಮಾವೇಶ, ಜನವರಿ 17-19, 2025 ಕಲ್ಬುರ್ಗಿ ಚಲೋ

ಬಸ್ ಪ್ರಯಾಣ ದರ ಹೆಚ್ಚಳ ಅನಿವಾರ್ಯವೇ? ಜನಸಾಮಾನ್ಯರಿಗೆ ಹೊರೆಯಾಗದಂತೆ ದರ ನಿಗದಿಮಾಡಲು ಬೇರೆ ಮಾರ್ಗ ಇಲ್ಲವೇ?

ಸಿ.ಸಿದ್ದಯ್ಯ

ಬಿಎಂಟಿಸಿ ಸೇರಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್ಸುಗಳಲ್ಲಿ ಶೇ.15ರಷ್ಟು ಪ್ರಯಾಣದರ ಹೆಚ್ಚಳವಾಗಿದೆ. ಈಗಾಗಲೇ ಹಣದುಬ್ಬರದಿಂದ ಬಳಲುತ್ತಿರುವ ಜನಸಾಮಾನ್ಯರ ಬದುಕಿಗೆ ಇದು ಮತ್ತಷ್ಟು ಹೊರೆಯಾಗಿದೆ. ಅವರ ದೈನಂದಿನ ಖರ್ಚು ವೆಚ್ಚಗಳಲ್ಲಿ ಮತ್ತಷ್ಟು ಏರಿಕೆಗೆ ಇದು ಕಾರಣವಾಗಿದೆ. ಎಂದಿನಂತೆ, ದರ ಏರಿಕೆಯನ್ನು ಅನಿವಾರ್ಯ ಎಂಬಂತೆ ಆಳುವ ಪಕ್ಷದ ನಾಯಕರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಹಾಗಾದರೆ, ಬಸ್ ಪ್ರಯಾಣದರ ಹೆಚ್ಚಳ ಅನಿವಾರ್ಯವೇ? ಇದಕ್ಕೆ ಪರ್ಯಾಯ ಮಾರ್ಗ ಇಲ್ಲವೇ? ತನ್ನ ಪ್ರಜೆಗಳಿಗೆ ಕೈಗೆಟಕುವ ದರದಲ್ಲಿ ಪ್ರಯಾಣ ಸೌಲಭ್ಯ ಒದಗಿಸಲು ಪ್ರಭುತ್ವಕ್ಕೆ ಸಾಧ್ಯವಿಲ್ಲವೇ? ಖಂಡಿತಾ ಸಾಧ್ಯವಿದೆ.

2025 ಹೊಸ ವರ್ಷದ ಆರಂಭದಲ್ಲೇ ರಾಜ್ಯದ ಬಸ್ ಪ್ರಯಾಣಿಕರಿಗೆ ದರ ಏರಿಕೆಯ ಬಿಸಿ ತಟ್ಟಿದೆ. ಜನವರಿ 5ರಿಂದ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್ಸುಗಳಲ್ಲಿ ಶೇ. 15ರಷ್ಟು ಪ್ರಯಾಣದರ ಹೆಚ್ಚಳವಾಗಿದೆ. ವಿರೋಧ ಪಕ್ಷಗಳು ದರ ಏರಿಕೆಯನ್ನು ಖಂಡಿಸಿ ಹೋರಾಟಕ್ಕಿಳಿದಿವೆ. ಆಳುವ ಪಕ್ಷವಾಗಿದ್ದಾಗ ಪ್ರಯಾಣ ದರ ಏರಿಕೆಯನ್ನು ಸಮರ್ಥಿಸಿಕೊಳ್ಳುವುದು, ವಿರೋಧ ಪಕ್ಷವಾಗಿದ್ದಾಗ ಇದನ್ನು ವಿರೋಧಿಸುವುದು ವಾಡಿಕೆಯಂತೆ ನಡೆದುಕೊಂಡು ಬಂದಿದೆ. ಇದನ್ನು ನೋಡಿದಾಗ, ಇವರು ಜನರನ್ನು ವಂಚಿಸುವ ನಾಟಕವಾಡುತ್ತಿದ್ದಾರೆ ಎಂಬುದಂತೂ ಸತ್ಯ. ಸುದ್ದಿ ಮಾಧ್ಯಮಗಳು ಜನರ ಆಕ್ರೋಶದ ನುಡಿಗಳಿಗೆ ಮೈಕ್ ಹಿಡಿದು ದರ ಹೆಚ್ಚಳವನ್ನು ಖಂಡಿಸಿ ಪ್ರಸಾರ ಮಾಡುತ್ತಿವೆ. ಇದು ಮಾಧ್ಯಮಗಳಿಗೆ ಇರಬೇಕಾದ ಕಳಕಳಿ ಎಂದು ಒಪ್ಪಿಕೊಳ್ಳಬಹುದಾದರೂ, ಜನಸಾಮಾನ್ಯರಿಗೆ ಹೊರೆಯಾಗುವ ಈ ರೀತಿಯ ದರ ಹೆಚ್ಚಳಕ್ಕೆ ಕಾರಣವೇನು? ದರ ಹೆಚ್ಚಳ ಮಾಡದೆ, ಸಾರಿಗೆ ಸಂಸ್ಥೆಗೆ ನಷ್ಟ ಉಂಟಾಗದಂತೆ ಪ್ರಯಾಣಿಕರಿಗೆ ಸುಲಭ ದರದಲ್ಲಿ ಸೇವೆ ಒದಗಿಸುವುದು ಹೇಗೆ? ಇದಕ್ಕೆ ಪರ್ಯಾಯ ಏನು ಎಂಬುದನ್ನು ವಿಮರ್ಶಿಸಲು ಮಾಧ್ಯಮಗಳು ಮುಂದಾಗುತ್ತಿಲ್ಲ.

ಸಾರಿಗೆ ಸಂಸ್ಥೆಗಳಿಗೆ ನಷ್ಟ

ಮೊದಲಿಗೆ ಸಾರಿಗೆ ಸಂಸ್ಥೆಗಳಿಗೆ ನಷ್ಟವೇಕೆ ಎಂಬುದನ್ನು ನೋಡೋಣ. ಮೇ 2014ರಲ್ಲಿ ರಾಜ್ಯದಲ್ಲಿ ಲೋಕಸಭಾ ಚುನಾವಣೆ ಮುಗಿದ ಕೆಲವೇ ದಿನಗಳಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರ ರಾಜ್ಯ ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣದರವನ್ನು ಶೇ. 17ರಷ್ಟು ಹೆಚ್ಚಳ ಮಾಡಿತ್ತು. ಒಂದು ವರ್ಷದ ನಂತರ ಶೇ. 2ರಷ್ಟು ಕಡಿತಮಾಡಿತು. 2018ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಶೇ. 18ರಷ್ಟು ದರ ಹೆಚ್ಚಳಕ್ಕೆ ಅನುಮತಿ ನೀಡಿ, ನಂತರ ಜನರ ಒತ್ತಡದಿಂದಾಗಿ ಅನುಮತಿಯನ್ನು ಹಿಂಪಡೆದರು. 2020ರ ಪೆಬ್ರವರಿ ತಿಂಗಳಲ್ಲಿ ಬಿಎಂಟಿಸಿ ಹೊರತುಪಡಿಸಿ ಕೆಎಸ್ಆರ್‌ಟಿಸಿ, ವಾಯವ್ಯ ಸಾರಿಗೆ ಹಾಗೂ ಈಶಾನ್ಯ ಸಾರಿಗೆ ಈ ಮೂರು ನಿಗಮಗಳ ಬಸ್ ಪ್ರಯಾಣ ದರವನ್ನು ಶೇ.12ರಷ್ಟು ಹೆಚ್ಚಳ ಮಾಡಲಾಗಿತ್ತು. 2014ರಲ್ಲಿ ದರ ಪರಿಷ್ಕರಣೆ ನಂತರ ಡೀಸೆಲ್ ಬೆಲೆಯಲ್ಲಿ ಪ್ರತಿ ಲೀಟರ್‌ಗೆ ಒಟ್ಟು 11.27 ರೂ. ಹೆಚ್ಚಳವಾಗಿದೆ ಎಂದು ಅಂದಿನ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ದರ ಹೆಚ್ಚಳವನ್ನು ಸಮರ್ಥಿಸಿಕೊಂಡಿತ್ತು. 2020ರ ನಂತರ ಪ್ರಯಾಣದರ ಹೆಚ್ಚಳ ಮಾಡಿಲ್ಲ. ಇದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ನಷ್ಟ ಉಂಟಾಗುತ್ತಿದೆ ಎಂಬುದು ಇಂದಿನ ಕಾಂಗ್ರೆಸ್ ಸರ್ಕಾರದ ವಾದ. ಜೊತೆಗೆ, ಬಿಜೆಪಿ ಸರ್ಕಾರಗಳು ಇದ್ದಾಗಲೂ ದರ ಹೆಚ್ಚಳ ಮಾಡಿದ್ದವು ಎಂದು ಇಂದಿನ ದರ ಹೆಚ್ಚಳವನ್ನು ಸಚಿವರು ಸಮರ್ಥಿಸಿಕೊಳ್ಳುತ್ತಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಳ

ಡೀಸಲ್ ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ದರದಲ್ಲಿ ಹೆಚ್ಚಳವಾಗಿದೆ. 2014ರಲ್ಲಿ ಡೀಸಲ್ ದರ ಬೆಂಗಳೂರಿನಲ್ಲಿ 59 ರೂ. ಇತ್ತು, ಇಂದು 89 ರೂ. ಆಗಿದೆ. ಅಂದರೆ, 10 ವರ್ಷಗಳಲ್ಲಿ 30 ರೂ. ಹೆಚ್ಚಳವಾಗಿದೆ. ಈ ಹೆಚ್ಚಳಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಸರ್ಕಾರಗಳು ವಿಧಿಸುತ್ತಿರುವ ಅಧಿಕ ಪ್ರಮಾಣದ ತೆರಿಗೆಗಳು ಮತ್ತು ಅದರ ನವಉದಾರವಾದಿ ನೀತಿಗಳು ಕಾರಣವಾಗಿವೆ.



2014ರಲ್ಲಿ ಡೀಸಲ್ ಮೇಲಿನ ಅಬ್ಕಾರಿ ಸುಂಕ (ಕೇಂದ್ರ ಸರ್ಕಾರದಿಂದ ವಿಧಿಸಲಾಗುತ್ತದೆ) 3.56 ರೂ ಇತ್ತು. 2024ರಲ್ಲಿ ಇದು 15.80 ರೂಪಾಯಿ. ಅಂದರೆ, ಮೋದಿ ಅಧಿಕಾರಕ್ಕೆ ಬಂದ ನಂತರ ಡೀಸಲ್ ಮೇಲಿನ ಅಬ್ಕಾರಿ ಸುಂಕವನ್ನು 12.24 ರೂ. ಹೆಚ್ಚಳ ಮಾಡಿದೆ. ರಾಜ್ಯ ಸರ್ಕಾರ ಡೀಸಲ್ ಮೇಲೆ ಶೇ. 18.44 ಮಾರಾಟ ತೆರಿಗೆ (13.80 ರೂ.) ವಿಧಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದು ಲೀಟರ್ ಡೀಸಲ್ ಮೇಲೆ ಸರಿಸುಮಾರು 29.60 ರೂಪಾಯಿ ತೆರಿಗೆ ಸಂಗ್ರಹಿಸುತ್ತಿವೆ.

ಪ್ರಸ್ತುತ, ರಾಜ್ಯ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆಯಿಂದ ವಾರ್ಷಿಕವಾಗಿ ಸುಮಾರು ರೂ. 20,000 ಕೋಟಿ ಸಂಗ್ರಹಿಸುತ್ತಿದೆ. ಕೇಂದ್ರ ಸರ್ಕಾರವು 2024ರ ಹಣಕಾಸು ವರ್ಷದಲ್ಲಿ ಪೆಟ್ರೋಲಿಯಂ ವಲಯದಿಂದ ಅಬಕಾರಿ ಸುಂಕದ ರೂಪದಲ್ಲಿ ರೂ. 2.73 ಟ್ರಿಲಿಯನ್ (2 ಲಕ್ಷದ 73 ಸಾವಿರ ಕೋಟಿ) ಗಳಿಸಿದೆ. (ಬಿಸಿನೆಸ್ ಸ್ಟ್ಯಾಂಡರ್ಡ್ ಆಗಸ್ಟ್ 16, 2024)

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರ್ವಜನಿಕ ಸಾರಿಗೆ ಸಂಸ್ಥೆಗಳು ಖರೀದಿಸುವ ಡೀಸಲ್‌ಗೆ ತೆರಿಗೆ ವಿನಾಯಿತಿ ನೀಡಿ ರಾಜ್ಯ ಸಾರಿಗೆ ನಿಗಮಗಳಿಗೆ ಡೀಸಲ್ ಪೂರೈಕೆ ಮಾಡಿದರೆ, ಆಗ ತೆರಿಗೆ ರಹಿತವಾಗಿ 59 ರೂಪಾಯಿಗಳಿಗೆ ಡೀಸಲ್ ದೊರಕುತ್ತದೆ. (ಜನವರಿ 6, 2024ರಂದು ಬೆಂಗಳೂರಿನಲ್ಲಿ ಡೀಸಲ್ ದರ 88.99 ರೂ. ಇತ್ತು) ಇದರಿಂದ ಸಾರಿಗೆ ಸಂಸ್ಥೆಗಳ ಹೊರೆಯೂ ಕಡಿಮೆಯಾಗುತ್ತದೆ. ಪ್ರಯಾಣದರ ಹೆಚ್ಚಳ ಮಾಡುವ ಅಗತ್ಯ ಬರುವುದಿಲ್ಲ.

ಪ್ರಸ್ತುತ ಪ್ರತಿನಿತ್ಯ ನಾಲ್ಕು ನಿಗಮಗಳಿಗೆ ಡೀಸಲ್ ವೆಚ್ಚ 13.21 ಕೋಟಿ ರೂ.ಗೆ ತಲುಪಿದೆ. ಪ್ರತಿ ದಿನ ಅಂದಾಜು ನಾಲ್ಕು ಕೋಟಿ ರೂಪಾಯಿಗೂ ಹೆಚ್ಚು ತೆರಿಗೆಯನ್ನು ಡೀಸಲ್ ಖರೀದಿ ಒಂದರಿಂದಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ರಾಜ್ಯ ರಸ್ತೆ ಸಾರಿಗೆ ನಿಗಮಗಳು ಕೊಡುತ್ತಿವೆ.

ಖಾಸಗೀಕರಣದ ಉನ್ನಾರ

ಒಂದೆಡೆ ಡೀಸಲ್, ಆಯಿಲ್ ನಂತಹ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ದುಬಾರಿಯಾಗಿದ್ದರೆ, ಮತ್ತೊಂದೆಡೆ ಹೊಸದಾಗಿ ಖರೀದಿಸುವ ಬಸ್ಸುಗಳ ಬೆಲೆ ಏರಿಕೆ, ಬಿಡಿಬಾಗಗಳ ಬೆಲೆ ಏರಿಕೆ, ಬಸ್ಸುಗಳ ನಿರ್ವಹಣಾ ವೆಚ್ಚದಲ್ಲಿ ಹೆಚ್ಚಳ, ವಾಹನಗಳ ವಿಮಾ ಪ್ರೀಮಿಯಂ ಮತ್ತು ವಾಹನಗಳ ಮೇಲಿನ ತೆರಿಗೆ, ರಸ್ತೆ ತೆರಿಗೆಯಲ್ಲಿ ಹೆಚ್ಚಳ, ಸಿಬ್ಬಂದಿಗಳ ವೇತನ ಹೆಚ್ಚಳ... ಹೀಗೆ ಹಲವು ರೀತಿಯಲ್ಲಿ ಸಾರಿಗೆ ನಿಗಮಗಳಿಗೆ ಹೆಚ್ಚಿನ ಹೊರೆ ಬೀಳುತ್ತಲೇ ಇರುತ್ತದೆ.

ಈ ಎಲ್ಲವನ್ನೂ ನಿವಾರಿಸಿಕೊಳ್ಳಲು ಕಾಲ ಕಾಲಕ್ಕೆ ಪ್ರಯಾಣದರ ಏರಿಕೆ ಮಾಡಬೇಕಾಗುತ್ತದೆ. ಆದರೆ, ರಾಜಕೀಯ ಕಾರಣಗಳಿಗಾಗಿ ಆಳುವ ಪಕ್ಷಗಳು ವರ್ಷಾನುಗಟ್ಟಲೆ ಪ್ರಯಾಣದರ ಹೆಚ್ಚಳ ಮಾಡಲು ಮುಂದಾಗುವುದಿಲ್ಲ. ಅಥವಾ ಸಾರಿಗೆ ನಿಗಮಗಳಿಗೆ ಆಗುವ ನಷ್ಟವನ್ನು ತುಂಬಿಕೊಡಲು ಸರ್ಕಾರ ಮುಂದಾಗುವುದಿಲ್ಲ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಕಚ್ಚಾ ಇಂಧನದ ಬೆಲೆಗಳಿಗೆ ಅನ್ವಯಿಸಿ 15 ದಿನಗಳಿಗೊಮ್ಮೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಪರಿಸ್ಕರಿಸಲು ತೈಲ ಕಂಪನಿಗಳಿಗೆ ಸರ್ಕಾರ ಅನುವು ಮಾಡಿಕೊಟ್ಟಿದೆ. ಆದರೆ, ಇಂತಹ ಅವಕಾಶ ಸಾರಿಗೆ ಸಂಸ್ಥೆಗಳಿಗೆ ಇಲ್ಲ ಎಂಬುದನ್ನು ಗಮನಿಸಬೇಕಾಗಿದೆ.

ಸರ್ಕಾರದಿಂದ 6,321 ಕೋಟಿ ಬಾಕಿ!! 2,000 ಕೋಟಿ ಸಾಲ ಮಾಡಲು ಅನುಮತಿ!!!

ಸರ್ಕಾರ ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವ ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ, ಅಂಧರಿಗೆ, ಪತ್ರಕರ್ತರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್‌ಗಳನ್ನು ಕೊಡುತ್ತದೆ. ವೃದ್ದರಿಗೆ ರಿಯಾಯಿತಿ ದರದಲ್ಲಿ ಟಿಕೆಟ್ ನೀಡುವ ಯೋಜನೆ ಜಾರಿಯಲ್ಲಿದೆ. ಇತ್ತೀಚೆಗೆ 'ಶಕ್ತಿ ಯೋಜನೆ'ಯ ಮೂಲಕ ಮಹಿಳೆಯರಿಗೆ ಉಚಿತ ಪ್ರಯಾಣ ಘೋಷಿಸಿದೆ. ಆದರೆ, ಸರ್ಕಾರವು ಸಾರಿಗೆ ನಿಗಮಗಳಿಗೆ ಈ ಹಣ ನೀಡದೆ ಬಾಕಿ ಉಳಿಸಿಕೊಂಡಿದೆ. ಈ ರೀತಿ ಬಾಕಿ ಉಳಿದಿರುವ ಮೊತ್ತ ರೂ. 4,562 ಕೋಟಿ. ಶಕ್ತಿ ಯೋಜನೆ ಬಾಬ್ತು ಬಾಕಿ ರೂ. 1,759 ಕೋಟಿ. ಒಟ್ಟು ಬಾಕಿ ಹಣ ರೂ. 6,321 ಕೋಟಿ. ಸರ್ಕಾರ ತಾನು ಕೊಡಬೇಕಾದ ಈ ಹಣವನ್ನು ನಿಗಮಗಳಿಗೆ ಕೊಡುತ್ತಿಲ್ಲ. ಬದಲಾಗಿ, ಈ ಕೊರತೆ ತುಂಬಿಸಿಕೊಳ್ಳಲು 2,000 ಕೋಟಿ ರೂ. ಸಾಲ ಮಾಡಲು ಸಾರಿಗೆ ನಿಗಮಗಳಿಗೆ ಅನುಮತಿ ಕೊಟ್ಟಿದೆ!!

ಎಲ್ಲರಿಗೂ ಸಾರಿಗೆ ಸೌಲಭ್ಯ ಒದಗಿಸುವ ಉದ್ದೇಶದಿಂದ ಗ್ರಾಮೀಣ ಪ್ರದೇಶಗಳಿಗೂ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಚಾರ ಇದೆ. ಪ್ರಯಾಣಿಕರ ಸಂಖ್ಯೆ ವಿರಳವಾಗಿದ್ದರೂ ಇಲ್ಲಿ ಬಸ್ಸುಗಳು ಸಂಚರಿಸುತ್ತವೆ. ಇದರಿಂದಾಗಿ ಗ್ರಾಮೀಣ ಭಾಗಗಳಲ್ಲಿ ಸಂಚರಿಸುವ ಬಸ್ಸುಗಳಿಗೆ ನಷ್ಟ ಉಂಟಾಗುತ್ತದೆ. ಇದನ್ನು ಸರ್ಕಾರವೇ ತುಂಬಿಕೊಡಬೇಕು. ಆದರೆ, ಈ ನಷ್ಟವನ್ನೂ ಸಾರಿಗೆ ಸಂಸ್ಥೆಯ ಮೇಲೆ ಹೊರಿಸಲಾಗುತ್ತದೆ.

ಇತ್ತೀಚೆಗೆ ಸಂಸ್ಥೆಯ ಮೇಲೆ ಮತ್ತೊಂದು ಹೊರೆ ಸೇರ್ಪಡೆಯಾಗಿದೆ. ಅದು ಖಾಸಗಿ ಎಲೆಕ್ಟ್ರಿಕ್ ಬಸ್ಸುಗಳು. ಸಾರಿಗೆ ನಿಗಮಗಳಲ್ಲಿ ಖಾಸಗಿ ಮಾಲೀಕತ್ವದ ಎಲೆಕ್ಟ್ರಿಕ್ ಬಸ್ಸುಗಳ ಸಂಚಾರಕ್ಕೆ ಅವಕಾಶ ಕೊಡಲಾಗಿದೆ. FAME ಇಂಡಿಯಾ (Faster Adoption and Manufacturing of Electric and Hybrid Vehicles in India) ಯೋಜನೆಯಡಿಯಲ್ಲಿ ಎಲೆಕ್ಟ್ರಿಕ್ ಬಸ್ಸುಗಳನ್ನು ಖರೀದಿಸಲು ಸಾರಿಗೆ ನಿಗಮಗಳಿಗೆ ಸಬ್ಸಿಡಿ ಕೊಡಲು ನಿರಾಕರಿಸುವ ಕೇಂದ್ರ ಸರ್ಕಾರ, ಒಂದು ಬಸ್ಸು ಖರೀದಿಸಲು ಖಾಸಗಿಯವರಿಗೆ ರೂ. 50 ಲಕ್ಷ ಸಬ್ಸಿಡಿ ಕೊಡುತ್ತಿದೆ. ಈ ಬಸ್ಸುಗಳಿಗೆ ಕಿಮೀ ಒಂದಕ್ಕೆ 41 ರೂ. ದರದಂತೆ (ಈ ಮೊದಲು 51 ರೂ) ದಿನಕ್ಕೆ ಕನಿಷ್ಟ 180 ಕಿಮೀಗೆ 7,380 ರೂ.ಗಳನ್ನು ಸಾರಿಗೆ ನಿಗಮಗಳು ಖಾತ್ರಿಯಾಗಿ ಕೊಡಬೇಕು. ಇಂತಹ ಒಪ್ಪಂದದಿಂದಾಗಿಯೂ ಸಾರಿಗೆ ಸಂಸ್ಥೆಗಳು ನಷ್ಟ ಅನುಭವಿಸುವಂತಾಗಿದೆ. ಕೇಂದ್ರ ಸರ್ಕಾರದ ಈ ಒತ್ತಡಕ್ಕೆ ಮಣಿಯದೆ ಇದರಿಂದ ಹೊರಬಂದು, ಸಾರಿಗೆ ನಿಗಮಗಳೇ ಸ್ವತಃ ಎಲೆಕ್ಟ್ರಿಕ್ ಬಸ್ಸುಗಳನ್ನು ಖರೀದಿಸಿ ಕಾರ್ಯಾಚರಣೆ ನಡೆಸುವಂತೆ ರಾಜ್ಯ ಸರ್ಕಾರ ಅವಕಾಶ ಮಾಡಿಕೊಡಬೇಕಿದೆ. ಖಾಸಗಿಯವರಿಗೆ ಸರ್ಕಾರ ಕೊಡುವ 50 ಲಕ್ಷ ಸಬ್ಸಿಡಿ ಹಣವನ್ನು ನಿಗಮಗಳಿಗೆ ಕೊಡುವಂತೆ ಒತ್ತಾಯಿಸಬೇಕಾಗಿದೆ.

2015ರಲ್ಲಿ ಪ್ರತಿನಿತ್ಯ ನಾಲ್ಕು ನಿಗಮಗಳಿಗೆ ಡೀಸೆಲ್ ವೆಚ್ಚ 9.14 ಕೋಟಿ ರೂ. ಇತ್ತು. ಇದೇ ವೆಚ್ಚ ಈಗ 13.21 ಕೋಟಿ ರೂ.ಗೆ ತಲುಪಿದೆ. ಸಿಬ್ಬಂದಿ ವೆಚ್ಚ 12.81 ಕೋಟಿ ರೂ.ಗಳಿಂದ 18.36 ಕೋಟಿ ರೂ.ಗಳಿಗೆ ಏರಿಕೆ ಆಗಿದೆ. ಸಾರಿಗೆ ನಿಗಮಗಳು ಸರಬರಾಜುದಾರರಿಗೆ ಮತ್ತು ಇಂಧನ ಬಾಕಿ ರೂ. 998 ಕೋಟಿ ಹಾಗೂ ತನ್ನ ನೌಕರರಿಗೆ 38 ತಿಂಗಳ ವೇತನ ರೂ. 1,750 ಕೋಟಿ ಬಾಕಿ ಇದೆ.

ಈ ಮೂಲಕ, ಸಾರಿಗೆ ನಿಗಮಗಳು ನಷ್ಟ ಹೊಂದುವಂತೆ ಮಾಡಿ, ಅವುಗಳನ್ನು ಸಾಲದ ಬಲೆಯಲ್ಲಿ ಸಿಲುಕಿಸಿ, ಇದೇ ನೆಪದಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ನಾಶ ಮಾಡಿ, ರಸ್ತೆ ಸಾರಿಗೆ ವಲಯವನ್ನು ಸ್ವದೇಶಿ ಮತ್ತು ವಿದೇಶಿ ಖಾಸಗಿ ಸಂಸ್ಥೆಗಳ ಕೈಗೆ ಒಪ್ಪಿಸುವ ಆಳುವವರ ಉನ್ನಾರ ಇದರಲ್ಲಿ ಅಡಗಿದೆ.

ಜೆಎನ್‌ನರ್ಮ್ ಯೋಜನೆ ಸ್ಥಗಿತಗೊಳಿಸಿದ ಮೋದಿ ಸರ್ಕಾರ

ಜನರ ಕೈಗೆಟಕುವ ದರದಲ್ಲಿ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸುವುದು ಪ್ರಭುತ್ವದ ಜವಾಬ್ದಾರಿ ಆಗಿರಬೇಕು. ಇದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಸಾಕಷ್ಟು ಅನುದಾನಗಳನ್ನು ಕೊಡಬೇಕು. ಸಂಸ್ಥೆಗಳ ಅಭಿವೃದ್ಧಿಗೆ ಸರ್ಕಾರ ಮೂಲಬಂಡವಾಳ ಕೊಡಬೇಕು. ಈ ಉದ್ದೇಶದಿಂದಲೇ, ಅಸ್ತಿತ್ವದಲ್ಲಿರುವ ಸೇವಾ ಹಂತಗಳಲ್ಲಿ ಸುಧಾರಣೆಯನ್ನು ತರಲು ಕ್ರಮಗಳನ್ನು ಪ್ರಾರಂಭಿಸಲು ನಗರಗಳನ್ನು ಉತ್ತೇಜಿಸಲು, ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮಿಷನ್ (JnNURM) ಅನ್ನು ಭಾರತ ಸರ್ಕಾರವು ಡಿಸೆಂಬರ್ 3,

ಪುಟ 5 ಕ್ಕೆ

ಜಂಟಿ ಹೋರಾಟದ ನೇಯ್ಗೆಯ ನೈಪುಣ್ಯತೆ ಕಾರ್ಯಕರ್ತರ ಗುರುತಿಸುವ ಕೌಶಲ್ಯವುಳ್ಳ ಸಂಗಾತಿ ಬಯ್ಯಾರೆಡ್ಡಿ–ಕೆ.ಎನ್.ಉಮೇಶ್

ಕಾಮ್ರೇಡ್ ಜಿ.ಸಿ.ಬಯ್ಯಾರೆಡ್ಡಿ ನಿರಂತರವಾಗಿ ಜಂಟಿ ಹೋರಾಟ ರೂಪಿಸುವ ತುಡಿತ ಹೊಂದಿದ್ದರು. ನಮ್ಮ ಚಳುವಳಿ–ಸಂಘಟನೆಯ ಸಾಮರ್ಥ್ಯವನ್ನು ಸರಿ ಅಂದಾಜು ಮಾಡುವ ಅದರ ಮಿತಿಗಳನ್ನು ಅರಿತು ನಡೆಗಳನ್ನು ರೂಪಿಸುವಲ್ಲಿ ಜಿಸಿಬಿ ಯವರಿಗೆ ಇದ್ದ ನೈಪುಣ್ಯತೆಗೆ ಅವರೇ ಸಾಟಿ. ಅದರ ಪರಿಣಾಮವೇ ಕೋವಿಡ್ ಲಾಕ್ಡೌನ್ ವೇಳೆ ತಮ್ಮ ಅನಾರೋಗ್ಯದ ಮಿತಿಗಳ ನಡುವೆಯೂ 'ಸಂಯುಕ್ತ ಹೋರಾಟ ಕರ್ನಾಟಕ'ದಂತಹ ವಿಶಾಲ ಜನವಿಭಾಗಗಳನ್ನು ಒಳಗೊಂಡ ವೇದಿಕೆ ರೂಪಿಸುವಲ್ಲಿ ಅದನ್ನು ಸದೃಢಗೊಳಿಸುವಲ್ಲಿ ಅಪಾರ ಕೊಡುಗೆ ನೀಡಿದರು. ಮಾತ್ರವಲ್ಲ ತಮ್ಮ ಕೊನೆವರೆಗೂ ಅದರ ಸಂಚಾಲಕರಾಗಿದ್ದರು.

1991 ರಿಂದ ನನಗೆ ಪರಿಚಿತರಾದ ಜಿಸಿಬಿ ಯವರನ್ನು ನಾನು ಸಂದರ್ಶಿಸಿದ್ದು, ಅವರು ಎಸ್ಎಫ್ಐ ಅಧ್ಯಕ್ಷರಾಗಿದ್ದಾಗ. ನಾನು ತುಮಕೂರಿನಲ್ಲಿ ಎಸ್ಎಫ್ಐ ಕಾರ್ಯಕರ್ತನಾಗಿ, ಕಾನೂನು ಪದವಿ ಓದುತ್ತಾ ಎಸ್ಎಫ್ಐ ಕಾರ್ಯಕರ್ತನಾಗಿ ನನ್ನನ್ನು ಚಳುವಳಿಗೆ ಪೂರ್ಣಾವಧಿ ಕಾರ್ಯಕರ್ತನಾಗಿ ನೇಮಿಸುವಲ್ಲಿ ಅವರದೇ ಪ್ರಧಾನ ಪಾತ್ರ. ಪರಿಣಾಮವಾಗಿ ಕಾನೂನು ಪದವಿ ಪಡೆದು ವಕೀಲಿ ವೃತ್ತಿಯ ಸನ್ನದ್ದು ಪಡೆದ ದಿನದಿಂದಲೇ, ವಕೀಲಿ ವೃತ್ತಿ ಆರಂಭಿಸುವ ಬದಲು ವೃತ್ತಿಪರ ಕ್ರಾಂತಿಕಾರಿ–ಪೂರ್ಣಾವಧಿ ಕಾರ್ಯಕರ್ತನಾಗಲು ನಿರ್ಣಯ ಕೈಗೊಂಡು, ಕಳೆದ 30 ವರ್ಷಗಳಿಂದ ಚಳುವಳಿಯಲ್ಲಿ ತೊಡಗಿಕೊಳ್ಳಲು ಸಾಧ್ಯವಾಯಿತು.

ನನ್ನಂತೆ ಹಲವು ಕಾರ್ಯಕರ್ತರನ್ನು ಗುರುತಿಸಿ ಪೂರ್ಣಾವಧಿಯಾಗಿ ತೊಡಗಿಸುವಲ್ಲಿ ಶ್ರಮಿಸಿದ್ದಾರೆ. ಅದರ ಫಲವಾಗಿ ಇಂದಿನ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯಲ್ಲಿರುವ ಬಹುತೇಕರು ಜಿಸಿಬಿಯವರು ಎಸ್ಎಫ್ಐ ನಲ್ಲಿ ರಾಜ್ಯ ಅಧ್ಯಕ್ಷರಾಗಿದ್ದ ಕಾಲಾವಧಿಯಲ್ಲಿ ಮತ್ತು ಆನಂತರದ ದಿನಗಳಲ್ಲಿ ವಿದ್ಯಾರ್ಥಿ ಚಳುವಳಿಯ ಮೂಲಕ ಸೇರ್ಪಡೆಗೊಂಡ ಸಂಗಾತಿಗಳಾಗಿದ್ದಾರೆ.



ಇಂತಹ ಅಪಾರ ಕೊಡುಗೆ ನೀಡಲು ಸಾಧ್ಯವಾದದ್ದು ಅವರಿಗೆ ಇದ್ದ ವಿಶಿಷ್ಟ ಕೌಶಲ್ಯವೇ ಕಾರಣ. ಅದೇಂದರೆ ಅವರಿಗೆ ಸರಿ ಅನ್ನಿಸಿದ್ದನ್ನು ಇನ್ನೊಬ್ಬರಿಗೆ ಮನವರಿಕೆ ಮಾಡಿಕೊಟ್ಟು, ಅದನ್ನು ಕೇಳಿದವರು ಸಹಾ ಅದು ಸರಿ ಎಂದು ಸ್ವೀಕರಿಸುವಂತೆ ಮಾಡುವಲ್ಲಿನ ಅವರ ಸಾಮರ್ಥ್ಯ. ಅವರ ಆರೋಗ್ಯ ಸರಿ ಇದ್ದಿದ್ದರೆ, ಅವರು ಮತ್ತಷ್ಟು ವರ್ಷಗಳು ನಮ್ಮೊಂದಿಗೆ ಇರಲು ಸಾಧ್ಯವಾಗಿದ್ದರೆ ಇಂತಹ ಇನ್ನು ಹಲವು ಸಂಗಾತಿಗಳನ್ನು ಗುರುತಿಸಿ ಚಳುವಳಿಯೊಂದಿಗೆ ಅಣಿನೆರೆಸುವ ಕೊಡುಗೆ ನೀಡುವ ಸಾಧ್ಯತೆ ಇತ್ತು. ಅಂತಹದನ್ನು ರಾಜ್ಯದ ಚಳುವಳಿ ಅವರ ಅಗಲುವಿಕೆಯಿಂದ ಕಳೆದುಕೊಂಡಿದೆ.

ಅದೇ ವೇಳೆ ಎಸ್ಎಫ್ಐ ನಲ್ಲಿದ್ದ ಕಾಲದಿಂದಲೂ ಅವರು ಜಂಟಿ ಹೋರಾಟಗಳನ್ನು ರೂಪಿಸುತ್ತಿದ್ದರು. SFI, AISF, DSF ಮತ್ತು ಸಮತಾ ವಿದ್ಯಾರ್ಥಿ ಒಕ್ಕೂಟದಂತಹ ವಿದ್ಯಾರ್ಥಿ ಸಂಘಟನೆಗಳನ್ನು ಒಳಗೊಂಡು ಅವರು ರೂಪಿಸಿದ ಜಂಟಿ ಹೋರಾಟ ಇಂದಿಗೂ ಅವಿಸ್ಮರಣೀಯವಾದದ್ದು.

ಹೋರಾಟಗಳ ಮೂಲಕ ಲಭಿಸುತ್ತಿದ್ದ ಸಂಪರ್ಕಗಳನ್ನು ಚಳುವಳಿಗಾಗಿ ಬಳಸುವ ನಿಟ್ಟಿನಲ್ಲಿ ಅಂತಹ ಸಂಪರ್ಕಗಳನ್ನು ಪೋಷಿಸುವ–ರೂಢಿಸುವ ಗಟ್ಟಿಗೊಳಿಸಿಕೊಳ್ಳುವಲ್ಲಿ ಅವರದು ಸಿದ್ದ ಹಸ್ತ. ಹಾಗಾಗಿಯೇ ಅವರಿಗೆ ನಮ್ಮ ಚಳುವಳಿಯ ಪ್ರಭಾವದ ಆಚೆಗೂ ರಾಜಕೀಯ ಅಧಿಕಾರದ ಮೊಗಸಾಲೆಯಲ್ಲಿನ ಅಧಿಕಾರಿಗಳು ಇತರೆ ರಾಜಕೀಯ ನಾಯಕರೊಂದಿಗೆ ಉತ್ತಮ ಸ್ನೇಹ ಸಂಪರ್ಕ ಹೊಂದುವ ವಿಶೇಷ ಗುಣ ಸ್ವಭಾವ ಇತ್ತು. ಅದು ಚಳುವಳಿಗೆ ಹಲವು ಬಗೆಯ ಸಹಾಯವನ್ನು ಮಾಡಿದೆ, ಕೊಡುಗೆಯನ್ನು ನೀಡಿದೆ. ಇಂತಹ ಸಂಪರ್ಕ ಸಂಬಂಧವುಳ್ಳ ಮತ್ತೊಬ್ಬರು ನಮ್ಮೊಳಗೆ ಲಭಿಸುವುದು ದುರ್ಲಭವೇ ಸರಿ.

ರಾಜ್ಯ ವಿದ್ಯಾರ್ಥಿ ನಾಯಕರಾಗಿ ಅಂದಿನಿಂದ ಅವರು ಆರಂಭಿಸಿದ ಜಂಟಿ ಹೋರಾಟ ರೂಪಿಸುವ–ನೇಯ್ಯುವ ಅವರ ಕೆಲಸವನ್ನು ಇತ್ತೀಚಿನ ಸಂಯುಕ್ತ ಹೋರಾಟ ಕರ್ನಾಟಕದ ಜಂಟಿ ಚಳುವಳಿ ಮತ್ತು ಬೆಂಗಳೂರು ಗ್ರಾಮಾಂತರ ಚನ್ನರಾಯಪಟ್ಟಣದ ಭೂಸ್ವಾಧೀನ ವಿರೋಧಿ ಹೋರಾಟದಲ್ಲಿ ಕಾಣಬಹುದಾಗಿದೆ. ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಪಾಸ್ ನಿರಾಕರಣೆ ವಿರುದ್ಧ ಸಂಜೆ ಕಾಲೇಜು ವಿದ್ಯಾರ್ಥಿಗಳ, ಸೆರಿಕಲ್ಚರ್ ಪದವಿ ವಿದ್ಯಾರ್ಥಿಗಳ ಹೋರಾಟ, ಐಟಿಐ ವಿದ್ಯಾರ್ಥಿಗಳ ಹೋರಾಟ, ಹಿಂದಿ ಕಡ್ಡಾಯ ವಿರೋಧಿ ಹೋರಾಟಗಳನ್ನು ರೂಪಿಸಿ ಬೆಳೆಸಿ ಯಶಸ್ಸು ಕಾಣುವಲ್ಲಿ ಅವರ ಕೊಡುಗೆ ಅಪಾರ.

ಆನಂತರ ರೈತ ಚಳುವಳಿಯ ಕಾರ್ಯಕರ್ತರಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿ ನೈಸ್ ಭೂಸ್ವಾಧೀನ ವಿರೋಧಿ ಹೋರಾಟ, ಕೆಐಎಡಿಬಿ ಭೂಸ್ವಾಧೀನ ವಿರೋಧಿ ಹೋರಾಟ, ವಸತಿ ನಿವೇಶನ ರಹಿತರಿಗೆ ವಸತಿ ನಿವೇಶನಕ್ಕಾಗಿನ ಹೋರಾಟ, ವಿದ್ಯುತ್ ಖಾಸಗೀಕರಣ, ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ವಿರುದ್ಧ ಹೋರಾಟಗಳನ್ನು ಯಶಸ್ಸು ಕಾಣಲು ಅವರು ರೂಪಿಸಿಕೊಂಡಿದ್ದ ಜಂಟಿ ಹೋರಾಟಗಳನ್ನು ನೇಯ್ಯುವಲ್ಲಿ ಅವರ ನೈಪುಣ್ಯತೆ ಕಾರಣವಾಗಿದೆ. ಈ ನೈಪುಣ್ಯತೆಯಿಂದಾಗಿ ಬಲಿಷ್ಟವಲ್ಲದ ಚಳುವಳಿಗೂ ಅದರ ಗಾತ್ರಕ್ಕೂ ಮೀರಿದ ಮಾನ್ಯತೆ ದೊರೆಯುವಂತಾಯಿತು.

ಜಿಸಿಬಿ ಯವರ ಅಗಲುವಿಕೆಯಿಂದಾಗಿ ಅಂತಹ ಜಂಟಿ ಹೋರಾಟದ ನೇಯ್ಗೆಯ ನೈಪುಣ್ಯತೆ ಮತ್ತು ಕಾರ್ಯಕರ್ತರನ್ನು ಗುರುತಿಸುವ ಕೌಶಲ್ಯವುಳ್ಳ ಸಂಗಾತಿಯನ್ನು ಕಳೆದುಕೊಂಡಿದೆ. ರಾಜ್ಯದ ಚಳುವಳಿಗೆ ಇಂತಹ ಅವಿಸ್ಮರಣೀಯ ಕೊಡುಗೆ ನೀಡಿದ ಕಾಮ್ರೇಡ್ ಜಿಸಿಬಿ ಯವರಿಗೆ ನನ್ನ ಕೆಂಪು ನಮನ.

ಬಹುತ್ವ ಭಾರತದೆಡೆಗೆ ನಮ್ಮ ನಡಿಗೆ ಬಹುತ್ವ ಸಂಸ್ಕೃತಿ ಭಾರತೋತ್ಸವ–2025, ಚಲೋ–ಕಲಬುರಗಿ

(ದಿನಾಂಕ 17 ರಿಂದ 19, ಜನವರಿ 2025 ರವರೆಗೆ)

ಜನವರಿ 19, 2025 ರಂದು ರಾಜ್ಯ ಮಟ್ಟದ

ಬೃಹತ್ ಸೌಹಾರ್ದ ಸಮಾವೇಶ ನಡೆಯಲಿದೆ.

ಇವನಾರವ, ಇವನಾರವ, ಇವನಾರವನೆಂದಿನಿಸದಿರಯ್ಯ,

ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ. ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ (ಬಸವಣ್ಣನವರು)

ಪರಧರ್ಮ ಮತ್ತು ಪರವಿಚಾರಗಳನ್ನು ಸಹಿಸುವುದೇ ನಿಜವಾದ ಬಂಗಾರ. (ಶ್ರೀವಿಜಯ)

ಮತಧರ್ಮ ಇರಬೇಕಾದುದು ತತ್ವವಾಗಿ ಹೊರತು

ನಿಯಮಾವಳಿಯಾಗಿ ಅಲ್ಲ. ಅದು ಕಡ್ಡಾಯ ನಿಯಮಗಳಾಗಿ

ಮಾರ್ಪಾಡಾದ ಕೂಡಲೇ ಧರ್ಮ ಎನಿಸುವ ಅರ್ಹತೆ ಕಳೆದುಕೊಳ್ಳುತ್ತದೆ.

(ಡಾ ಬಿ.ಆರ್ ಅಂಬೇಡ್ಕರ್)

ಕಲಬುರಗಿಯು ಬಸವಕಲ್ಯಾಣದ ಹೆಬ್ಬಾಗಿಲು. ಶರಣಬಸವಪ್ಪನವರ ಕರ್ಮಭೂಮಿ ಮತ್ತು ಸೂಫಿ ಸಂತ ಖ್ವಾಜಾ ಬಂದೇನವಾಜ್ ಪ್ರಯೋಗ ಭೂಮಿ. ಕ್ರಿ.ಶ 1ನೇ ಶತಮಾನದಲ್ಲಿ ಚಿತ್ತಾಪೂರದ ಕನಗವಳ್ಳಿಯಲ್ಲಿ ನಿರ್ಮಿಸಲಾದ ಬೌದ್ಧ ಮಹಾಸ್ತೂಪವು ಸಾಮ್ರಾಟ್ ಅಶೋಕನ ಕಾಲದಲ್ಲಿ ಇದು ಬೌದ್ಧ ಭೂಮಿಯಾಗಿತ್ತು ಎಂಬುದನ್ನು ಸಾಕ್ಷೀಕರಿಸುತ್ತಿದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಹಲವು ಧರ್ಮ, ಜಾತಿ, ಮತ, ಪಂಥ ಮತ್ತು ಭಾಷೆಗಳ ಸಮ್ಮಿಲನಕ್ಕೆ ನೆಲೆಮನೆಯಾಗಿದೆ. ಧಾರ್ಮಿಕ ಸಾಮರಸ್ಯ, ಸಹಬಾಳ್ವೆ, ಮತ ಸಮನ್ವಯತೆಗೆ ಪ್ರಸಿದ್ಧಿಯಾಗಿರುವ ಈ ನಾಡು ಸಾಂಸ್ಕೃತಿಕ ಬಹುತ್ವಕ್ಕೂ ಹೆಸರುವಾಸಿಯಾಗಿದೆ. ಇಂಥ ಕಲಬುರಗಿಯನ್ನು ಇತ್ತೀಚೆಗೆ ಕೋಮುವಾದೀಕರಣಗೊಳಿಸುವ ನಿಷ್ಫಲ ಪ್ರಯತ್ನಗಳು ನಡೆಯುತ್ತಿವೆ.

ಉಗ್ರ ಹಿಂದುತ್ವವಾದಿಗಳು ಸಂಸ್ಕೃತಿ ಉತ್ಸವದ ನೆಪದಲ್ಲಿ ಏಕ ಸಂಸ್ಕೃತಿಯನ್ನು ಹೇರುತ್ತಾ ನಮ್ಮ ನಾಡಿನ ಭಾವೈಕ್ಯ ಪರಂಪರೆಯನ್ನು ಹಾಳು ಮಾಡಲು ಮುಂದಾಗುತ್ತಿದ್ದಾರೆ. ಇದಕ್ಕೆ ಉತ್ತರವೆಂಬಂತೆ ಕೆಲವು ಅಲ್ಪಸಂಖ್ಯಾತ ಮೂಲಭೂತವಾದಿಗಳು ಮತಾಂಧತೆಯಲ್ಲಿ ಮುಳುಗುತ್ತಿದ್ದಾರೆ. ಅತ್ಯಂತ ಅಪಾಯಕಾರಿ ಕೋಮು ಚಟುವಟಿಕೆಗಳು ಪ್ರಭುತ್ವ ಪ್ರೇರಿತ ಅಧಿಕಾರದ ಮೂಲಕ ನಡೆಯುತ್ತಿವೆ. ಈ ನಡೆಗಳು ನಮ್ಮ ಬದುಕನ್ನು ಇನ್ನಷ್ಟು ದುರ್ಬಲಗೊಳಿಸುತ್ತವೆ. ಈಗಾಗಲೇ ಬಡತನ, ಅಪೌಷ್ಟಿಕತೆ, ಅನಿಯಂತ್ರಿತ ವಲಸೆ, ನಿರುದ್ಯೋಗ, ಪ್ರಾದೇಶಿಕ ಅಸಮಾನತೆ, ಮೌಢ್ಯಗಳಿಂದ ನಲುಗುತ್ತಿರುವ ಜನಸಮುದಾಯಗಳನ್ನು ಮತ್ತಷ್ಟು ಪ್ರಪಾತಕ್ಕೆ ತಳ್ಳುತ್ತಿವೆ. ಕೋಮುವಾದಿಗಳ ಆಕರ್ಷಕ ಮಾತುಗಳಿಗೆ ಮರುಳಾದ ನಮ್ಮ ಯುವಜನರು, ವಿಶೇಷವಾಗಿ ದಲಿತ, ಶೂದ್ರ ಮುಂತಾಗಿ ಹಿಂದುಳಿದ ಯುವಜನರು ಅವರು ತೋಡಿದ ಖೆಡ್ಡಾಗಳಿಗೆ ಬೀಳುತ್ತಿದ್ದಾರೆ. ಧಾರ್ಮಿಕ ದ್ವೇಷಗಳಿಂದ ಕೋಮುದಂಗೆಗಳಲ್ಲಿ ನಿರತರಾಗಿ ಕೇಸು ಹಾಕಿಸಿಕೊಂಡು ಒದ್ದಾಡುತ್ತಿದ್ದಾರೆ. ಹಿಂದೂ ನಾವೆಲ್ಲ ಒಂದು ಎನ್ನುತ್ತ ದಲಿತಾದಿ ಶೂದ್ರ ಬಡಮಕ್ಕಳನ್ನು ಮತಾಂಧತೆಯಲ್ಲಿ ಕೆರಳಿಸಿ ಅವರೆಲ್ಲರನ್ನು ಕ್ರಿಮಿನಲ್‌ಗಳಾಗಿಸುತ್ತಿದ್ದಾರೆ. ನಮ್ಮ ತರುಣ ಪೀಳಿಗೆ ಕೋಮುದ್ವೇಷದ ದಳ್ಳುರಿಗೆ ಡೇರಿ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಅದಕ್ಕಾಗಿ ದಿನಾಂಕ 17, 18 ಮತ್ತು 19 ಜನವರಿ 2025 ರಂದು ಮೂರು ದಿವಸಗಳವರೆಗೆ ಕಲಬುರಗಿಯಲ್ಲಿ ರಾಜ್ಯ ಮಟ್ಟದ ಸೌಹಾರ್ದ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ದಿನಾಂಕ 17–1–2025 ರಂದು ಸೌಹಾರ್ದ ಯಾತ್ರೆ. ಶ್ರೀ ಶರಣಬಸವೇಶ್ವರ ದೇವಸ್ಥಾನದಿಂದ ಮಹಾತ್ಮ ಬಸವೇಶ್ವರ ಮತ್ತು ಬಾಬಾಸಾಹೇಬರ ಪುತ್ಥಳಿ ಮಾರ್ಗವಾಗಿ ಖಾಜಾ ಬಂದೇನವಾಜ್ ದರ್ಗಾದವರೆಗೆ. "ನಮ್ಮ ನಡಿಗೆ ಶರಣ, ಸಂತ, ಸೂಫಿ ಪ್ರಜ್ಞೆಯೆಡೆಗೆ" ಘೋಷಣೆಯಡಿಯಲ್ಲಿ ವಾಹನ ಜಾಥಾ ನಡೆಯುತ್ತದೆ.

ದಿನಾಂಕ 18–1–2025 ರಂದು "ಭಾವೈಕ್ಯದ ಹೊನಲು: ಸಮನ್ವಯದ ಗಾಯನ ಗಮಲು" ಘೋಷಣೆಯಡಿ ದಿನವಿಡೀ ತತ್ವಪದ, ಸೂಫಿಪದ, ವಚನ ಗಾಯನ ಕಾರ್ಯಕ್ರಮ.

ದಿನಾಂಕ 19–1–2025 ರಂದು ದಿನವಿಡೀ "ಬಹುತ್ವ ಭಾರತದ ಜಾಗ್ರತ ಅಭಿಯಾನ ನಾಡಿನೆಲ್ಲೆಡೆಯಿಂದ ಪರಮಪೂಜ್ಯರು, ಸರ್ವಧರ್ಮಗಳ ನೇತಾರರು, ವಿಚಾರವಾದಿಗಳು, ಸಾಮಾಜಿಕ ಕಾರ್ಯಕರ್ತರು, ಮಾನವ ಹಕ್ಕುಗಳ ಹೋರಾಟಗಾರರು, ಅಖಿಲ ಕರ್ನಾಟಕದ ದುಡಿಯುವ ಜನರು ಸಮಾವೇಶಗೊಂಡು ಸಮತೆ–ಮಮತೆಗಳ ಸಂದೇಶ ಸಾರಲಿದ್ದಾರೆ.

ನಾಡಿನ ವಿವಿಧ ಜಿಲ್ಲೆಗಳಿಂದ ಜಾಥಾ ಹೊರಟು ದಿನಾಂಕ 19–1–2025 ರಂದು ಕಲಬುರಗಿಯಲ್ಲಿ ಸಮಾವೇಶಗೊಳ್ಳುತ್ತವೆ.

ಕಲ್ಯಾಣ ಕರ್ನಾಟಕವನ್ನು, ಕಲಬುರಗಿಯನ್ನು ಕೋಮುವಾದಿಗಳ ಅಡ್ಡೆ ಮಾಡಲು ಬಿಡುವುದಿಲ್ಲ ಎಂಬ ಎಚ್ಚರಿಕೆ ನೀಡಲು ನೀವೂ ಬನ್ನಿರಿ.

ಇದು ಜನಪರ ನಿಲುವುಳ್ಳ ಎಲ್ಲರ ಅಭಿಯಾನ.

ಕಾಯಕಜೀವಿಗಳ ಸ್ವಾಭಿಮಾನದ ನಡಿಗೆ ಸಮತ್ವದೆಡೆಗೆ, ನಮ್ಮ ನಡೆ ಬಹುತ್ವ ಭಾರತ ಉತ್ಸವದೆಡೆಗೆ

ನಮ್ಮೊಂದಿಗೆ: ಸೌಹಾರ್ದ ಕರ್ನಾಟಕ, ಜಾಗತಿಕ ಲಿಂಗಾಯತ ಮಹಾಸಭೆ–ಮಾನವ ಬಂಧುತ್ವ ವೇದಿಕೆ – ಬಂಡಾಯ ಸಾಹಿತ್ಯ ಸಂಘಟನೆ – ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ – ಕಬ್ಬಲಿಗ ಹೋರಾಟ ಸಮಿತಿ – ರಾಷ್ಟ್ರೀಯ ಬಸವದಳ – ಮಾದಿಗ ದಂಡೋರ ಹೋರಾಟ ಸಮಿತಿ – ದಲಿತ ಹಕ್ಕುಗಳ ಸಮಿತಿ–ಕರ್ನಾಟಕ, ಕೋಲಿ ಸಂವಾದ ಕರ್ನಾಟಕ–ಎದ್ದೇಳು ಕರ್ನಾಟಕ, ದಲಿತ ಕಲಾ ಮಂಡಳಿ, ಗದಗ–ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕೆ ಮಹಿಳಾ ಗಣ – ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ – ಸಮುದಾಯ– ಕರ್ನಾಟಕ–ಪ್ರಜ್ಞಾ ಕಾನೂನು ಸಲಹಾ ಸಮಿತಿ, ಮೇ ಸಾಹಿತ್ಯ ಮೇಳ–ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ – ಎಸ್.ಎಫ್.ಐ.– ಡಿ.ವೈ.ಎಫ್.ಐ.– ಸಿ.ಐ.ಟಿ.ಯು.– ಅಭಿಮತ ಮಂಗಳೂರು– ಭಾರತ ಜ್ಞಾನ ವಿಜ್ಞಾನ ಸಮಿತಿ – ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ – ಅಖಿಲ ಭಾರತ ಕಿಸಾನ ಸಭಾ – ಭಾರತೀಯ ಮಹಿಳಾ ಒಕ್ಕೂಟ – ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ –ಅಖಿಲ ಭಾರತ ಯುವಜನ ಒಕ್ಕೂಟ– ಭಾರತ ಖೇತ್ ಮದ್ದೂರ್ ಯುನಿಯನ್– ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ– ಕರ್ನಾಟಕ ಪ್ರಾಂತ ರೈತ ಸಂಘ– ಲಡಾಯಿ ಪ್ರಕಾಶನ– ಉದ್ಯೋಗ ಖಾತ್ರಿ ಕಾಯಕಜೀವಿಗಳ ಸಂಘಟನೆ – ಡಾ. ಅಂಬೇಡ್ಕರ್ ವಿದ್ಯಾರ್ಥಿಗಳ ಸಂಘಟನೆ (ಕೇಂದ್ರಿಯ ವಿಶ್ವವಿದ್ಯಾಲಯ) ಕಲಬುರಗಿ– ದಲಿತ ಸಂಘಟನೆಗಳ ಒಕ್ಕೂಟ– ಸಂವಿಧಾನಪರ ಸಂಘಟನೆಗಳ ಒಕ್ಕೂಟ– ಸಮಗ್ರ ಬಸವಪರ ಸಂಘಟನೆಗಳ ಒಕ್ಕೂಟ– ಕಾಯಕಜೀವಿಗಳ ಸಮಾಜ ಸಂಘಟನೆಗಳ ಒಕ್ಕೂಟ ಮತ್ತು ತಾವೆಲ್ಲರೂ.

ಬಹುತ್ವ ಭಾರತ ಶ್ರೇಷ್ಠ ಭಾರತ
ಸೌಹಾರ್ದ ಕರ್ನಾಟಕ

ಬೋಧನೆಯಾಚೆಗೂ ಬದುಕು ಕಟ್ಟಿಕೊಳ್ಳಲು ನೆರವಾದ ಮೇಸ್ಟ್ರು:
ಬರಗೂರರಿಗೆ ತವರು ಜಿಲ್ಲೆಯ ಗೌರವ



"ಭಿನ್ನಾಭಿಪ್ರಾಯದ ನಡುವೆ ಬದುಕುವುದೇ ನಿಜವಾದ ಪ್ರಜಾಪ್ರಭುತ್ವ.ಇಂದಿನ ಕಾರ್ಯಕ್ರಮ ನನಗೆ ಮತ್ತಷ್ಟು ವರ್ಷ ಬದುಕುವಂತಹ ಶಕ್ತಿಯನ್ನು ನೀಡಿದೆ. ನನ್ನನ್ನು ನಾನು ತಿರುಗಿ ನೋಡಿಕೊಳ್ಳುವಂತೆ ಮಾಡಿದೆ. ನಾನು ಮಹಾತ್ಮಗಾಂಧಿಯ ಸಹಿಷ್ಣತೆ, ಅಂಬೇಡ್ಕರ್ ಅವರ ಸಾಮಾಜಿಕ ಸಮಾನತೆ ಮತ್ತು ಕಾರ್ಲ್ ಮಾರ್ಕ್ಸ್ ಅವರ ಅರ್ಥಿಕ ಸಮಾನತೆಯಿಂದ ಸ್ಪೂರ್ತಿ ಪಡೆದವನು. ನೀಲಿ, ಹಸಿರು, ಕೆಂಪು ಒಂದಾದರೆ ಹೆಚ್ಚಿನ ಅನುಕೂಲ ಜನರಿಗೆ ಸಿಗಲಿದೆ ಎಂಬ ನಂಬಿಕೆ ನನ್ನದು" ಎಂದು ನಾಡೋಜ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.

2025 ಜನವರಿ 5ರಂದು ತುಮಕೂರು ನಗರದ ಗ್ರಂಥಾಲಯ ಸಭಾಂಗಣದಲ್ಲಿ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಸ್ನೇಹ ಬಳಗದ ವತಿಯಿಂದ ಹಮ್ಮಿಕೊಂಡಿದ್ದ 'ಬರಗೂರು ಮೀಮಾಂಸೆ ಮತ್ತು ಬರಗೂರರಿಗೆ ತವರು ಜಿಲ್ಲೆಯ ಗೌರವ' ಕಾರ್ಯಕ್ರಮದಲ್ಲಿ ತುಮಕೂರು ನಾಗರಿಕರ ಗೌರವ ಸ್ವೀಕರಿಸಿ ಮಾತನಾಡಿದ ಅವರು, "ನನ್ನ ಇಂದಿನ ಎಲ್ಲಾ ಗೌರವಕ್ಕೆ ಕಾರಣರು, ನಾನು ಜಾತ್ಯಾತೀತ ವ್ಯಕ್ತಿಯಾಗಿ ರೂಪುಗೊಳ್ಳಲು ನನಗೆ ಚಿಕ್ಕಂದಿನಲ್ಲಿ ಪಾಠ ಹೇಳಿಕೊಟ್ಟ ಟಿ.ವೈ.ನಾಗಭೂಷಣರಾವ್, ಎಂ.ಎಸ್.ರಾಮಲಿಂಗಪ್ಪ, ನನ್ನ ಸಾಹಿತ್ಯವನ್ನು ತಿದ್ದಿ ತೀಡಿ ಬರೆಯಲು ಪ್ರೇರೆಪಿಸಿದ ಸೀತಾರಾಮ್ ಅವರುಗಳು" ಎಂದರು.

"ಜನರ ಪ್ರೀತಿಗೆ ಗೌರವ ಕೊಡಬೇಕು ಎಂಬ ಕಾರಣಕ್ಕೆ ನಿಮ್ಮೆಲ್ಲಾ ಗೌರವಗಳನ್ನು ಸ್ವೀಕರಿಸಿದ್ದೇನೆ. ಭಾವುಕತೆ ಮತ್ತು ಬೌದ್ಧಿಕತೆ ಎರಡರ ನಡುವೆ ಸಮತೋಲನ ಕಂಡುಕೊಂಡವ ನಾನು. ಇಂದಿನ ಕಾರ್ಯಕ್ರಮ ಒಂದೆಡೆ ಸಂಭ್ರಮ ನೀಡಿದರೆ, ಮತ್ತೊಂದಡೆ ಎಚ್ಚರಿಕೆಯನ್ನು ನೀಡಿದೆ" ಎಂದರು.

ಬೋಧನೆಯಾಚೆಗೂ ಬದುಕು ಕಟ್ಟಿಕೊಳ್ಳಲು ನೆರವಾದ ಮೇಸ್ಟ್ರು

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಹಂಪಿ ವಿಶ್ವವಿದ್ಯಾಲಯ ಕುಲಪತಿ ಡಾ.ಪರಮಶಿವಮೂರ್ತಿ ಅವರು, "ವಿದ್ಯಾರ್ಥಿಗಳಿಗೆ ಪಾಠ ಮಾಡುವುದಕ್ಕಷ್ಟೇ ಸಿಮೀತವಾಗದೆ, ಅದರ ಆಚೆಗೂ ಶಿಷ್ಯರ ಬದುಕು ರೂಪಿಸಿಕೊಳ್ಳಲು ನೆರವಾಗುತ್ತಿರುವ ಕೆಲವೇ ಶಿಕ್ಷಕರಲ್ಲಿ ನಾಡೋಜ ಬರಗೂರು ರಾಮಚಂದ್ರಪ್ಪ ಕೂಡಾ ಒಬ್ಬರು. ಬರಗೂರು ತನ್ನ ವಿದ್ಯಾರ್ಥಿಗಳು ಓದು ಮುಗಿಸಿದ

> "ನಾನು ಮಹಾತ್ಮಗಾಂಧಿಯ ಸಹಿಷ್ಣುತೆ, ಅಂಬೇಡ್ಕರ್ ಅವರ ಸಾಮಾಜಿಕ ಸಮಾನತೆ ಮತ್ತು ಕಾರ್ಲ್ ಮಾರ್ಕ್ಸ್ ಅವರ ಅರ್ಥಿಕ ಸಮಾನತೆಯಿಂದ ಸ್ಪೂರ್ತಿ ಪಡೆದವನು. ನೀಲಿ, ಹಸಿರು, ಕೆಂಪು ಒಂದಾದರೆ ಹೆಚ್ಚಿನ ಅನುಕೂಲ ಜನರಿಗೆ ಸಿಗಲಿದೆ ಎಂಬ ನಂಬಿಕೆ ನನ್ನದು"
>
> –ಬರಗೂರು ರಾಮಚಂದ್ರಪ್ಪ

ನಂತರವೂ, ಅವರ ಕಷ್ಟ, ಸುಖಃಗಳಿಗೆ ಸ್ಪಂದಿಸಿ, ಸರಿಯಾದ ಮಾರ್ಗದರ್ಶನ ನೀಡುವ ಮೂಲಕ ಹತ್ತಾರು ಸಾವಿರ ವಿದ್ಯಾರ್ಥಿಗಳ ಹೃದಯದಲ್ಲಿರುವ ಪ್ರೀತಿಯ ಮೇಸ್ಟು ಆಗಿದ್ದಾರೆಂಬುದಕ್ಕೆ ಇಂದಿನ ಕಾರ್ಯಕ್ರಮವೇ ಸಾಕ್ಷಿ. ಗ್ರಾಮೀಣ ಭಾಗದಿಂದ ಬಂದ ನನ್ನಂತಹ ಅನೇಕ ವಿದ್ಯಾರ್ಥಿಗಳಲ್ಲಿದ್ದ ಕೀಳಿರಿಮೆಯನ್ನು ಹೋಗಲಾಡಿಸಿ, ಅವರಲ್ಲಿ ಆತ್ಮಸ್ಥೈರ್ಯ ತುಂಬುವಲ್ಲಿ ಬರಗೂರು ಯಶಸ್ವಿಯಾಗಿದ್ದಾರೆ.

ಧ್ವನಿ ಇಲ್ಲದವರ ಧ್ವನಿಯಾಗಿ ಬರಗೂರು

ಬರಗೂರು ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಸುಂದರರಾಜ್ ಅರಸ್ ಮಾತನಾಡಿ, "ಬರಗೂರು ಧ್ವನಿ ಇಲ್ಲದವರ ಧ್ವನಿಯಾಗಿ ಕೆಲಸ ಮಾಡಿದವರು. ಕಳೆದ 38 ವರ್ಷಗಳಿಂದ ಅವರ ಹೆಜ್ಜೆಗಳನ್ನು ಅನುಸರಿಸುತ್ತಾ ಬಂದಿದ್ದೇನೆ. ಅವರು ಎಲ್ಲರ ನೋವಿಗೂ ಬೆಲೆಯಿದೆ ಎಂದು ತಿಳಿದವರು. ಅವರ ಕೈ, ಬಾಯಿ, ಮನಸ್ಸು, ಎಲ್ಲವನ್ನು ಶುದ್ಧವಾಗಿಟ್ಟುಕೊಂಡ ಸಂಸ್ಕಾರವಂತರು" ಎಂದರು.

ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್.ಸಿದ್ದಲಿಂಗಪ್ಪ ಮಾತನಾಡಿ, "ನನ್ನ ಗುರುಗಳಾಗಿ ನನ್ನನ್ನು ಸಾಕಷ್ಟು ತಿದ್ದಿ ತೀಡಿದವರು ರಾಮಚಂದ್ರಪ್ಪ ಅವರು. ವ್ಯವಸ್ಥೆ ಒಳಗೆ ಇರಲಿ, ಹೊರಗೆ ಇರಲಿ ತಾವು ನಂಬಿದ ಸಿದ್ದಾಂತದೊಂದಿಗೆ ರಾಜಿ ಮಾಡಿಕೊಂಡವರಲ್ಲ. ಅವರ ನೇತೃತ್ವದಲ್ಲಿ ನಡೆದ ಸಾಂಸ್ಕೃತಿಕ ನೀತಿ ಜಾರಿಗೆ ಬರಬೇಕು. ಹಾಗೆಯೇ ಶಾಸ್ತ್ರೀಯ ಸ್ಥಾನಮಾನದ ಅನುದಾನ ಬಳಕೆಗೆ ಸಂಬಂಧಿಸಿದಂತೆ ಸಮಿತಿ ರಚಿಸಿ, ಕೇಂದ್ರಕ್ಕೆ ಕಳುಹಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತುಮಕೂರು ವಿ.ವಿ. ಕುಲಪತಿ ಪ್ರೊ. ಎಂ.ವೆಂಕಟೇಶ್ವರಲು ಮಾತನಾಡಿ, "ಬರಗೂರರ ಅಜ್ಞಾತ ಅಭಿಮಾನಿಗಳಲ್ಲಿ ನಾನೂ ಒಬ್ಬ. ಅವರು ಇಡೀ ರಾಜ್ಯದ ಶಿಕ್ಷಕ ಸಮೂಹಕ್ಕೆ ಮಾದರಿ. ಕೇವಲ ಕ್ಲಾಸ್ ರೂಂಗೆ ಸಿಮೀತವಾಗದೆ, ವೇತನಕ್ಕೆ ಲೆಕ್ಕ ಇಡದೆ, ಶಿಷ್ಯ ಬಳಗವನ್ನು ಹುಟ್ಟು ಹಾಕಿದವರು. ನಾವು ಕೂಡ ಅವರಂತೆ ಬದುಕುವುದೇ ಅವರಿಗೆ ನೀಡುವ ನಿಜವಾದ ಗೌರವ" ಎಂದರು.

ಭಾಷಣ ಮಾಡಿದ ಕಲ್ಬುರ್ಗಿಯ ಸಹಾಯಕ ಪ್ರಾಧ್ಯಾಪಕರಾದ ಡಾ.ಅರುಣ ಜೋಳದ ಕೂಡ್ಲಿಗಿ, "ಬರಗೂರು ಅವರ ಇದುವರೆಗಿನ ಬರಹ, ಮಾತು ಮತ್ತು ಸಿನಿಮಾಗಳನ್ನು ಗಮನಿಸಿದರೆ, ಎಲ್ಲದರಲ್ಲಿಯೂ ಪ್ರಜಾಪ್ರಭುತ್ವ ಮತ್ತು ಸಮ ಸಮಾಜದ ತುಡಿತವನ್ನು ಕಾಣಬಹುದು. ಅಂಚಿನಿಂದ ಕೇಂದ್ರದವರೆಗಿನ ಪರಿಕಲ್ಪನೆ ಇದೆ. ಆದರೆ ಕ.ಸಾ.ಪ.ದ ಸಿದ್ದ ಮಾದರಿಯನ್ನು ಮುರಿದು ಬಂಡಾಯವೆನ್ನುವ ಹೊಸ ಮಾದರಿ ಹುಟ್ಟು ಹಾಕಿದ ಪರಿಣಾಮದಿಂದಾಗಿ, ಬರಗೂರರ ಬಂಡಾಯ ಸಾಹಿತ್ಯ ಹೆಚ್ಚು ಚರ್ಚೆಗೆ, ವಿಮರ್ಶೆಗೆ ಒಳಪಡಲಿಲ್ಲ ಎನಿಸುತ್ತಿದೆ. ಕಾಗೆಯ ಕಣ್ಣಿನಲ್ಲಿಯೂ ಕಾರುಣ್ಯವನ್ನು ಕಂಡವರು ಬರಗೂರು ಅವರು. ಹಾಗಾಗಿ ಬರಗೂರರ ಸಮಗ್ರ ಸಾಹಿತ್ಯವನ್ನು ಮರುವಿಮರ್ಶೆಗೆ ಒಳಪಡಿಸುವ ಕೆಲಸ ಆಗಬೇಕಾಗಿದೆ" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಚಿಂತಕ ಪ್ರೊ.ಕೆ.ದೊರೆರಾಜು ಮಾತನಾಡಿ, "ನಮ್ಮೊಡನೆ ಇರುವ ನಾಡಿನ ಸಾಕ್ಷಿ ಪ್ರಜ್ಞೆ ಬರಗೂರು ರಾಮಚಂದ್ರಪ್ಪ ಅವರಿಗೆ ತವರಿನ ಗೌರವ ಮಾಡಬೇಕೆಂಬುದು ನಮ್ಮಂತಹ ಅನೇಕರ ಬಹುದಿನದ ಕನಸು ಇಂದು ಡೇರಿ. ಬರಗೂರರ ಸಮಾನತೆ ಮತ್ತು ಪ್ರಜಾಪ್ರಭುತ್ವ ಎರಡು ವಿಷಯಗಳಲ್ಲಿ ಇರುವ ಜೀವಪರ ಸೆಲೆ ದೊಡ್ಡದು. ಮತಧರ್ಮ, ಜಾತಿಯ ಹೆಸರಿನಲ್ಲಿ ಕ್ರೌರ್ಯಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಇಂದಿನ ಕಾರ್ಯಕ್ರಮ ಪರ್ಯಾಯ ಆಲೋಚನಾ ದಾರಿಯೊಂದನ್ನು ತೋರಿಸಿದೆ. ಗಾಂಧಿ ಹುಟ್ಟಿದ ನಾಡು ಎನ್ನುತ್ತಲೇ ದೌರ್ಜನ್ಯ, ದಬ್ಬಾಳಿಕೆ ಮಿತಿ ಮೀರಿದ್ದು, ಬರಗೂರರ ಬರಹಗಳಲ್ಲಿನ ಮಾನವೀಯ ನೆಲೆಗಳು, ಇದರ ವಿರುದ್ಧ ಹೋರಾಡಲು ಹೊಸದಿಕ್ಕು ತೋರಿಸಲಿದೆ" ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ತುಮಕೂರು ವಿವಿ ಕುಲಸಚಿವೆ ಶ್ರೀಮತಿ ನಾಹಿದಾ ಜಮ್ಜ್, ಕರ್ನಾಟಕ ಲೇಖಕಿಯರ ಬಳಗದ ಜಿಲ್ಲಾಧ್ಯಕ್ಷೆ ಮಲ್ಲಿಕಾ ಬಸವರಾಜು, ಪತ್ರಕರ್ತ ಎಸ್.ನಾಗಣ್ಣ ಮಾತನಾಡಿದರು.

ಡಾ.ಲಕ್ಷ್ಮಿ ರಂಗಯ್ಯ, ಪ್ರೊ.ತಿಪ್ಪೇಸ್ವಾಮಿ, ಡಾ.ಪವನ ಗಂಗಾಧರ್, ಎ.ರಾಮಚಂದ್ರಪ್ಪ, ಹೆಚ್.ಗೋವಿಂದಯ್ಯ, ಆಶ್ವಥನಾರಾಯಣಗುಟ್ಟೆ, ಡಾ.ಶ್ರೀನಿವಾಸಪ್ಪ, ಡಾ.ಓ.ನಾಗರಾಜು, ಡಾ.ನಾಗಭೂಷಣ್ ಬಗ್ಗನಡು, ಡಾ.ಶಿವಣ್ಣ ತಿಮ್ಮಲಾಪುರ, ನಾಗೇಂದ್ರಪ್ಪ, ಆನಂತಮೂರ್ತಿ, ರಾಘವೇಂದ್ರ, ರಂಗಮ್ಮ ಹೊಡೆಕಲ್ಲು, ಹೆಚ್. ಗೋವಿಂದಯ್ಯ, ಮತ್ತಿತರರು ಉಪಸ್ಥಿತರಿದ್ದರು. ಸೈಯ್ಯದ್ ಮುಜೀಬ್ ರವರು ಎಲ್ಲರಿಗೂ ವಂದಿಸಿದರು.

ಭ್ರಷ್ಟಾಚಾರದ ಬಗ್ಗೆ ತನಿಖಾ ಬರಹಕ್ಕಾಗಿ ಬಸ್ತಾರ್ ಪತ್ರಕರ್ತನ ಹತ್ಯೆ– ತಕ್ಷಣ ಕ್ರಮ ಕೈಗೊಳ್ಳುವಂತೆ 4 ಪತ್ರಕರ್ತರ ಸಂಘಟನೆಗಳ ಆಗ್ರಹ

ಈ ವರ್ಷದ ಮೊದಲ ದಿನವೇ ಛತ್ತಿಸ್‌ಗಡದ ಬಸ್ತಾರ್‌ನಲ್ಲಿ ಅಲ್ಲಿಯ ಪತ್ರಕರ್ತ ಮುಕೇಶ್ ಚಂದ್ರಾಕರ್‌ರವರ ಬರ್ಬರ ಹತ್ಯೆಯನ್ನು ಪತ್ರಕರ್ತರ ಸಂಘಟನೆಗಳು ಬಲವಾಗಿ ಖಂಡಿಸಿವೆ. ರಾಷ್ಟ್ರೀಯ ಪತ್ರಕರ್ತರ ಮೈತ್ರಿಕೂಟ (ಎನ್‌ಎಜೆ), ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ), ಆಂಧ್ರಪ್ರದೇಶ ಕಾರ್ಯನಿರತ ಪತ್ರಕರ್ತರ ಒಕ್ಕೂಟ(ಎಪಿಡಬ್ಲ್ಯುಜೆಎಫ್) ಮತ್ತು ಕೇರಳ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಜನವರಿ 4ರಂದು ನೀಡಿರುವ 2025ರ ಮೊದಲ ಪತ್ರಿಕಾ ಹೇಳಿಕೆಯಲ್ಲಿ ಈ ಬಗ್ಗೆ ದುಃಖ ಮತ್ತು ಆಘಾತವನ್ನು ವ್ಯಕ್ತಪಡಿಸಿವೆ. ಈ ಹತ್ಯೆಯ ಬಗ್ಗೆ ಗಂಭೀರ ತನಿಖೆ ನಡೆಸಬೇಕು, ಮತ್ತು ಇದಕ್ಕೆ ಹೊಣೆಯಾದವರಿಗೆ ತ್ವರಿತವಾಗಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಈ ಸಂಘಟನೆಗಳು ಆಗ್ರಹಿಸಿವೆ.

ಬಸ್ತಾರ್‌ನ ಮುಕೇಶ್ ಚಂದ್ರಾಕರ್ ಎನ್‌ಡಿಟಿವಿ ಯ ಒಬ್ಬ ಯುವ ಸ್ಟ್ರಿಂಜರ್ ಆಗಿದ್ದರು, ಮತ್ತು ಬಸ್ತಾರ್ ಜಂಕ್ಷನ್ ಎಂಬ ತನ್ನದೇ ಆದ ಜನಪ್ರಿಯ ಯುಟ್ಯೂಬ್ ಚಾನಲ್ ನಡೆಸುತ್ತಿದ್ದರು. ಛತ್ತಿಸ್‌ಗಡ್‌ನ ಪತ್ರಕರ್ತರು ಹಲವು ಸವಾಲುಗಳನ್ನು ಎದುರಿಸುತ್ತಿದ್ದಾರೆ, ಮತ್ತೆ–ಮತ್ತೆ ಪ್ರಭುತ್ವದ ಸಂಸ್ಥೆಗಳು ಮತ್ತು ಮಾವೋವಾದಿ ಗುಂಪುಗಳ ಮಧ್ಯೆ ಸಿಲುಕಿಕೊಳ್ಳಬೇಕಾಗಿ ಬರುತ್ತಿದೆ. ರಕ್ಷಣೆಯ ಅಭಾವ ಮತ್ತು ಅತ್ಯಾಚಾರಗಳನ್ನು ನಿಲ್ಲಿಸುವ ಕಾರ್ಯಾಚರಣೆಗಳ ಕೊರತೆ ಮಾಧ್ಯಮ ವ್ಯಕ್ತಿಗಳನ್ನು ಅಪಾಯಗಳಿಗೆ ಈಡು ಮಾಡುತ್ತಿವೆ.

ಮುಕೇಶ್ ಚಂದ್ರಾಕರ್‌ರನ್ನು ಬಸ್ತಾರಿನಲ್ಲಿ ಒಂದು ರಸ್ತೆ ನಿರ್ಮಾಣದಲ್ಲಿ ಭ್ರಷ್ಟಾಚಾರ ಸುದ್ದಿಯನ್ನು ಅವರು ಪ್ರಕಟಿಸಿದ ನಂತರ ಹತ್ಯೆ ಮಾಡಲಾಗಿದೆ ಎಂದು ಹೇಳಲಾಗಿದೆ. ಅವರ ಹೆಣ ಒಬ್ಬ ಕಂಟ್ರಾಕ್ಟರನ ಜಮೀನಿನಲ್ಲಿ ಹೊಸದಾಗಿ ಸಿಮೆಂಟ್ ಮಾಡಿದ ಒಂದು ಸೆಪ್ಟಿಕ್ ಟ್ಯಾಂಕಿನಲ್ಲಿ ಸಿಕ್ಕಿತು. ಆದರೆ ಅವರ ವರದಿಗಳ ವ್ಯಾಪ್ತಿ ಮತ್ತು ವಿವಾದಗಳಿಂದ ಅಲ್ಲೋಲ ಕಲ್ಲೋಲವಾಗಿರುವ ಈ ರಾಜ್ಯದ ಪ್ರಶ್ನೆಗಳ ಮೇಲೆ ಅವರ ಟಿಪ್ಪಣಿಗಳ ಹಿನ್ನೆಲೆಯಲ್ಲಿ ಹತ್ಯೆಯ ಬಗ್ಗೆ ಒಂದು ಪೂರ್ಣ ಪ್ರಮಾಣದ ತನಿಖೆ ಅಗತ್ಯವಾಗಿದೆ ಎಂದು ಈ ಪತ್ರಕರ್ತ ಸಂಘಟನೆಗಳು ಹೇಳಿವೆ. ಮುಖ್ಯಮಂತ್ರಿ ವಿಷ್ಣುದೇವ್ ಕ್ರಮ ಕೈಗೊಳ್ಳುವ ಬಗ್ಗೆ ಹೇಳಿಕೆ ನೀಡಿರುವುದನ್ನು ಸ್ವಾಗತಿಸುತ್ತ, ಅದಕ್ಕೆ ಕಾಯುತ್ತಿದ್ದೇವೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಸಂತ್ರಸ್ತ ಕುಟುಂಬಗಳಿಗೆ ಪರಿಹಾರವನ್ನೂ ಕೊಡಬೇಕಾಗಿದೆ ಎಂದಿರುವ ಈ ನಾಲ್ಕು ಪತ್ರಕರ್ತರ ಸಂಘಟನೆಗಳು, 2014ರಿಂದ ಭಾರತದಲ್ಲಿ ಕನಿಷ್ಟ 28 ಪತ್ರಕರ್ತರ ಹತ್ಯೆಯಾಗಿದೆ ಎಂಬುದನ್ನು ನೆನಪಿಸಿವೆ.



ಹೆಚ್ಚಿನ ಸಂದರ್ಭಗಳಲ್ಲಿ ತನಿಖೆ ಮತ್ತು ವಿಚಾರಣೆ ಬಹಳ ಕೆಳಮಟ್ಟದ್ದಾಗಿದ್ದು, ಹತಾಶ ಕುಟುಂಬಗಳು ನ್ಯಾಯಾಲಯಗಳಲ್ಲಿ ವರ್ಷಾನುಗಟ್ಟಲೆ ಹೋರಾಟ ನಡೆಸಬೇಕಾಗಿದೆ ಎಂದು ಈ ಪತ್ರಕರ್ತರ ಸಂಘಟನೆಗಳು ಹೇಳಿವೆ.

ಅಗಲಿದ ನಾಯಕ ಜಿ.ಸಿ. ಬಯ್ಯಾರೆಡ್ಡಿ ಅವರಿಗೆ ಸಂಯುಕ್ತ ಹೋರಾಟ ಕರ್ನಾಟಕದ ಭಾವಪೂರ್ಣ ನುಡಿನಮನ



'ಸಂಯುಕ್ತ ಹೋರಾಟ ಕರ್ನಾಟಕ' ಸಂಯೋಜಕರು, ಕರ್ನಾಟಕ ಪ್ರಾಂತ ರೈತ ಸಂಘ(**KPRS**)ದ ರಾಜ್ಯ ಸಮಿತಿ ಅಧ್ಯಕ್ಷರೂ ಆಗಿದ್ದ ಜಿ.ಸಿ. ಬಯ್ಯಾರೆಡ್ಡಿ ಅವರಿಗೆ 'ಸಂಯುಕ್ತ ಹೋರಾಟ ಕರ್ನಾಟಕ' ಭಾವಪೂರ್ಣ ನುಡಿನಮನ ಸಲ್ಲಿಸಿತು.

ಜನವರಿ 11 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮೊದಲಿಗೆ ಮಾತಾನಾಡಿದ ನ್ಯಾಯಮೂರ್ತಿ ನಾಗಮೋಹನದಾಸ್ ಅವರು, ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದ ಜಿ.ಸಿ. ಬಯ್ಯಾರೆಡ್ಡಿ ಅವರು ಬಾಲ್ಯದಿಂದಲೂ ರೈತರ ಬದುಕಿನ ಕಷ್ಟಗಳನ್ನು ನೋಡುತ್ತಾ ಬಂದವರು. ವಿದ್ಯಾರ್ಥಿಯಾಗಿದ್ದಾಗ ಭಾರತ ವಿದ್ಯಾರ್ಥಿ ಪೆಡರೇಷನ್ (SFI) ನಲ್ಲಿ ಅವರ ಚಟುವಟಿಕೆಗಳನ್ನು ನಾನು ಹತ್ತಿರದಿಂದ ಗಮನಿಸಿದ್ದೇನೆ. ಆನಂತರವೂ ರೈತ ನಾಯಕರಾಗಿ ಅವರು ಅವಿರತವಾಗಿ ಶ್ರಮಿಸಿದ್ದಕ್ಕೂ ಸಾಕ್ಷಿಯಾಗಿರುವೆ. ಅವರೊಬ್ಬ ಸಿದ್ಧಾಂತಕ್ಕೆ ಬದ್ಧವಾಗಿ ಯಾವುದೇ ಆಸೆ ಅಮಿಷಕ್ಕೆ ಒಳಗಾಗದೇ ಕೊನೆಯ ಉಸಿರು ಇರುವವರೆಗೂ ಹೊರಾಡಿದ ಧೀಮಂತ ವ್ಯಕ್ತಿ. ಸಾರ್ವಜನಿಕ ಹೋರಾಟಗಳ ಜೊತೆಗೆ ತಮ್ಮ ಆನಾರೋಗ್ಯದ ವಿರುದ್ದವೂ ಸೆಣಸಿದರು. ಕೃತಕ ಆಕ್ಸಿಜನ್ ಪೂರೈಕೆ ಇಲ್ಲದೇ ಬದುಕಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಇದ್ದಾಗಲೂ ಸಾರ್ವಜನಿಕ ಹೋರಾಟವನ್ನು ಕೈಬಿಟ್ಟಿರಲಿಲ್ಲ. ಆಕ್ಸಿಜನ್ ಸಿಲಿಂಡರ್ ಅನ್ನು ಹೆಗಲ ಮೇಲೆ ಹಾಕಿಕೊಂಡೆ ಹೋರಾಟ, ಚರ್ಚೆ, ಮಾತುಕತೆಗಳಲ್ಲಿ ಭಾಗವಹಿಸಿ ರೈತರ ಹಿತಕ್ಕಾಗಿ ದುಡಿದರು. ಸಣ್ಣ ಪುಟ್ಟ ಸಮಸ್ಯೆಗಳನ್ನು ಮುಂದುಮಾಡಿ ಹೋರಾಟಕ್ಕೆ ಹಿಂದೆ ಸರಿಯುವವರ ನಡುವೆ ಇವರ ಮಾದರಿ ಹಾಗೂ ಆದರ್ಶದ ವ್ಯಕ್ತಿತ್ವ ಅಭಿನಂದನಾರ್ಹ ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರು ಹಾಗೂ ಶಾಸಕರಾದ ಬಿಆರ್ ಪಾಟೀಲ್ ಅವರು ಮಾತನಾಡಿ, ಜಿ.ಸಿ. ಬಯ್ಯಾರೆಡ್ಡಿಯವರು ಎಲ್ಲರನ್ನೂ ಒಳಗೊಳ್ಳುವ ವ್ಯಕ್ತಿತ್ವವನ್ನು ಹೊಂದಿದ್ದರು. ವಿವಿಧ ಸಿದ್ಧಾಂತ, ವೈಚಾರಿಕ ನಿಲುವುಗಳ ಭಿನ್ನ ಸಂಘಟನಾ ವಿಧಾನದ ರೈತ ಸಂಘಟನೆಗಳನ್ನು ಐಕ್ಯ ಹೋರಾಟಕ್ಕೆ ಅಣಿನೆರಸಿದರು. ರೈತ ಸಂಘಟನೆಗಳ ಜೊತೆ ಕಾರ್ಮಿಕ, ದಲಿತ, ಮಹಿಳಾ, ವಿದ್ಯಾರ್ಥಿ–ಯುವಜನ ಸಂಘಟನೆಗಳನ್ನು ತಂದು ವಿಶಾಲ ವೇದಿಕೆಯಾಗಿ 'ಸಂಯುಕ್ತ ಹೋರಾಟ ಕರ್ನಾಟಕ'ವನ್ನು ರೂಪಿಸುವಲ್ಲಿ ಅವರು ಮಹತ್ವದ ಹಾಗೂ ನಿರ್ಣಾಯಕ ಪಾತ್ರ ವಹಿಸಿದರು. ಐತಿಹಾಸಿಕ ದೆಹಲಿ ರೈತ ಹೋರಾಟದ ಎಲ್ಲಾ ಕರೆಗಳು ಕರ್ನಾಟಕದಲ್ಲಿ ದೊಡ್ಡ ಪ್ರಮಾಣದಲ್ಲಿ ಜಾರಿಗೊಳ್ಳಲು ಬಯ್ಯಾರೆಡ್ಡಿಯವರ ಮುತುವರ್ಜಿ ವಿಶೇಷ ಪಾತ್ರವಿತ್ತು ಎಂದರು.

ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿಯವರು ಮಾತನಾಡಿ, ಕರಾಳ ಕೃಷಿ ಕಾಯ್ದೆಗಳ ವಿರುದ್ಧದ ಐತಿಹಾಸಿಕ ದೆಹಲಿ ಹೋರಾಟಕ್ಕೆ ಬೆಂಬಲವಾಗಿ ಕರ್ನಾಟಕದಲ್ಲಿ ಮಹತ್ವದ ಮುಂಚೂಣಿ ಪಾತ್ರ ವಹಿಸಿದ ಜಿ.ಸಿ. ಬಯ್ಯಾರೆಡ್ಡಿ ಅವರ ಅನುಪಸ್ಥಿತಿ ರಾಜ್ಯ ರೈತ ಹಾಗೂ ಜನಪರ ಹೋರಾಟದಲ್ಲಿ ಬಹಳ ದೊಡ್ಡ ನಿರ್ವಾತವನ್ನು ಸೃಷ್ಟಿಸಿದೆ. ರದ್ದಾದ ಕರಾಳ ಕೃಷಿ ಕಾಯ್ದೆಗಳು ರಾಷ್ಟ್ರೀಯ ಕೃಷಿ ಮಾರುಕಟ್ಟೆ ಚೌಕಟ್ಟು ನೀತಿ ಹೆಸರಿನಲ್ಲಿ ಹಾಗೂ ಬಿಜೆಪಿ ಅಧಿಕಾರದಲ್ಲಿ ಇರುವ ವಿವಿಧ ರಾಜ್ಯಗಳ ಕೃಷಿ ಕಾಯ್ದೆಗಳ ಮೂಲಕ ಹಿಂಬಾಗಿಲಿನಿಂದ ಜಾರಿಗೊಳ್ಳುತ್ತಿವೆ. ರಾಜ್ಯದಲ್ಲಿ ಹಿಂದಿನ ಬಿಜೆಪಿ ಸರ್ಕಾರದ ಕರಾಳ ಕೃಷಿ ಕಾಯ್ದೆಗಳು ಈಗಿನ ಕಾಂಗ್ರೆಸ್ ಸರ್ಕಾರದಲ್ಲೂ ಮುಂದುವರೆಯುತ್ತಿವೆ. ರೈತ ಹೋರಾಟ ಮತ್ತೊಂದು ಹಂತದ ತೀವ್ರ ಚಳವಳಿಗೆ ಇಳಿಯುವ ಈ ಸಂದರ್ಭದಲ್ಲಿ ಜಿಸಿ ಬಯ್ಯಾರೆಡ್ಡಿ ಅವರ ಸ್ಥಾನ ತುಂಬುವುದು ಬಹಳ ಪ್ರಯಾಸಕರ ಎಂದು ಅಭಿಪ್ರಾಯ ಪಟ್ಟರು.



ಸಂಯುಕ್ತ ಹೋರಾಟದ ವಿವಿಧ ನಾಯಕರುಗಳಾದ ಬಡಗಲಪುರ ನಾಗೇಂದ್ರ, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ಯು. ಬಸವರಾಜು, ಅಬ್ಬಣಿ ಶಿವಪ್ಪ, ಭಗವಾನ್ ರೆಡ್ಡಿ, ಅಪ್ಪಣ್ಣ ,ಎಲ್ ಕಾಳಪ್ಪ, ಎಸ್ ಆರ್ ಹೀರೆಮಠ್ ,ದೇವಿ, ಕೆ ಮಹಾಂತೇಶ್, ಮೀನಾಕ್ಷಿ ಸುಂದರಂ, ಕುಮಾರ್ ಸಮತಲ, ಚಂದ್ರಪ್ಪ ಹೊಸ್ಕೇರಾ, ಡಿಹೆಚ್ ಪೂಜಾರ್, ಟಿ. ಯಶವಂತ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಪ್ರೊ ಟಿ.ಆರ್. ಚಂದ್ರಶೇಖರ್, ಹಾಪ್ ಕಾಮ್ಸ್ ಮಾಜಿ ಅಧ್ಯಕ್ಷ ಬಾಬು ರೆಡ್ಡಿ, ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಕಾರಹಳ್ಳಿ ಶ್ರೀನಿವಾಸ್, ರೇಷ್ಮೆ ಹಿತರಕ್ಷಣಾ ವೇದಿಕೆಯ ಮಳ್ಳೂರು ಶಿವಣ್ಣ, ಎಐಎಲ್ ಯು ಸಂಘಟನೆಯ ರಾಮಚಂದ್ರರೆಡ್ಡಿ, ಲೋಹಿಯವಾದಿ ಆಲಿಬಾಬಾ, ವಕೀಲ ವಿನಯ್ ಶ್ರೀನಿವಾಸ್ ಮುಂತಾದವರು ಮಾತಾನಾಡಿ ಜಿ.ಸಿ. ಬಯ್ಯಾರೆಡ್ಡಿ ರವರ ಒಡನಾಟವನ್ನು ನೆನಪಿಸಿಕೊಡರು.

ವರದಿ: ಟಿ.ಯಶವಂತ

ಬಸ್ ಪ್ರಯಾಣ ದರ ಹೆಚ್ಚಳ ಅನಿವಾರ್ಯವೇ.........

ಪುಟ 3 ರಿಂದ

2005ರಂದು ಪ್ರಾರಂಭಿಸಿತು. ರಸ್ತೆ ಸಾರಿಗೆ ಸಂಸ್ಥೆಗಳನ್ನು ಉತ್ತೇಜಿಸಲು ಈ ಯೋಜನೆಯ ಮೂಲಕ ಕೇಂದ್ರ ಸರ್ಕಾರ ಶೇ. 35 ಮತ್ತು ರಾಜ್ಯ ಸರ್ಕಾರ ಶೇ. 15ರಷ್ಟು ಅನುದಾನ ಕೊಡುತ್ತಿದ್ದವು. ಈ ಅನುದಾನದಿಂದ ಹೊಸ ಬಸ್ಸುಗಳ ಖರೀದಿ ಮಾಡಲಾಗಿತ್ತು. ನಗರಗಳಲ್ಲಿ ಹಲವು ಬಸ್ ನಿಲ್ದಾಣಗಳ ಸ್ಥಾಪನೆಯೂ ಸೇರಿದಂತೆ ಸಾರಿಗೆ ಮೂಲ ಸೌಕರ್ಯಗಳನ್ನು ಈ ಯೋಜನೆಯ ಅನುದಾನದ ನೆರವಿನಿಂದ ನಿರ್ಮಾಣ ಮಾಡಲಾಗಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ 2014ರಲ್ಲಿ ಜೆಎನ್‌ನರ್ಮ್ ಅನ್ನು ಮುಚ್ಚಿಹಾಕಿತು.

ಟೋಲ್ ಸುಲಿಗೆ

ಸಾರಿಗೆ ಸಂಸ್ಥೆಗಳಿಗೆ ಮತ್ತು ಪ್ರಯಾಣಿಕರಿಗೆ ರಸ್ತೆ ಟೋಲ್ ಮತ್ತೊಂದು ಹೊರೆಯಾಗಿದೆ. ಪ್ರತಿನಿತ್ಯ ಸಂಚರಿಸುವ ಬಸ್ಸುಗಳು ಲಕ್ಷಾಂತರ ರೂ.ಗಳನ್ನು ಟೋಲ್‌ಗಾಗಿ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರವು ಕೆಎಸ್‌ಆರ್‌ಟಿಸಿ ಬಸ್ಸುಗಳಿಗೆ ಟೋಲ್‌ಗಳಲ್ಲಿ ವಿನಾಯಿತಿ ನೀಡಿದರೆ ಪ್ರಯಾಣಿಕರಿಗೆ ಮತ್ತು ಸಾರಿಗೆ ಸಂಸ್ಥೆಗಳಿಗೆ ಒಂದಷ್ಟು ಹೊರೆ ಕಡಿಮೆಯಾಗುತ್ತದೆ. ಕಾಂಗ್ರೆಸ್ ಪಕ್ಷದ ನಾಯಕರು ಮತ್ತು ರಾಜ್ಯದ ಬಿಜೆಪಿ ನಾಯಕರು ಒಟ್ಟಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಿಗೆ ಟೋಲ್ ವಿನಾಯಿತಿ ಪಡೆಯಲು ಮುಂದಾಗಬೇಕಿದೆ.

ಮತ್ತೊಂದು ಕಾರಣ ಭ್ರಷ್ಟಾಚಾರ

ಸಾರಿಗೆ ನಿಗಮಗಳಲ್ಲಿನ ಖರೀದಿ ವ್ಯವಹಾರದಲ್ಲಿ ಅಧಿಕಾರಶಾಹಿ ಮತ್ತು ರಾಜಕಾರಣಿಗಳಿಂದ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಆದಾಯದಲ್ಲಿನ ಸೋರಿಕೆ ನಿಗಮಗಳಲ್ಲಿನ ನಷ್ಟಕ್ಕೆ ಮತ್ತೊಂದು ಕಾರಣ. ನಿಗಮಗಳು ಹೊಸ ಬಸ್ಸುಗಳ ಖರೀದಿ ಮಾಡುವಾಗ, ಯಾವುದೇ ಉಪಕರಣಗಳನ್ನು ಖರೀದಿಸುವಾಗ, ಮೂಲ ಸೌಕರ್ಯ ಕಟ್ಟಡಗಳ ನಿರ್ಮಾಣದ ಸಂದರ್ಭಗಳಲ್ಲಿ ಕಮಿಷನ್ ವ್ಯವಹಾರ ನಡೆಯುತ್ತದೆ. ಇದು ಒಂದೆಡೆ ಸಂಸ್ಥೆಗೆ ನಷ್ಟ ಉಂಟು ಮಾಡಿದರೆ, ಮತ್ತೊಂದೆಡೆ ಕಳಪೆ ಗುಣಮಟ್ಟದ ಬಸ್ಸುಗಳು/ಉಪಕರಣಗಳ ಖರೀದಿಗೆ ಮತ್ತು ಕಳಪೆ ಗುಣಮಟ್ಟದ ನಿರ್ಮಾಣಗಳಿಗೆ ಅನುವು ಮಾಡಿಕೊಡುತ್ತದೆ.

ಗುಜರಿ ಸೇರಿದ ಟಾಟಾ ಮಾರ್ಕೊಪೋಲೊ ಬಸ್‌ಗಳು

ಉದಾಹರಣೆಗೆ, ಬಿಜೆಪಿ ಸರ್ಕಾರದಲ್ಲಿ ಆರ್.ಆಶೋಕ ಸಾರಿಗೆ ಮಂತ್ರಿಯಾಗಿದ್ದಾಗ, 2008ರಲ್ಲಿ ಟಾಟಾ ಮೋಟಾರ್ಸ್ ಮತ್ತು ಬ್ರೆಜಿಲ್‌ನ ಮಾರ್ಕೊಪೋಲೊ ನಡುವಿನ ಜಂಟಿ ಉದ್ಯಮದಿಂದ ನಿರ್ಮಿಸಲಾದ ಮಾರ್ಕೊಪೋಲೊ ಬಸ್ಸುಗಳನ್ನು ತಲಾ 35 ಲಕ್ಷ ರೂ. ಬೆಲೆಯಲ್ಲಿ JNNURM ಮೂಲಕ ಖರೀದಿಸಲಾಯಿತು. ಈ ಬಸ್ಸುಗಳು 7 ವರ್ಷಗಳ ಅವಧಿಯಲ್ಲಿ ಸಾರಿಗೆ ಸಂಸ್ಥೆಗಳಿಗೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟುಮಾಡಿದ ನಂತರ 2015ರಲ್ಲಿ ಗುಜರಿ ಸೇರಿದವು. ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿಗೆ ತಿಂಗಳಿಗೆ 1.5 ಕೋಟಿ ರೂಪಾಯಿಗಳ ನಷ್ಟವನ್ನು ತಡೆಯಲು ಟಾಟಾ ಮಾರ್ಕೊಪೋಲೊ ಬಸ್ಸುಳನ್ನು ರದ್ದುಗೊಳಿಸಲು ಅನುಮತಿ ಕೋರಿ ಬಿಎಂಟಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತು. ಈ ಪ್ರಸ್ತಾವನೆಗೆ ರಾಜ್ಯ ಸಚಿವ ಸಂಪುಟ 2015ರ ಜನವರಿಯಲ್ಲಿ ಒಪ್ಪಿಗೆ ನೀಡಿತು. ಬೆಂಗಳೂರಿನಲ್ಲಿ 98, ಮೈಸೂರಿನಲ್ಲಿ 44 ಮಾರ್ಕೊಪೋಲೊ ಬಸ್ಸುಗಳು ಕಾರ್ಯನಿರ್ವಹಿಸುತ್ತಿದ್ದವು.

"ಹಿಂದಿನ ಬಿಜೆಪಿ ಸರ್ಕಾರವು 2008ರಲ್ಲಿ ನರ್ಮ್ ಅಡಿಯಲ್ಲಿ ಈ ಬಸ್ಸುಗಳನ್ನು ಖರೀದಿಸಿದ ಹಿಂದಿನ ಕಾರಣಗಳು ಮತ್ತು ಉದ್ದೇಶಗಳ ಬಗ್ಗೆ ಇಲಾಖಾ ತನಿಖೆ ನಡೆಸಲು ನಿರ್ಧರಿಸಲಾಗಿದೆ. ತನಿಖೆಯು ಸತ್ಯವನ್ನು ಬಹಿರಂಗಪಡಿಸುತ್ತದೆ ಮತ್ತು ನಾವು ಯಾವುದೇ ತಪ್ಪಿತಸ್ಥ ಅಧಿಕಾರಿಯನ್ನು ಬಿಡುವುದಿಲ್ಲ" ಎಂದು ಅಂದಿನ ಕಾನೂನು ಸಚಿವ ಟಿ.ಬಿ. ಜಯಚಂದ್ರ ಸಂಪುಟ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದ್ದರು.

“ಸಾರಿಗೆ ಸಚಿವರು ಈ ನಿಗಮಗಳ ಅಧ್ಯಕ್ಷರು ಮಾತ್ರ. ಅವರು ತಾಂತ್ರಿಕ ತಜ್ಞರಾಗುವುದಿಲ್ಲ. ತಜ್ಞರ ವರದಿಗಳ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ. ಹೀಗಾಗಿ ಸಚಿವರನ್ನು ದೂರುವುದು ಸರಿಯಲ್ಲ” ಎಂದು ಹೇಳುವ ಮೂಲಕ, ದೋಷಪೂರಿತ ಟಾಟಾ ಮಾರ್ಕೊಪೋಲೊ ಬಸ್ಸುಗಳ ಖರೀದಿಯಲ್ಲಿ ಆರ್.ಅಶೋಕ ಭಾಗಿಯಾಗಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಆರ್. ಅಶೋಕ ಅವರ ರಕ್ಷಣೆಗೆ ನಿಂತರು. ಆದರೆ, ಇದಕ್ಕೆ ಕಾರಣರಾದ ಉಳಿದವರ ವಿರುದ್ದವಾದರೂ ಇದುವರೆಗೂ ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಾಗಲೀ, ಅವರಿಂದ ನಷ್ಟ ತುಂಬಿಸಿಕೊಳ್ಳುವ ಪ್ರಯತ್ನವಾಗಲೀ ನಡೆದಿಲ್ಲ. ಈ ನಷ್ಟದ ಹೊರೆಯನ್ನು ಸಾರಿಗೆ ನಿಗಮಗಳು ಮತ್ತು ಜನಸಾಮಾನ್ಯರು ಹೊರಬೇಕಾಗಿದೆ.

ಒಟ್ಟಾರೆ ಹೇಳುವುದಾದರೆ, ತನ್ನ ಪ್ರಜೆಗಳಿಗೆ ಕೈಗೆಟಕುವ ದರದಲ್ಲಿ ಉತ್ತಮ ಸೌಕರ್ಯವುಳ್ಳ ಪ್ರಯಾಣ ಸೌಲಭ್ಯ ಒದಗಿಸಲು ಪ್ರಭುತ್ವಕ್ಕೆ ಖಂಡಿತಾ ಸಾಧ್ಯವಿದೆ. ಇದು ಜನರ ಹಕ್ಕೂ ಕೂಡಾ ಆಗಿದೆ. ಆದರೆ, ಪ್ರಭುತ್ವವು ತನ್ನ ಈ ಜವಾಬ್ದಾರಿಯಿಂದ ಹೊರಬರುವಂತೆ ಮಾಡಲು ಇಂದಿನ ಆಳುವವರು ಮುಂದಾಗಿದ್ದಾರೆ. ಪ್ರಜೆಗಳಿಗೆ ಅತ್ಯಗತ್ಯವಾದ ಸಾರಿಗೆ ಸೌಲಭ್ಯ, ಮೂಲ ಸೌಕರ್ಯಗಳೂ ಸೇರಿದಂತೆ ಎಲ್ಲವನ್ನೂ ಖಾಸಗಿಯವರ ತೆಕ್ಕೆಗೆ ಹಾಕಲು, ಆ ಮೂಲಕ ಎಲ್ಲವನ್ನೂ ಮುಕ್ತಮಾರುಕಟ್ಟೆಗೆ ತೆರೆದಿಡಲು ಮುಂದಾಗಿದ್ದಾರೆ. ಮುಕ್ತ ಆರ್ಥಿಕ ನೀತಿಗಳ ವಿರುದ್ದ ಧ್ವನಿ ಎತ್ತುವ ಮೂಲಕ ನಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಬೇಕಾಗಿದೆ.

ಭಾರತದಲ್ಲಿ, ಕೆಲವೇ ಕೆಲವರ ಕೈಯಲ್ಲಿ ಸಂಪತ್ತಿನ ಶೇಖರಣೆಯಾಗಿ, ಕೇಂದ್ರೀಕರಣ ಗೊಂಡಿರುವುದು ಎದ್ದು ಕಾಣುತ್ತಿದೆ. ಅಂತಹ ಶ್ರೀಮಂತ ಕುಳಗಳ ಸಂಖ್ಯೆ ಮತ್ತು ಪರಿಮಾಣದ ಬೆಳವಣಿಗೆಯನ್ನು ಬೂರ್ಜ್ವಾ ಮಾಧ್ಯಮಗಳು ರಾಷ್ಟ್ರೀಯ ಹೆಮ್ಮೆಯ ವಿಷಯ ಎಂಬುದಾಗಿ ಬಿಂಬಿಸುತ್ತಿವೆ. ಆದರೆ, ಅದೇ ಸಂದರ್ಭದಲ್ಲಿ ಮತ್ತೊಂದೆಡೆ ಜನಸಾಮಾನ್ಯರ ಆದಾಯ ಮತ್ತು ಬಳಕೆಯ ಮಟ್ಟಗಳು ತುಂಬಾ ವೇಗವಾಗಿ ಕುಗ್ಗುತ್ತಿವೆ. ಇಂತಹ ಕೊಳಕು ವಿದ್ಯಮಾನವನ್ನು ಮೋದಿ ಮತ್ತು ಅವರ ಕೂಟದವರಿಂದ, ಇದೇ ದೇಶದ ಆರ್ಥಿಕ ಬೆಳವಣಿಗೆ ಎಂದು ಪ್ರತಿಬಿಂಬಿಸಲಾಗುತ್ತಿದೆ. ಇದೊಂದು ಶೋಚನೀಯ ವಿಪರ್ಯಾಸವಲ್ಲದೆ ಮತ್ತೇನು ಅಲ್ಲ. ಕಾರ್ಮಿಕರು ಮತ್ತು ರೈತರ ಹೆಚ್ಚುತ್ತಿರುವ ಸಂಕಷ್ಟವನ್ನು 'ವೇಗದ ಆರ್ಥಿಕ ಬೆಳವಣಿಗೆ'ಯನ್ನು ಸಾಧಿಸಲು ರೈತರು– ಕಾರ್ಮಿಕರು ಅದಕ್ಕನುಗುಣವಾಗಿ 'ಅಗತ್ಯವಾದ ತ್ಯಾಗ'ಮಾಡಲು ಸಿದ್ಧರಿರಬೇಕು ಎಂದು ಹೇಳಲಾಗುತ್ತದೆ.

ದೊಡ್ಡ ಏಕಸ್ವಾಮ್ಯದ–ಪರ ಭಕ್ಷಕ ಬಂಡವಾಳಶಾಹಿ ಹಿಡಿತಕ್ಕೆ ಸಿಕ್ಕಿಕೊಂಡಿರುವ ಭಾರತ

ನಾಗರಾಜ ನಂಜುಂಡಯ್ಯ

ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದಲ್ಲಿ ಶತಕೋಟ್ಯಾಧಿಪತಿಗಳ (ಬಿಲಿಯನರ್‌ಗಳ) ಸಂಖ್ಯೆ ಹೆಚ್ಚುತ್ತಿದೆ. ಭಾರತವು 2024ರಲ್ಲಿ ಪ್ರತಿ 5 ದಿನಗಳಿಗೆ ಒಬ್ಬ ಬಿಲಿಯನರ್ ಅನ್ನು ಸೃಷ್ಟಿಸಿ ಗುಂಪಿಗೆ ಸೇರಿಸುತ್ತಿದೆ ಎಂದು ಅಂಕಿಅಂಶಗಳು ಪ್ರಸ್ತುತ ಪಡಿಸುತ್ತದೆ. ಇದರಂತೆ 2024ರಲ್ಲಿ ಭಾರತವು 185 ಬಿಲಿಯನರ್‌ಗಳನ್ನು ಹೊಂದಿದ್ದು, ಇದು ವಿಶ್ವದ ಮೂರನೇ ಅತಿ ಹೆಚ್ಚು ಬಿಲಿಯನರ್‌ಗಳನ್ನು ಸೃಷ್ಟಿಸಲು ಸಾಧ್ಯವಾಗಿದೆ ಎಂದು ಗೋಧಿ ಮಾಧ್ಯಮಗಳು ಕೊಚ್ಚಿಕೊಳ್ಳುತ್ತವೆ. ಇದು 2015 ರಿಂದ ಶೇ. 123ರಷ್ಟು ಹೆಚ್ಚಳವಾಗಿದೆ. ಕಳೆದ ವರ್ಷ ಭಾರತದಲ್ಲಿ ಈ ಶತಕೋಟ್ಯಾಧಿಪತಿಗಳ ನಿವ್ವಳ ಮೌಲ್ಯವು ಶೇ.42.1ರಷ್ಟು ಏರಿಕೆಯಾಗಿ 905.6 ಶತಕೋಟಿ ಡಾಲರ್‌ಗೆ ತಲುಪಿದೆ ಎಂದು ಯುನೈಟೆಡ್ ಬ್ಯಾಂಕ್ ಆಫ್ ಸ್ವಿಟ್ಜರ್ಲೆಂಡ್ (UBS)ನ ಇತ್ತೀಚಿನ ಬಿಲಿಯನರ್ ಮಹತ್ವಾಕಾಂಕ್ಷೆಗಳ ಅಧ್ಯಯನದಲ್ಲಿ ವರದಿ ಮಾಡಲಾಗಿದೆ. ಈ 185 ಕೋಟಾಧಿಪತಿಗಳ ಸಂಪತ್ತು ಹೆಚ್ಚು ಕಡಿಮೆ 2024ರ ಬಜೆಟ್ ಮೌಲ್ಯಕ್ಕೆ ಸಮನಾಗಿದೆ. ಈ ಅಧ್ಯಯನವು ಪ್ರಸ್ತುತ 10ನೇ ವರ್ಷದಲ್ಲಿದ್ದು, ಮುಂದಿನ ದಶಕದಲ್ಲಿ ಭಾರತವು ತನ್ನ ಬಿಲಿಯನರ್ ಉದ್ಯಮಿಗಳ ಸಂಖ್ಯೆಯಲ್ಲಿ "ಗಮನಾರ್ಹ" ಏರಿಕೆಗೆ ಸಾಕ್ಷಿಯಾಗಲಿದೆ ಎಂದು ಅಂದಾಜಿಸಿದೆ. ಹೀಗಾಗಿ "ಭಾರತದ ಆಧುನಿಕ ಬೂರ್ಜ್ವಾ ನೇತೃತ್ವದ ಬಿಲಿಯನರ್ ರಾಜ್ ಈಗ ವಸಾಹತುಶಾಹಿ ಶಕ್ತಿಗಳ ನೇತೃತ್ವದ "ಬ್ರಿಟಿಷ್ ರಾಜ್" ಗಿಂತ ಹೆಚ್ಚು ಅಸಮಾನವಾಗಿದೆ ಎನ್ನಬಹುದು.

ಭಾರತದ ಆರ್ಥಿಕತೆಯ ವೇಗದ ಬೆಳವಣಿಗೆಯ ವಿಶಿಷ್ಟ ಲಕ್ಷಣವೆಂದರೆ, ಪ್ರಸ್ತುತ ದೇಶದ ದೊಡ್ಡ ಏಕಸ್ವಾಮ್ಯಗಳ ಸಂಪತ್ತು ವೇಗವಾಗಿ ಕ್ರೋಢೀಕರಣವಾಗುತ್ತಿರುವುದು. ಇದರಿಂದಾಗಿ, ನೈಜ ವೇತನದ ಕುಸಿತ ಮತ್ತು ಕಾರ್ಮಿಕರು ಮತ್ತು ರೈತರ ಜೀವನೋಪಾಯವು ಹೆಚ್ಚಿನ ಅಭದ್ರತೆಗೆ ಒಳಗೊಂಡಿರುವುದು. ದೊಡ್ಡ ಸಂಖ್ಯೆಯ ಸಣ್ಣ ಮತ್ತು ಅತಿಸಣ್ಣ ಉದ್ಯಮಗಳ ವಿನಾಶದಿಂದ ಇದನ್ನು ಸಾಧಿಸಲಾಗಿದೆ ಮತ್ತು ಈ ಮಾರ್ಗವನ್ನು ಅನುಸರಿಸಿದ ಕಾರಣ, ಲಕ್ಷಾಂತರ ಸ್ವಯಂ ಉದ್ಯೋಗಿ ತಯಾರಕರು ಮತ್ತು ಚಿಲ್ಲರೆ ವ್ಯಾಪಾರಿಗಳ ಸಣ್ಣ ಉತ್ಪಾದನೆಯನ್ನು ಕೂಡಾ ಈ ಪರಭಕ್ಷಕ ಬಂಡವಾಳಶಾಹಿ ನಾಶಪಡಿಸಿದೆ.

5 ದೊಡ್ಡ ವ್ಯಾಪಾರ ಕುಳಗಳು 40 ಕ್ಷೇತ್ರಗಳಲ್ಲಿ ಏಕಸ್ವಾಮ್ಯ

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ)ದ ಮಾಜಿ ಡೆಪ್ಯೂಟಿ ಗವರ್ನರ್ ಡಾ.ವಿರಾಲ್ ಆಚಾರ್ಯರ ಹೇಳಿಕೆಯಂತೆ, 5 ದೊಡ್ಡ ಉದ್ಯಮ ಸಂಸ್ಥೆಗಳಾದ ಮುಖೇಶ್ ಅಂಬಾನಿಯ ರಿಲಯನ್ಸ್ ಗ್ರೂಪ್, ಗೌತಮ್ ಅದಾನಿ ಅವರ ಅದಾನಿ ಗ್ರೂಪ್, ಟಾಟಾ ಗ್ರೂಪ್, ಆದಿತ್ಯ ಬಿರ್ಲಾ ಗ್ರೂಪ್ ಮತ್ತು ಟೆಲಿಕಾಂನ ಮಿತ್ತಲ್ ಭಾರ್ತಿ ಈ 5 ದೊಡ್ಡ ವ್ಯಾಪಾರ ಕುಳಗಳು, ಸಿಮೆಂಟ್ ಉದ್ಯಮ ಸೇರಿದಂತೆ 40 ಕ್ಷೇತ್ರಗಳಲ್ಲಿ ಏಕಸ್ವಾಮ್ಯವನ್ನು ನಿರ್ಮಿಸುತ್ತಿದ್ದಾರೆ. ಬೆಳೆಯುತ್ತಿರುವ ಈ 5 ಏಕಸ್ವಾಮ್ಯ ಕುಳಗಳು ಭಾರತದ ಅಸ್ಥಿರ ಆರ್ಥಿಕತೆಗೆ, ನಿರುದ್ಯೋಗ ಬಿಕ್ಕಟ್ಟಿಗೆ ಮತ್ತು ಹೆಚ್ಚಿನ ಹಣದುಬ್ಬರಕ್ಕೆ ಸಂಬಂಧ ಹೊಂದಿವೆ ಎಂದು ಅವರು ಪ್ರಸ್ತುತ ಪಡಿಸುತ್ತಾರೆ. 2015ರಲ್ಲಿ, ಒಬ್ಬ ಸಾಮಾನ್ಯ ವ್ಯಕ್ತಿ 100 ರೂ.ಗಳನ್ನು ಸರಕುಗಳಿಗೆ ಖರ್ಚು ಮಾಡುತ್ತಿದ್ದಾಗ, ವ್ಯಾಪಾರಸ್ಥ ಮಾಲೀಕರಿಗೆ 18 ರೂ. ಲಾಭವಾಗಿ ಬರುತ್ತಿತ್ತು. 2021ರಲ್ಲಿ 36 ರೂ. ಲಾಭ ಪಡೆಯುತ್ತಿದ್ದಾರೆ. ಇದರರ್ಥ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರು, ರೈತರು ಮತ್ತು ಜನಸಾಮಾನ್ಯರನ್ನು ಸುಲಿಗೆ ಮಾಡಲಾಗುತ್ತಿದೆ.

ಡಾ.ವಿರಾಲ್ ಆಚಾರ್ಯ ಅವರ ಅಭಿಪ್ರಾಯದಂತೆ, ಭಾರತದಲ್ಲಿನ 5 ದೊಡ್ಡ ಖಾಸಗಿ ವ್ಯಾಪಾರ ಗುಂಪುಗಳು ನಿರಂತರವಾಗಿ ಹಣದುಬ್ಬರದ ತೀವ್ರ ಹೆಚ್ಚಳಕ್ಕೆ ಪ್ರಮುಖ ಕೊಡುಗೆ ನೀಡುತ್ತಿದ್ದಾರೆ. ಆರ್ಥಿಕತೆಯಲ್ಲಿ ಇವರ ಪ್ರಾಬಲ್ಯ ಸ್ಪಷ್ಟವಾಗಿದೆ. ಬಹಳಷ್ಟು ಆಸ್ತಿಗಳನ್ನು ಸಂಗ್ರಹಿಸಿವೆ. ಕಳೆದ 30 ವರ್ಷಗಳಲ್ಲಿ ದೇಶದಲ್ಲಿ ಹಣಕಾಸೇತರ ಆಸ್ತಿಗಳ ಪಾಲನ್ನು ದ್ವಿಗುಣಗೊಳಿಸಿಕೊಂಡಿವೆ. ಜೊತೆಗೆ, 2011ರಿಂದ ವಿಲೀನ ಮತ್ತು ಸ್ವಾಧೀನದ ಒಪ್ಪಂದಗಳ ತಮ್ಮ ಪಾಲನ್ನು ದ್ವಿಗುಣಗೊಳಿಸಿಕೊಂಡಿವೆ. ಅವರ ಆರ್ಥಿಕ ವಿಸ್ತರಣೆಯು ಅಗಲ ಮತ್ತು ಆಳದಲ್ಲಿ ವಿಪರೀತವಾಗಿ ವೃದ್ಧಿ ಕಂಡುಬರುತ್ತದೆ. ಅವರ ಏರಿಕೆಯು ನಂತರದ ದೊಡ್ಡ ಐದು ಕಂಪನಿಗಳು (ಅಂದರೆ, ಬಿಗ್ 6 ರಿಂದ 10) ಆಯಾ ಷೇರುಗಳಲ್ಲಿನ ಸಾಪೇಕ್ಷ ಕುಸಿತದೊಂದಿಗೆ ಹೊಂದಿಕೆಯಾಗುತ್ತದೆ. (ಅಂದರೆ, ಇವರ ಲಾಭ ಹೆಚ್ಚಿದಷ್ಟು, ಇತರೆ 5 ಕಂಪನಿಗಳ ಶೇರುಗಳು ಕುಸಿತಗೊಳ್ಳುತ್ತವೆ)

ಬೆಲೆಗಳನ್ನು ಹೆಚ್ಚಿಸುವ ಮೂಲಕ ಜನರನ್ನು ಹಿಂಡುತ್ತವೆ.

ಸಂಪತ್ತು ನಿರ್ವಹಣಾ ಸಂಸ್ಥೆ ಮಾರ್ಸೆಲಸ್‌ನ ವರದಿಯ ಪ್ರಕಾರ, ಅಗ್ರ 20 ಲಾಭ ಉತ್ಪಾದಕರು ಸಂಪೂರ್ಣ ಕಾರ್ಪೊರೇಟ್ ಲಾಭದ ಶೇ. 80ರಷ್ಟು ಗಳಿಸುತ್ತಾರೆ. ಇದು ಒಂದು ದಶಕದ ಹಿಂದಿನ ಪಾಲಿನ ಎರಡು ಪಟ್ಟು. ಇದು ಅವರ ಕಂಪನಿಗಳ ಲಾಭದ ಹೆಚ್ಚುತ್ತಿರುವ ಸಾಂದ್ರತೆಯನ್ನು ಪ್ರತಿಬಿಂಬಿಸುತ್ತದೆ. ಸಂಪತ್ತು ಸೃಷ್ಟಿಯ ವಿಷಯವೂ ಇದೇ ಆಗಿದೆ. NIFTY (ನಿಫ್ಟಿ) ಸೂಚ್ಯಂಕದ ಮೌಲ್ಯದ ಅಳತೆಯ ಪ್ರಕಾರ, ಕೇವಲ 20 ಕಂಪನಿಗಳಿಂದ ಷೇರು–ಮಾರುಕಟ್ಟೆಯಲ್ಲಿ ಇವರ ಸಂಪತ್ತಿನ ಸುಮಾರು ಶೇ.80ರಷ್ಟು ಹೆಚ್ಚಳವಾಗಿರುವುದನ್ನು ತೋರಿಸುತ್ತದೆ. ಶೇರು ಮಾರುಕಟ್ಟೆಯಲ್ಲಿಯು ಈ 5 ಕಂಪನಿಗಳ ಶಕ್ತಿ ಸಾಮರ್ಥ್ಯಗಳು ಕೇಂದ್ರೀಕೃತವಾಗುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದು ಪ್ರತಿಯಾಗಿ ಶೇರುಗಳ ಬೆಲೆಯ ಶಕ್ತಿಗೆ ಕಾರಣವಾಗುತ್ತದೆ. ಬೇಡಿಕೆ ಹೆಚ್ಚಾದಾಗ, ಈ ಏಕಸ್ವಾಮ್ಯಗಳ ದೈತ್ಯರು ಬೆಲೆಗಳನ್ನು ಹೆಚ್ಚಿಸುವ ಮೂಲಕ ಜನರನ್ನು ಹಿಂಡುತ್ತವೆ. 1992–93ರಲ್ಲಿ ಅಗ್ರ 20 ಕಂಪನಿಗಳು ಒಟ್ಟು ಲಾಭದಲ್ಲಿ ಕೇವಲ ಶೇ.15 ರಷ್ಟನ್ನು ಹೊಂದಿದ್ದವು. ಇದನ್ನು ಗಮನಿಸಿದಾಗ, ದೇಶದಲ್ಲಿ ಇವರ ಕಂಪನಿಗಳ ಏಕಾಗ್ರತೆ ಮತ್ತು ಏಕಸ್ವಾಮ್ಯದ ವೇಗವು ಎಷ್ಟು ಅಗಲ ಮತ್ತು ಆಳವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಇತರೆ ಶೇ.85ರಷ್ಟು ವಲಯಗಳನ್ನು ಮೂಲೆಗುಂಪು ಮಾಡುತ್ತವೆ

ಹೆಚ್ಚಿನ ವಲಯಗಳಲ್ಲಿ ಅಗ್ರ ಎರಡು ಕಂಪನಿಗಳು ಲಾಭವನ್ನು ಬಾಚಿಕೊಂಡು ಇತರೆ ಶೇ.85ರಷ್ಟು ವಲಯಗಳನ್ನು ಮೂಲೆಗುಂಪು ಮಾಡುತ್ತವೆ. ಉದಾಹರಣೆಗೆ, ಶಿಶು ಆಹಾರ ಮಾರುಕಟ್ಟೆಯಲ್ಲಿ ನೆಸ್ಲೆ ಶೇ.85ರಷ್ಟು ಪಾಲು ಹೊಂದಿದೆ. ITC ಸಿಗರೇಟ್‌ನಲ್ಲಿ 77 ಪ್ರತಿಶತ, ಪಿಡಿಲೈಟ್ ಅಂಟು ವಿಭಾಗದಲ್ಲಿ 70 ಪ್ರತಿಶತ, ಬಜಾಜ್ ಕಾರ್ಪ್ ಹೇರ್ ಆಯಿಲ್‌ನಲ್ಲಿ 60 ಪ್ರತಿಶತ ಮತ್ತು ಏಷ್ಯನ್ ಪೇಂಟ್ಸ್ ಮಾರುಕಟ್ಟೆಯಲ್ಲಿ ಶೇ.40ರಷ್ಟು ಪಾಲನ್ನು ಹೊಂದಿವೆ.

ಮೊಬೈಲ್ ಡೇಟಾ ಮತ್ತು ಟೆಲಿಫೋನ್‌ನಲ್ಲಿ ಅಂಬಾನಿಯ ರಿಲಯನ್ಸ್ ಜಿಯೋ ಮತ್ತು ಏರ್‌ಟೆಲ್‌ನ ಏಕಸ್ವಾಮ್ಯದ ಹಾನಿಕಾರಕ ಪರಿಣಾಮಗಳನ್ನು ಈಗಾಗಲೇ ದೇಶದ ಜನರು ಅನುಭವಿಸುತ್ತಿದ್ದಾರೆ. ಇದೇ ರೀತಿಯ ಏಕಸ್ವಾಮ್ಯವು ಚಿಲ್ಲರೆ ಮತ್ತು ಬ್ಯಾಂಕಿಂಗ್ ಅಲ್ಲದ ಹಣಕಾಸು ವಲಯಗಳಲ್ಲಿ ಹೊರಹೊಮ್ಮುತ್ತಿದೆ.

ಕಾಲು ಭಾಗದಷ್ಟು ಅದಾನಿ ಸಮೂಹದಿಂದ ನಡೆಸಲ್ಪಡುವ ವಿಮಾನ ನಿಲ್ದಾಣಗಳಿಂದ ವಾಣಿಜ್ಯ ವಿಮಾನ ಸಂಚಾರ ನಿರ್ವಹಿಸಲ್ಪಡುತ್ತದೆ. ಈ ಗುಂಪು ದೇಶದ ಕೆಲವು ದೊಡ್ಡ ಸಮುದ್ರ ಮತ್ತು ವಾಯು ಬಂದರುಗಳನ್ನೂ ಸಹ ಹೊಂದಿದೆ. ದೇಶದ ಸುಮಾರು ಶೇ.30ರಷ್ಟು ಆಹಾರಧಾನ್ಯ ಸಂಗ್ರಹವನ್ನು ಅದಾನಿ ಗುಂಪಿನ ಗೋದಾಮುಗಳಲ್ಲಿ ಸಂಗ್ರಹಿಸಲಾಗಿದೆ.

ಈಗ ಏಕಸ್ವಾಮ್ಯದ ಈ ಪ್ರವೃತ್ತಿಯು ಹೆಚ್ಚು ವಿಭಜಿತ ವಲಯಗಳಿಗೆ ಹರಡುತ್ತಿದೆ. ಅಲ್ಲಿ ಇದುವರೆಗೆ ಸಣ್ಣ ಮತ್ತು ಮಧ್ಯಮ ಘಟಕಗಳು ಹೆಚ್ಚಿನ ಮಾರುಕಟ್ಟೆ ಮತ್ತು ಲಾಭದ ಪಾಲನ್ನು ಹೊಂದಿದ್ದವು. 2016ರ ನೋಟು ಅಮಾನ್ಯೀಕರಣ ಮತ್ತು 2017ರಲ್ಲಿ GST ಪರಿಚಯವು ಹೆಚ್ಚಿನ ಸಂಖ್ಯೆಯ ಸಣ್ಣ ಮತ್ತು ಅತಿ ಸಣ್ಣ ಘಟಕಗಳನ್ನು ಮುಚ್ಚಲು ಕಾರಣವಾಯಿತು. ಈ ಪ್ರವೃತ್ತಿಯಿಂದಾಗಿ ವೇಗವನ್ನು ಹೆಚ್ಚಿಸಿತು. ಈ ಎರಡೂ ಕ್ರಮಗಳು ಏಕಸ್ವಾಮ್ಯವು ತಮ್ಮ ವಿಶಾಲವಾದ ಅಖಿಲ ಭಾರತ ವಿತರಣೆಯ ಲಾಭವನ್ನು ಪಡೆಯುವ ಮೂಲಕ ತಮ್ಮ ಮಾರುಕಟ್ಟೆ ಪಾಲನ್ನು ಮತ್ತು ಲಾಭವನ್ನು ಹೆಚ್ಚಿಸಲು ಕಾರಣವಾಯಿತು.

ಬಂಡವಾಳಶಾಹಿಯ ಬೆಳವಣಿಗೆಯೊಂದಿಗೆ, ಒಂದು ಕಾಲದಲ್ಲಿ ಪ್ರಾದೇಶಿಕ ಆಟಗಾರರಿಂದ ಪ್ರಾಬಲ್ಯ ಹೊಂದಿದ್ದ ಹಣಕಾಸು ಸಾಲವು ಈಗ HDFC ಮತ್ತು HDFC ಬ್ಯಾಂಕ್‌ನಂತಹ ದೊಡ್ಡ ರಾಷ್ಟ್ರೀಯ ಏಕಸ್ವಾಮ್ಯಗಳ ಹೊರಹೊಮ್ಮುವಿಕೆಯನ್ನು ನೋಡುತ್ತಿದೆ. ಈ ಎರಡೂ ಸಾಲದಾತರು ಕಳೆದ 10 ವರ್ಷಗಳಲ್ಲಿ ಅಗ್ರ 20 ಲಾಭ ತಯಾರಕರ ಪಟ್ಟಿಯನ್ನು ಪ್ರವೇಶಿಸಿದ್ದಾರೆ.

ಏಕಸ್ವಾಮ್ಯ ಕಂಪನಿಗಳಿಗೆ ಅಗ್ಗದ ಸಾಲ ನೀಡುವ ಪ್ರವೇಶದಿಂದಾಗಿ, ಸುಲಭವಾಗಿ ಸ್ಪರ್ಧೆಯನ್ನು ಹತ್ತಿಕ್ಕಲು ಮತ್ತು ಬಂಡವಾಳವನ್ನು ತಮ್ಮ ಕೈಯಲ್ಲಿ ಕೇಂದ್ರೀಕರಿಸಲು ಸಹಾಯ ಮಾಡುತ್ತದೆ. ಹಾಗಾಗಿಯೇ ದೊಡ್ಡ ಏಕಸ್ವಾಮ್ಯವಾದ್ದರಿಂದ, ಅವರಿಗೆ ಬಂಡವಾಳದ ಹೂಡಿಕೆಯ ವೆಚ್ಚದಲ್ಲಿ ಕಡಿತವಾಗುತ್ತದೆ. ಜಾಗತೀಕರಣದ ಪ್ರಕ್ರಿಯೆಯು, ಕಡಿಮೆ ಸಾಲದ ದರಗಳನ್ನು ಹೊಂದಿರುವ ದೇಶಗಳಿಂದ ಮೂಲ ಹಣಕಾಸು ಪಡೆಯಲು ಅವರಿಗೆ ಅನುವು ಮಾಡಿಕೊಟ್ಟಿದೆ. ಅದಾನಿ ಗ್ರೂಪ್‌ನ ವಿಷಯದಲ್ಲಿ, ಅದರ ಒಟ್ಟು ಸಾಲದ ಸುಮಾರು ನಾಲ್ಕರಲ್ಲಿ–ಮೂರ(3/4)ರಷ್ಟು ಅಂದರೆ, ಸುಮಾರು 2 ಲಕ್ಷ ಕೋಟಿ ರೂ. ಗಿಂತ ಹೆಚ್ಚಿನ ಸಾಲವನ್ನು ದೇಶದ ಹೊರಗಿನಿಂದ ಪಡೆಯಲಾಗಿದೆ.

ಭಾರತದ ಅಗ್ರ 20 ಲಾಭ (ತೆರಿಗೆ ನಂತರದ ಲಾಭ) ಗಳಿಸುವವರು ಎರಡು ವಿಶಾಲ ವರ್ಗಗಳಿಗೆ ಸೇರುತ್ತಾರೆ. ಮೊದಲನೆಯ ಖಾಸಗಿ ವಲಯದ ವರ್ಗದವರು, ಏಕಸ್ವಾಮ್ಯಗಳ ಕಂಪನಿಗಳು ಪ್ರಪಂಚದಾದ್ಯಂತದ ಕಡಿಮೆ ವೆಚ್ಚದ ಮೂಲಗಳಿಂದ ಬಂಡವಾಳವನ್ನು ಪ್ರವೇಶಿಸಲು ಸಮರ್ಥವಾಗಿವೆ. ಉದಾಹರಣಗೆ, ಇ.ಜಿ. ರಿಲಯನ್ಸ್ (ಮುಖೇಶ್ ಅಂಬಾನಿಯವರ), ಟಾಟಾ, ಅದಾನಿ, ಎಚ್‌ಡಿಎಫ್‌ಸಿ ಗುಂಪುಗಳು ಇತ್ಯಾದಿಗಳು. ಎರಡನೆಯ ದೊಡ್ಡ ವರ್ಗ ಸಾರ್ವಜನಿಕ ವಲಯದ ಘಟಕಗಳು (ಪಿಎಸ್‌ಯು) ತಮ್ಮ ಸೂಚ್ಯ ಸಾರ್ವಭೌಮ ಖಾತರಿಯಿಂದಾಗಿ ಕಡಿಮೆ ವೆಚ್ಚದಲ್ಲಿ ಬಂಡವಾಳಕ್ಕೆ ಪ್ರವೇಶವನ್ನು ಪಡೆಯುತ್ತವೆ.

ಸಣ್ಣ ಕಂಪನಿಗಳಿಗೆ ಯಾವುದೇ ಬಂಡವಾಳದ ಮೂಲಗಳಿಗೆ ಪ್ರವೇಶವಿಲ್ಲ. ಇದು ಈಗ ಹೆಚ್ಚಿನ ಸಂಖ್ಯೆಯ ಕ್ಷೇತ್ರಗಳಲ್ಲಿ ಪ್ರಾಬಲ್ಯ ಸಾಧಿಸುತ್ತಿರುವ ಈ ದೊಡ್ಡ ಏಕಸ್ವಾಮ್ಯಗಳೊಂದಿಗೆ ಸ್ಪರ್ಧಿಸುವ ಸಾಧ್ಯತೆಗಳನ್ನು ಪ್ರಾಯೋಗಿಕವಾಗಿ ನಿರ್ಮೂಲನೆ ಮಾಡುತ್ತದೆ.

ಅಗ್ಗದ ಬಂಡವಾಳಕ್ಕೆ ಪ್ರವೇಶವು ದೊಡ್ಡ ಏಕಸ್ವಾಮ್ಯಗಳು ಇತರ ದೊಡ್ಡ ಮತ್ತು ಮಧ್ಯಮ ಗಾತ್ರದ ಬಂಡವಾಳಗಾರರಿಗಿಂತ ಹೆಚ್ಚಿನ ದರದಲ್ಲಿ ಬೆಳೆಯಲು ಅನುವು ಮಾಡಿಕೊಡುತ್ತದೆ. ಅವರು ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಹೆಚ್ಚಿನ ಬೆಳವಣಿಗೆಯ ಅವಕಾಶಗಳನ್ನು ಮೂಲೆಗುಂಪು ಮಾಡುತ್ತಾರೆ. ಆರ್ಥಿಕತೆಯ ಮೇಲೆ ಅವರ ಕತ್ತು ಹಿಸುಕುವುದು ಮಾತ್ರ ಬಿಗಿಯಾಗುತ್ತದೆ.

S&P ಗ್ಲೋಬಲ್ ರೇಟಿಂಗ್‌ಗಳ ಪ್ರಕಾರ USD 800 ಶತಕೋಟಿ (ಮುಂದಿನ ಹತ್ತು ವರ್ಷಗಳಲ್ಲಿ ರೂ. 67,236,000 ಕೋಟಿಗಳು) ಭಾರತೀಯ ದೊಡ್ಡ ಏಕಸ್ವಾಮ್ಯ ಸಂಸ್ಥೆಗಳು ಬೃಹತ್ ಹೂಡಿಕೆಯ ವಿಜೃಂಭಣೆಯನ್ನು ಯೋಜಿಸುತ್ತಿವೆ. ಈ ಮಹತ್ವಾಕಾಂಕ್ಷೆಯ ಹೂಡಿಕೆ ಯೋಜನೆಯು ಈ ಬೃಹತ್ ಕಾರ್ಪೊರೇಟ್ ಸಂಸ್ಥೆಗಳು ಹಿಂದಿನ ಹತ್ತು ವರ್ಷಗಳ ವೆಚ್ಚಕ್ಕಿಂತ ಸರಿಸುಮಾರು ಮೂರು ಪಟ್ಟು ಹೆಚ್ಚು ವಿಸ್ತರಣೆ ಮತ್ತು ವೈವಿಧ್ಯತೆಯ ಕಡೆಗೆ ಬಲವಾದ ಚಾಲನೆಯನ್ನು ಸೂಚಿಸುತ್ತದೆ ➚

ಎಂದು S&P ಅಂದಾಜು ಮಾಡಿದೆ. ಜಾಗತಿಕ ಈ ವೆಚ್ಚದ ಸುಮಾರು ಶೇ.40ರಷ್ಟು ಹಸಿರು ಹೈಡ್ರೋಜನ್, ಕ್ಲೀನ್ ಎನರ್ಜಿ, ಏವಿಯೇಷನ್, ಸೆಮಿಕಂಡಕ್ಟರ್‌ಗಳು, ಎಲೆಕ್ಟ್ರಿಕ್ ವೆಹಿಕಲ್ಸ್ (ಇವಿಗಳು) ಮತ್ತು ಡೇಟಾ ಸೆಂಟರ್‌ಗಳಂತಹ ಹೊಸ ಮತ್ತು ಉದಯೋನ್ಮುಖ ವಲಯಗಳಲ್ಲಿರುತ್ತವೆ.

ವೇದಾಂತ, ಟಾಟಾ, ಅದಾನಿ, ರಿಲಯನ್ಸ್ ಮತ್ತು JSW ಗುಂಪುಗಳು ಮುಂದಿನ 10 ವರ್ಷಗಳಲ್ಲಿ ಈ ಬೆಳವಣಿಗೆಯ ಕ್ಷೇತ್ರಗಳಲ್ಲಿ ಸುಮಾರು USD 350 ಶತಕೋಟಿ ಹೂಡಿಕೆ ಮಾಡುತ್ತವೆ. ದೊಡ್ಡ ಏಕಸ್ವಾಮ್ಯಗಳು ಮುಂಬರುವ ವರ್ಷಗಳಲ್ಲಿ ಹೊಸ ಕ್ಷೇತ್ರಗಳಲ್ಲಿ ಹೂಡಿಕೆಯ ಮೂಲಕ ತಮ್ಮ ಏಕಸ್ವಾಮ್ಯ ಮತ್ತು ಪ್ರಬಲ ಸ್ಥಾನಗಳನ್ನು ಮತ್ತಷ್ಟು ಕ್ರೋಢೀಕರಿಸಲು ತಯಾರಿ ನಡೆಸುತ್ತಿವೆ ಎಂಬುದು ಸ್ಪಷ್ಟವಾಗಿದೆ.

ಬಂಡವಾಳದ ಕೇಂದ್ರೀಕರಣ ಮತ್ತು ಮಾರುಕಟ್ಟೆಗಳ ಏಕಸ್ವಾಮ್ಯಕ್ಕೆ ಖಾಸಗೀಕರಣ ನೀತಿಗಳ ಅನುಷ್ಠಾನದ ಕಾರ್ಯಕ್ರಮಗಳು ಕೂಡ ಸಹಾಯ ಮಾಡಿರುವುದನ್ನು ಗಮನಿಸಬೇಕು. 2001-02ರಲ್ಲಿ ಹಿಂದೂಸ್ತಾನ್ ಜಿಂಕ್ ಅನ್ನು ಖಾಸಗೀಕರಣಗೊಳಿಸಿದಾಗ ಅನಿಲ್ ಅಗರ್ವಾಲ್ ಅವರ ವೇದಾಂತ ಗುಂಪು ಜಿಂಕ್‌ನಲ್ಲಿ ಏಕಸ್ವಾಮ್ಯ ಉತ್ಪಾದಕವಾಯಿತು. ಸರ್ಕಾರವು ಸಾರ್ವಜನಿಕ ವಲಯದ ಭಾರತ್ ಅಲ್ಯೂಮಿನಿಯಂ (ಬಾಲ್ಕೊ) ಅನ್ನು ಮಾರಾಟ ಮಾಡಿದಾಗ ಆ ಗುಂಪು ಅಲ್ಯೂಮಿನಿಯಂ ಉತ್ಪಾದನೆಯಲ್ಲಿ ಪ್ರಬಲ ಸ್ಥಾನವನ್ನು ಆವರಿಸಿಕೊಂಡಿತು. ಇಂಡಿಯನ್ ಪೆಟ್ರೋಕೆಮಿಕಲ್ ಕಾರ್ಪೋರೇಷನ್ ಲಿಮಿಟೆಡ್ ಅನ್ನು ಖಾಸಗೀಕರಣ ಮಾಡಿ, ರಿಲಯನ್ಸ್‌ಗೆ ಮಾರಾಟ ಮಾಡಿದ್ದರಿಂದ ಪೆಟ್ರೋಕೆಮಿಕಲ್‌ಗಳಲ್ಲಿ ರಿಲಯನ್ಸ್ ಏಕಸ್ವಾಮ್ಯವನ್ನು ಮತ್ತಷ್ಟು ಬಲಪಡಿಸಿಕೊಳ್ಳಲು ಅನುಕೂಲವಾಯಿತು. ಖಾಸಗೀಕರಣದ ಮೂಲಕ ಏಕಸ್ವಾಮ್ಯದ ಸೃಷ್ಟಿಗೆ ಇತ್ತೀಚಿನ ಉದಾಹರಣೆಯೆಂದರೆ ಏರ್ ಇಂಡಿಯಾವನ್ನು ಟಾಟಾ ಸಮೂಹಕ್ಕೆ ಮಾರಾಟ ಮಾಡಿದ್ದು.


ವಿದ್ಯುತ್ ವಲಯದಲ್ಲಿ ಅದಾನಿ, ಟಾಟಾ, ಜಿಂದಾಲ್ ಮತ್ತು ಟೊರೆಂಟ್, ಟೆಲಿಕಾಂ ಕ್ಷೇತ್ರದಲ್ಲಿ ಅಂಬಾನಿ, ಭಾರ್ತಿ ಮಿತ್ತಲ್ ಮತ್ತು ಬಿರ್ಲಾಗಳ ಏಕಸ್ವಾಮ್ಯವು ಈ ವಲಯಗಳನ್ನು ಖಾಸಗಿ ಕಂಪನಿಗಳಿಗೆ ಮುಕ್ತಗೊಳಿಸಿದ ಪರಿಣಾಮವಾಗಿದೆ. ವಿಮಾನ ನಿಲ್ದಾಣ ವಲಯವನ್ನು ತೆರೆಯುವುದು ಅದಾನಿ ಸಮೂಹದ ಏಕಸ್ವಾಮ್ಯಕ್ಕೆ ಕಾರಣವಾಯಿತು.

ದಿವಾಳಿತನ ಮತ್ತು ಕೊಳ್ಳೆ ಬಾಕುತನ ಕೋಡ್-ಇನ್ಸಾಲ್ವೆನ್ಸಿ ಅಂಡ್ ಬ್ಯಾಂಕ್ ರಪ್ಸಿ (IBC) ದೊಡ್ಡ ಬಂಡವಾಳಶಾಹಿಗಳಿಂದ ತಮ್ಮ ಕೆಟ್ಟ ಸಾಲಗಳನ್ನು ಮರುಪಡೆಯಲು ಬ್ಯಾಂಕುಗಳಿಗೆ ಸಹಾಯ ಮಾಡಬೇಕಿತ್ತು. ಆದರೆ, IBC ಕೆಲವು ದೊಡ್ಡ ಏಕಸ್ವಾಮ್ಯಗಳ ಪ್ರಾಬಲ್ಯವನ್ನು ಕ್ರೋಢೀಕರಿಸಲು ಸಹಾಯ ಮಾಡಿದೆ ಮತ್ತು ಅವುಗಳನ್ನು ಕಿತ್ತೆಸೆಯುವ ಬೆಲೆಯಲ್ಲಿ ಸ್ವತ್ತುಗಳನ್ನು ಖರೀದಿಸಲು ಮತ್ತು ದೊಡ್ಡ ಹೇರ್ ಕಟ್‌ಗಳನ್ನು ಸ್ವೀಕರಿಸಲು ಬ್ಯಾಂಕುಗಳನ್ನು ಒತ್ತಾಯಿಸುತ್ತದೆ. IBC ಹರಾಜಿನ ಮೂಲಕ ಭೂಷಣ್ ಸ್ಟೀಲ್ ಅನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಟಾಟಾ ಸಮೂಹವು ಉಕ್ಕಿನ ವಲಯದಲ್ಲಿ ತನ್ನ ಸ್ಥಾನವನ್ನು ಬಲಪಡಿಸಿತು. ವಿಶ್ವದ ಅತಿದೊಡ್ಡ ಉಕ್ಕಿನ ಏಕಸ್ವಾಮ್ಯಗಳಲ್ಲಿ ಒಂದಾದ ಆರ್ಸೆಲರ್ ಮಿತ್ತಲ್ IBC ಪ್ರಕ್ರಿಯೆಯ ಮೂಲಕ ಎಸ್ಸಾರ್ ಸ್ಟೀಲ್ ಅನ್ನು ವಹಿಸಿಕೊಂಡರು.

ಕಾರ್ಪೊರೇಟ್ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ

ಬೃಹತ್ ತೆರಿಗೆ ವಂಚನೆಗಳು ಮತ್ತು ಕಾರ್ಪೊರೇಟ್‌ಗಳು ಸಾಲದ ರೂಪದಲ್ಲಿ ಸಾರ್ವಜನಿಕ ಹಣವನ್ನು ಲೂಟಿ ಮಾಡುವುದರ ಹೊರತಾಗಿಯೂ, ಈ ನಿಗಮಗಳು ತೆರಿಗೆ ರಿಯಾಯಿತಿಗಳು ಇತ್ಯಾದಿಗಳ ಮೂಲಕ ಭಾರಿ ಹೆಚ್ಚುವರಿ ಲಾಭ ಹೊರತೆಗೆಯಲು ಬಜೆಟ್ ಸಾಧನವನ್ನು ಬಳಸಿಕೊಳ್ಳುತ್ತಿವೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕಾರ್ಪೊರೇಟ್ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿಗಳನ್ನು ಒದಗಿಸಿತು. ಅದು ಮೊದಲ ಬಜೆಟ್ ಪ್ರಸ್ತಾಪದ ಮೂಲಕ ರೂ.4.32 ಲಕ್ಷಕೋಟಿ ರಿಯಾಯಿತಿಗಳನ್ನು, ಪ್ರತಿ ವರ್ಷವು ರೂ.65,067 ಕೋಟಿ ರಿಯಾಯಿತಿಗಳನ್ನು ನೀಡಿತು. ಇದು ಒಟ್ಟಾರೆಯಾಗಿ, ಕೇಂದ್ರ ಸರ್ಕಾರದ ನಿವ್ವಳ ತೆರಿಗೆ ಆದಾಯದ ಸುಮಾರು ಶೇ.7.6 ರಷ್ಟಿತ್ತು. ಮೋದಿ ಆಡಳಿತದ ಎರಡನೇ ಇನ್ನಿಂಗ್ಸ್ ನಲ್ಲೂ, ಇದೇ ರೀತಿಯ ತೆರಿಗೆ ಕೊಡುಗೆಗಳನ್ನು ಮಾಡಲಾಗಿದೆ. ಕಳೆದ ಐದು ವರ್ಷಗಳಲ್ಲಿ, ಸಂಯೋಜನೆಯಿಲ್ಲದೆ (without compounding) ಅಂದಾಜು ಒಟ್ಟು ಆದಾಯವು ಖಗೋಳಶಾಸ್ತ್ರದ (astronomical) ರೂ.8.7 ಲಕ್ಷ ಕೋಟಿಯಾಗಿದೆ.



ಏಕಸ್ವಾಮ್ಯ ಬಂಡವಾಳಶಾಹಿಯ ಅತ್ಯುನ್ನತ ಹಂತಕ್ಕೆ

ಬಂಡವಾಳದ ಹೆಚ್ಚು ಹೆಚ್ಚು ಕೇಂದ್ರೀಕರಣವು ಕೆಲವು ಬಹು-ಶತ ಕೋಟ್ಯಾಧಿಪತಿಗಳಿಂದ ಉತ್ಪಾದನೆ ಮತ್ತು ವಿನಿಮಯದ ಸಾಧನಗಳ ಮೇಲೆ ನಿಯಂತ್ರಣವನ್ನು ಹೆಚ್ಚಿಸಲು ಕಾರಣವಾಗಿದೆ. ಇದು ದೇಶದ ಬಹುಪಾಲು ದುಡಿಯುವ ಜನರ ತೀವ್ರ ಶೋಷಣೆಗೆ ಕಾರಣವಾಗಿದೆ. ದುಡಿಯುವ ಜನರ ಪರಿಶ್ರಮವು ಎಲ್ಲಾ ಬಗೆಯ ಸಂಪತ್ತಿನ ಸೃಷ್ಟಿಗೆ ಮೂಲ ಕಾರಣವಾಗಿದೆ. ಜನಸಂಖ್ಯೆಯ ಕೆಳಭಾಗದ ಅರ್ಧದಷ್ಟು ಜನರು ಈಗ ಕೇವಲ ಶೇ.3ರಷ್ಟು ಸಂಪತ್ತನ್ನು ಹೊಂದಿದ್ದಾರೆ ಎಂದು ವರದಿಯಾಗಿದೆ. 140 ಕೋಟಿ ಜನರ ಭವಿಷ್ಯವನ್ನು ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲಿ ಒಂದಾಗುವ ಓಟದಲ್ಲಿ ತೊಡಗಿರುವ ಅಲ್ಪ ಸಂಖ್ಯೆಯ ಲಾಭದ ಹಸಿದ ಹೊಟ್ಟೆಬಾಕ- ಬಂಡವಾಳಶಾಹಿಗಳು ನಿರ್ಧರಿಸುತ್ತಿದ್ದಾರೆ.

ಬಂಡವಾಳದ ಹೆಚ್ಚುತ್ತಿರುವ ಕೇಂದ್ರೀಕರಣ ಮತ್ತು ಮಾರುಕಟ್ಟೆಗಳ ಏಕಸ್ವಾಮ್ಯ ಮತ್ತು ಕಚ್ಚಾ ವಸ್ತುಗಳ ಮೂಲಗಳು ಬಂಡವಾಳಶಾಹಿಯ ನೈಸರ್ಗಿಕ ಫಲಿತಾಂಶಗಳಾಗಿವೆ. ಮಾರ್ಕ್ಸ್ ಮತ್ತು ಲೆನಿನ್ ಕಂಡುಹಿಡಿದಂತೆ, ಬಂಡವಾಳಶಾಹಿ ಅನಿವಾರ್ಯವಾಗಿ ಏಕಾಗ್ರತೆ ಮತ್ತು ಏಕಸ್ವಾಮ್ಯಕ್ಕೆ ಕಾರಣವಾಗುತ್ತದೆ. ಬಂಡವಾಳಶಾಹಿಯು ತನ್ನ ಆರಂಭಿಕ ಸ್ಪರ್ಧಾತ್ಮಕ ಹಂತದಿಂದ 20ನೇ ಶತಮಾನದ ಆರಂಭದಲ್ಲಿ ಏಕಸ್ವಾಮ್ಯ ಬಂಡವಾಳಶಾಹಿಯ ಅತ್ಯುನ್ನತ ಹಂತಕ್ಕೆ ಅಭಿವೃದ್ಧಿಗೊಂಡಿತು. ಈಗ ಏಕಾಗ್ರತೆ ಮತ್ತು ಏಕಸ್ವಾಮ್ಯದ ಮಟ್ಟವು ಹೆಚ್ಚು ಪರಾವಲಂಬಿ ಮತ್ತು ವಿನಾಶಕಾರಿ ಮಟ್ಟವನ್ನು ತಲುಪಿದೆ.

ದೈತ್ಯ ಏಕಸ್ವಾಮ್ಯಗಳು ಪ್ರಭುತ್ವವನ್ನೂ ಬಿಡದೆ ನಿಯಂತ್ರಿಸುತ್ತಾರೆ

ದೈತ್ಯ ಏಕಸ್ವಾಮ್ಯಗಳು ಈಗ ಸಮಾಜದ ಎಲ್ಲಾ ಕ್ಷೇತ್ರ ಮತ್ತು ಅಂಶಗಳನ್ನು ನಿಯಂತ್ರಿಸುತ್ತಿವೆ. ಅವರು ಆಡಳಿತ ಮತ್ತು ಪ್ರಭುತ್ವವನ್ನೂ ಬಿಡದೆ ನಿಯಂತ್ರಿಸುತ್ತಾರೆ. ಅದು ಅವರ ಹಿತಾಸಕ್ತಿಯಲ್ಲಿ ಕಟ್ಟುನಿಟ್ಟಾಗಿ ಕಾರ್ಯನಿರ್ವಹಿಸುತ್ತದೆ. "ಮುಕ್ತ ಸ್ಪರ್ಧೆ"ಯನ್ನು ಉತ್ತೇಜಿಸುವ ಮೂಲಕ ಆರ್ಥಿಕತೆಯನ್ನು ನಿಯಂತ್ರಿಸಬಹುದು ಎಂಬ ಬೂರ್ಜ್ವಾ ಪ್ರಚಾರವು ಒಂದು ಭ್ರಮೆಯಾಗಿದೆ ಮತ್ತು ಸುಳ್ಳು ಪ್ರಚಾರವಾಗಿದೆ. ಭ್ರಷ್ಟಾಚಾರ ಮತ್ತು ಶಾಮೀಲು- ಚಮಚಗಿರಿ (ಕ್ರೋನಿಸಂ) ಇಲ್ಲದ ಬಂಡವಾಳಶಾಹಿಯ ಭರವಸೆಯೂ ಹಾಗೆಯೇ ಮುಂದುವರೆಯುತ್ತಿರುತ್ತದೆ. ಶೋಷಣೆಗೆ ಮಿತಿ ಎಂಬುದು ಇರುವುದೇ ಇಲ್ಲ. ಏಕಸ್ವಾಮ್ಯ ಬಂಡವಾಳಶಾಹಿ, ಪರಾವಲಂಬಿ ಬಂಡವಾಳಶಾಹಿ ಮತ್ತು ಸಮಾಜದ ಪ್ರಗತಿಗೆ ಅಡ್ಡಿಯಾಗಿದೆ. ಇದು ಸಮಾಜಮುಖಿ ಅಭಿವೃದ್ಧಿಗೆ ವಿರೋಧಿಯಾಗಿದೆ.

ದುಡಿಯುವ ಜನರ ಆದಾಯದ ಮೇಲೆ ನಕಾರಾತ್ಮಕ ಪರಿಣಾಮ

ಏಕಸ್ವಾಮ್ಯ ಬಂಡವಾಳಶಾಹಿಯ ಅಡಿಯಲ್ಲಿ ನಿಜವಾದ ವೇತನವು ಕಾರ್ಮಿಕ ಉತ್ಪಾದಕತೆಯೊಂದಿಗೆ ಪ್ರಮಾಣಾನುಗುಣವಾಗಿ ಹೆಚ್ಚಾಗುವುದಿಲ್ಲ ಎಂಬ ಪ್ರವೃತ್ತಿ ಹಾಗೆಯೇ ಮುಂದುವರಿಯುತ್ತದೆ. ಇದು ಕಾಲಾನಂತರದಲ್ಲಿ ಹೆಚ್ಚುವರಿ ಪಾಲು (Share of Surplus) ವೃದ್ಧಿಗೆ ಕಾರಣವಾಗುತ್ತದೆ. ಏಕಸ್ವಾಮ್ಯವು ತ್ವರಿತ ಮತ್ತು ನಿರಂತರ ಯಾಂತ್ರೀಕರಣದ ಮೂಲಕ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ನಿಸ್ಸಂಶಯವಾಗಿ ಇದು ಬಂಡವಾಳ-ಉದ್ಯೋಗ ಅನುಪಾತ ಮತ್ತು ತಲಾವಾರು ಸರಕು-ಕಾರ್ಮಿಕ ವೆಚ್ಚದ ಅನುಪಾತವನ್ನು ಕಡಿಮೆ ಮಾಡುತ್ತಿರುತ್ತದೆ. ಆದ್ದರಿಂದ, ಇದು ಕಡಿಮೆ ಉದ್ಯೋಗ ಮತ್ತು ಕಡಿಮೆ ಉತ್ಪಾದಕತೆ ಸಂಬಂಧಿತ ವೇತನಗಳಿಗೆ ಟ್ರೆಂಡ್ ಸೆಟ್ ನಿರ್ಮಿಸುತ್ತಾ ಹೋಗುತ್ತದೆ. ಇದು ಎಲ್ಲಾ ವರ್ಗದ ಕಾರ್ಮಿಕರ ಸಾಮಾನ್ಯ ಉದ್ಯೋಗ ವೇತನ ಮಾನದಂಡದ ಮೇಲೆ ಪರಿಣಾಮ ಬೀರುತ್ತದೆ. ಇದು ಸಾಮೂಹಿಕ ಚೌಕಾಸಿ ಸಾಮರ್ಥ್ಯವನ್ನು ಮತ್ತಷ್ಟು ಕಡಿಮೆ ಮಾಡುತ್ತದೆ. ಹೀಗೆ ಏಕಸ್ವಾಮ್ಯವು ಎಲ್ಲಾ ವರ್ಗದ ದುಡಿಯುವ ಜನರ ಆದಾಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ.

ಹೆಚ್ಚಿನ ಬೆಳವಣಿಗೆ ದರವು ಎಲ್ಲರ ಯೋಗಕ್ಷೇಮಕ್ಕೆ ಕಾರಣವಾಗುತ್ತದೆ ಎಂಬ ಹೇಳಿಕೆಯೂ ಸುಳ್ಳು. ಬಂಡವಾಳಶಾಹಿಯ ಪರಭಕ್ಷಕ ನೀತಿಗೆ ಬೆಂಬಲ ಪಡೆಯಲು ಮಾತ್ರ ಇದನ್ನು ಯಾವಾಗಲೂ ಮುಂದಿಡಲಾಗುತ್ತದೆ. ಆರ್ಥಿಕತೆಯ ಬೆಳವಣಿಗೆಯ ದರ ಎಷ್ಟೇ ಹೆಚ್ಚಾದರೂ, ಅದನ್ನು ಲೆಕ್ಕಿಸದೆಯೆ, ಬಂಡವಾಳಶಾಹಿ ಬೆಳವಣಿಗೆಯು ಅನಿವಾರ್ಯವಾಗಿ ಒಂದು ಧ್ರುವದಲ್ಲಿ ಕೆಲವರಿಗೆ ಮಾತ್ರ ಸಂಪತ್ತನ್ನು ಮತ್ತು ಇನ್ನೊಂದು ಧ್ರುವದಲ್ಲಿ ಬಹುಸಂಖ್ಯಾತರಿಗೆ ಬಡತನವನ್ನು ಹೆಚ್ಚಿಸುತ್ತದೆ. ಈ ತಾತ್ವಿಕ ಅಂಶವನ್ನು ಅರ್ಥೈಸಿಕೊಳ್ಳಬೇಕು.

ಇಂತಹ ಏಕಸ್ವಾಮ್ಯ -ಪರಭಕ್ಷಕ ಬಂಡವಾಳಶಾಹಿಯ ಶೋಷಣೆಯನ್ನು ಮೀರಿ ತಡೆ ಒಡ್ಡುವುದೆಂದರೆ, ಸಮಾಜವಾದಕ್ಕೆ ಪರಿವರ್ತನೆ ಮಾತ್ರ. ಸಮಾಜವಾದ ವ್ಯವಸ್ಥೆ ಮಾತ್ರವೇ ಬಹುಪಾಲು ಜನರ ಶೋಷಣೆ ಮತ್ತು ದುಃಖವನ್ನು ಕೊನೆಗೊಳಿಸುತ್ತದೆ. ದುಡಿಯುವ ಜನರ ಹಿತವನ್ನು ರಕ್ಷಿಸುತ್ತದೆ. ಬೂರ್ಜ್ವಾ ಸರ್ಕಾರಿ ಆಡಳಿತ ವ್ಯವಸ್ಥೆಯೊಳಗೆ ಯಾವುದೇ ಬದಲಾವಣೆಗಳು ಅಂದರೆ, ಬಂಡವಾಳಶಾಹಿ ವ್ಯವಸ್ಥೆಯ ನಿರ್ವಹಣೆಯಲ್ಲಿ ಬಹುಪಾಲು ದುಡಿಯುವ ಜನರ ಪರಿಸ್ಥಿತಿಗಳನ್ನು ಸುಧಾರಿಸಲು ಅಥವಾ ಅವರ ದಬ್ಬಾಳಿಕೆ ಮತ್ತು ಶೋಷಣೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ.

ಉತ್ಪಾದನಾ ಸಾಧನಗಳ ಸಾಮಾಜಿಕ ಮಾಲೀಕತ್ವವು, ಸಾಮಾಜಿಕ ಉತ್ಪಾದನೆಗೆ ಅಗತ್ಯವಾದ ಪೂರ್ವಸ್ಥಿತಿಯಾಗಿದ್ದು ಅದು ಅಂತಿಮವಾಗಿ ಮಾನವ ಅಗತ್ಯಗಳಿಗೆ ಅನುಗುಣವಾಗಿ, ನೆರವೇರಿಕೆಗೆ ಕಾರಣವಾಗುತ್ತದೆಯೇ ಹೊರತು, ಏಕಸ್ವಾಮ್ಯ ಬಂಡವಾಳಶಾಹಿ ದುರಾಸೆಯ ಈಡೇರಿಕೆಗೆ ಅಲ್ಲ.

ಯುಜಿಸಿ ಕರಡು ನಿಬಂಧನೆಗಳನ್ನು ಹಿಂತೆಗೆದುಕೊಳ್ಳಬೇಕು

ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ದ ಕರಡು ನಿಬಂಧನೆಗಳು, 2025 ಸರ್ಕಾರ ನಡೆಸುವ ವಿಶ್ವವಿದ್ಯಾಲಯಗಳಲ್ಲಿ ಉಪಕುಲಪತಿಗಳನ್ನು ಆಯ್ಕೆ ಮಾಡುವ ವಿಷಯದಲ್ಲಿ ರಾಜ್ಯಗಳ ಹಕ್ಕುಗಳ ಮೇಲೆ ನೇರ ದಾಳಿ ಮಾಡುವ ಒಂದು ನಿಬಂಧನೆಯನ್ನು ಒಳಗೊಂಡಿದೆ. ಮಾರ್ಗಸೂಚಿಗಳು ಕುಲಪತಿಗಳೂ ಆಗಿರುವ ರಾಜ್ಯಪಾಲರಿಗೆ ಮೂವರು ಸದಸ್ಯರ ಆಯ್ಕೆ ಸಮಿತಿಯನ್ನು ನೇಮಿಸುವ ಅಧಿಕಾರವನ್ನು ನೀಡುತ್ತದೆ, ಇದರಲ್ಲಿ ಕುಲಪತಿಗಳ ನಾಮನಿರ್ದೇಶಿತರು ಅಧ್ಯಕ್ಷರು ಸಹ ಆಗಿರುತ್ತಾರೆ. ಕೆಲವು ವಿರೋಧ ಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲಿ ಉಪಕುಲಪತಿಗಳನ್ನು ನೇಮಿಸುವಲ್ಲಿ ರಾಜ್ಯಪಾಲರು ನಿರಂಕುಶವಾಗಿ ವರ್ತಿಸುತ್ತಿರುವ ಹಿನ್ನೆಲೆಯಲ್ಲಿ ಇದು ನಡೆದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ವಿರೋಧಿಸುತ್ತ ಹೇಳಿದೆ.

ಆಯ್ಕೆ ಸಮಿತಿಯಲ್ಲಿ ಯಾರನ್ನು ನೇಮಿಸಲಾಗುತ್ತದೆ ಎಂಬುದರಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಪಾತ್ರವಿರುವುದಿಲ್ಲ. ಒಂದೇ ಏಟಿನಲ್ಲಿ, ಈ ಮಾರ್ಗಸೂಚಿಗಳ ಮೂಲಕ, ಕೇಂದ್ರವು ಕುಲಪತಿಗಳೂ ಆಗಿರುವ ರಾಜ್ಯಪಾಲರ ಮೂಲಕ ಎಲ್ಲಾ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ತನ್ನ ಆಯ್ಕೆಯ ಉಪಕುಲಪತಿಗಳನ್ನು ನೇಮಿಸಬಹುದು.

ಈ ಕರಡು ನಿಬಂಧನೆಗಳು ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿರುವ ಸಾಂವಿಧಾನಿಕ ಅಂಶವನ್ನು ಉಲ್ಲಂಘಿಸುತ್ತವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಬಿಜೆಪಿಯೇತರ ರಾಜ್ಯ ಸರ್ಕಾರಗಳು ಸೇರಿದಂತೆ ಎಲ್ಲಾ ಪ್ರಜಾಪ್ರಭುತ್ವವಾದಿ ವಿಭಾಗಗಳು ಈ ಅಪಾಯಕಾರಿ ನಿಬಂಧನೆಯನ್ನು ಒಗ್ಗಟ್ಟಿನಿಂದ ವಿರೋಧಿಸಬೇಕು ಎಂದು ಕರೆ ನೀಡಿದೆ, ಇದನ್ನು ಹಿಂಪಡೆಯಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸಿದೆ.

ಹೊಸ ಯುಜಿಸಿ ನಿಯಮಗಳು: ರಾಜ್ಯ ವಿವಿಗಳ ಮೇಲೆ ಆಕ್ರಮಣ

ಪ್ರಕಾಶ್ ಕಾರತ್

ಹೊಸ ವರ್ಷ 2025 ಶಿಕ್ಷಣ ವ್ಯವಸ್ಥೆಯ ಮೇಲೆ ಇನ್ನೊಂದು ಆಕ್ರಮಣದೊಂದಿಗೆ ಆರಂಭವಾಗಿದೆ. ಮೋದಿ ಸರಕಾರ, ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ದ ಮೂಲಕ ಹೊಸ ಕರಡು ನಿಯಮಗಳನ್ನು ಪ್ರಕಟಿಸಿದೆ. "ವಿಶ್ವವಿದ್ಯಾಲಯ ಅನುದಾನ ಆಯೋಗ (ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಸಿಬ್ಬಂದಿ, ಶಿಕ್ಷಕರ ನೇಮಕಾತಿ ಮತ್ತು ಬಡ್ತಿಗೆ ಕನಿಷ್ಠ ವಿದ್ಯಾರ್ಹತೆಗಳು ಹಾಗೂ ಉನ್ನತ ಶಿಕ್ಷಣದಲ್ಲಿ ಗುಣಮಟ್ಟಗಳ ನಿರ್ವಹಣೆ) ಈ ಮಾರ್ಗಸೂಚಿಯ ಶೀರ್ಷಿಕೆಯಾಗಿದೆ. ದೇಶದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣ ಹೇರುವ ಕೇಂದ್ರ ಸರಕಾರದ ಇನ್ನೊಂದು ಪ್ರಯತ್ನ ಇದಾಗಿದೆ.

ಯುಜಿಸಿ ಪ್ರಕಾರ, ದೇಶದಲ್ಲಿ ಒಟ್ಟು 56 ಕೇಂದ್ರೀಯ ವಿಶ್ವವಿದ್ಯಾಯಲಗಳು ಮತ್ತು 481 ರಾಜ್ಯ ವಿವಿಗಳಿವೆ. ಈ ನಿಯಮಾವಳಿಗಳ ಮೂಲಕ, ರಾಜ್ಯ ವಿವಿಗಳಿಗೆ ಕೂಡ ಕುಲಪತಿಗಳನ್ನು ನೇಮಿಸುವುದು ಹಾಗೂ ಅವುಗಳನ್ನು ಹೇಗೆ ನಡೆಸಬೇಕೆಂಬ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುವುದು ಕೇಂದ್ರದ ಉದ್ದೇಶವಾಗಿದೆ. ಇದು ನಮ್ಮ ಸಂವಿಧಾನದ ಪ್ರಮುಖ ಅಂಶವಾದ ಒಕ್ಕೂಟ ತತ್ವದ ಮೇಲಿನ ನೇರ ದಾಳಿಯಾಗಿದೆ.

ಹಕ್ಕು ನಿರಾಕರಣೆ ಮತ್ತು ಕೇದ್ರೀಕರಣ

ದೇಶದ ಎಲ್ಲ ವಿವಿಗಳ ಕುಲಪತಿಗಳನ್ನು ನೇಮಿಸುವ ವಿಧಾನವನ್ನು ಕರಡು ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ಈ ನಿಯಮವು ಕುಲಪತಿಗಳ (ವಿಸಿ) ಆಯ್ಕೆ ಮತ್ತು ನೇಮಕಾತಿಗೆ ಸಂಬಂಧಿಸಿದ ಶೋಧ ಹಾಗೂ ಆಯ್ಕೆ ಸಮಿತಿಯ ಸಂಯೋಜನೆಯನ್ನೇ ಬದಲಾಯಿಸುತ್ತದೆ. ಇದುವರೆಗೆ, ಈ ಸಮಿತಿಗಳಲ್ಲಿ ಮೂರು ಸದಸ್ಯರು ಇರುತ್ತಿದ್ದರು: ಒಬ್ಬರು ಯುಜಿಸಿಯಿಂದ ನಾಮನಿರ್ದೇಶನಗೊಂಡವರು, ಇನ್ನೊಬ್ಬರು ರಾಜ್ಯ ಸರಕಾರದ ಶಿಫಾರಸಿನಂತೆ ಕುಲಾಧಿಪತಿ (ಅಂದರೆ ರಾಜ್ಯಪಾಲರು) ಸೂಚಿಸಿದವರು ಹಾಗೂ ಇನ್ನೊಬ್ಬರು ಆಯಾ ವಿವಿಯ ಸಿಂಡಿಕೇಟ್/ ಸೆನೆಟ್/ಕಾರ್ಯನಿರ್ವಾಹಕ ಮಂಡಳಿಯಿಂದ ನಾಮನಿರ್ದೇಶನಗೊಂಡವರು.

ರಾಜ್ಯದ ಹಕ್ಕುಗಳ ಮೇಲಿನ ದಾಳಿ

ಹೊಸ ಕರಡು ಬದಲಾವಣೆಗಳು ಸಮಿತಿಯ ಸಂಯೋಜನೆಯು, ಪ್ರಕ್ರಿಯೆಯಲ್ಲಿ ರಾಜ್ಯಕ್ಕೆ ಯಾವುದೇ ಪಾತ್ರವನ್ನು ನಿರಾಕರಿಸಿ ಕೇಂದ್ರ ಸರಕಾರಕ್ಕೆ ಪರವಾಗಿರುವಂತೆ ಮಾಡುತ್ತದೆ. ರಾಜ್ಯ ಸರಕಾರಗಳ ಹಕ್ಕನ್ನು ಕಿತ್ತುಕೊಳ್ಳಲಾಗಿದೆ ಹಾಗೂ ಕೇಂದ್ರ ಸರಕಾರದ ಪ್ರತಿನಿಧಿಯಾಗಿರುವ ಗವರ್ನರ್–ಕಮ್ ಚಾನ್ಸಲರ್‌ಗೆ (ಕುಲಾಧಿಪತಿ) ಅಧಿಕ ಅಧಿಕಾರ ನೀಡಲಾಗಿದೆ.

ರಾಜಕೀಯ ಉದ್ದೇಶಕ್ಕಾಗಿ ಪ್ರಯತ್ನಗಳು

ಇದು ನೇಮಕ ಪ್ರಕ್ರಿಯೆಯನ್ನು ಕೇಂದ್ರೀಕರಿಸುವುದು ಮಾತ್ರವಲ್ಲದೆ ಬಿಜೆಪಿ–ಆರ್‌ಎಸ್‌ಎಸ್ ಬಗ್ಗೆ ಸಹಾನುಭೂತಿಯುಳ್ಳವರನ್ನು ವಿಸಿಗಳನ್ನಾಗಿ ಹೇರುವ ಉದ್ದೇಶವನ್ನು ಹೊಂದಿದೆ. ಕೇರಳದಲ್ಲಿ ಶೋಧ ಮತ್ತು ನೇಮಕ ಸಮಿತಿಯ ಶಿಫಾರಸುಗಳನ್ನು ರಾಜ್ಯಪಾಲರು ನಿರ್ಲಕ್ಷಿಸಿ ಆರ್‌ಎಸ್‌ಎಸ್ ಒಲವಿನವರನ್ನು ವಿಸಿಯಾಗಿ ನೇಮಿಸಿದ ಉದಾಹರಣೆಯನ್ನು ನಾವು ಈಗಾಗಲೇ ನೋಡಿದ್ದೇವೆ.

ರಾಷ್ಟ್ರೀಯ ಶಿಕ್ಷಣ ನೀತಿಯ ಪರಿಣಾಮ

ಬಿಜೆಪಿ ಸರಕಾರ ಘೋಷಿಸಿದ್ದ ಏಕಪಕ್ಷೀಯ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ), ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಕೇಂದ್ರೀಕರಿಸಲು ಹಾಗೂ ಕೋಮುವಾದೀಕರಿಸಲು ಹಾದಿ ತೆರೆದಿತ್ತು. ಶಿಕ್ಷಣ ವ್ಯವಸ್ಥೆಯ ಪ್ರಮುಖ ಭಾಗಿದಾರರಾದ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಅದನ್ನು ವಿರೋಧಿಸಿದ್ದು ಸರಿಯಾಗೇ ಇತ್ತು. ಎನ್‌ಇಪಿಯ ನೀತಿ ನಿರ್ದೇಶನವನ್ನು ಕರಡು ನಿಯಮಾವಳಿ ಇನ್ನಷ್ಟು ಮುಂದಕ್ಕೆ ಒಯ್ಯಲಿದೆ.

ಹಿಂದುತ್ವದ ಅಜೆಂಡಾ

ಬಿಜೆಪಿ ಕೇಂದ್ರ ಸರಕಾರವನ್ನು ರಚಿಸಿದಾಗಿನಿಂದಲೂ ಅದು ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೊಳಿಸಲು ವಿವಿಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಟಾರ್ಗೆಟ್ ಮಾಡುತ್ತಿದೆ. ಪ್ರಭುತ್ವದ ಎಲ್ಲ ಸ್ಥಾನಗಳನ್ನು ಕಬ್ಜಾ ಮಾಡಿಕೊಳ್ಳುವ ತನ್ನ ಯತ್ನಗಳ ಭಾಗವಾಗಿ ಅಂಥ ಸ್ಥಾನಗಳನ್ನು ಅಲಂಕರಿಸಲು ಯೋಗ್ಯರಲ್ಲದಿದ್ದರೂ ಹಿಂದುತ್ವ ಶಕ್ತಿಗಳನ್ನು ನೇಮಿಸಲು ಅದು ಆರಂಭಿಸಿತು.

ರಾಜ್ಯ ವಿರೋಧ

ಬಿಜೆಪಿ ಅಧಿಕಾರದಲ್ಲಿ ಇಲ್ಲದ ರಾಜ್ಯಗಳಲ್ಲಿ ಈ ಉದ್ದೇಶಕ್ಕೆ ರಾಜ್ಯಪಾಲರನ್ನು ಬಳಸಿಕೊಳ್ಳುತ್ತಿದೆ. ಕೇರಳದ ಎಲ್‌ಡಿಎಫ್ ಸರಕಾರವು ತಮಿಳುನಾಡು, ಪಂಜಾಬ್ ಮತ್ತು ಪಶ್ಚಿಮ ಬಂಗಾಳದ ಸರಕಾರಗಳೊಂದಿಗೆ ಸೇರಿಕೊಂಡು ವಿವಿಗಳನ್ನು ನಡೆಸುವ ಹಾಗೂ ನಿಯಂತ್ರಿಸುವಲ್ಲಿ ರಾಜ್ಯಪಾಲರ ಇಂಥ ಹಸ್ತಕ್ಷೇಪಗಳನ್ನು ಪ್ರತಿರೋಧಿಸಿದೆ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದ್ದು ಸಂವಿಧಾನದತ್ತವಾದ ರಾಜ್ಯಗಳ ಹಕ್ಕುಗಳನ್ನು ಹೊಸ ಮಾರ್ಗಸೂಚಿ ತುಳಿದು ಹಾಕುತ್ತಿದೆ. ರಾಜ್ಯಪಾಲರ ಅಸಾಂವಿಧಾನಿಕ ಕೃತ್ಯಗಳಿಗೆ ಶಾಸನಬದ್ಧತೆಯನ್ನು ತಂದು ಕೊಡುವುದು ಕರಡು ನಿಯಮಾವಳಿಯ ಉದ್ದೇಶವಾಗಿದೆ.

ಪಕ್ಷಪಾತಿ ಉದ್ದೇಶಗಳಿಗೆ ರಾಜ್ಯಪಾಲರನ್ನು ಎಗ್ಗಿಲ್ಲದಂತೆ ಬಳಸಿಕೊಳ್ಳಲಾಗುತ್ತಿದೆ. ಪ್ರತಿಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ರಾಜ್ಯಪಾಲರುಗಳು ಅಂಥ ಸರಕಾರಗಳ ಸುಗಮ ಕಾರ್ಯನಿರ್ವಹಣೆಗೆ ಅಡ್ಡಿಯಾಗುತ್ತಿದ್ದಾರೆ. ಅವರೆಲ್ಲರೂ ಕೇಂದ್ರ ಸರಕಾರದ ಏಜೆಂಟ್ ಆಗಿರುವುದೇ ಇದಕ್ಕೆ ಕಾರಣವಾಗಿದೆ. ಇಂಥ ಪರಿಸ್ಥಿತಿಯಲ್ಲಿ, ವಿವಿಗಳ ಕುಲಪತಿಯಂಥ ಶಾಸನಾತ್ಮಕ ಸ್ಥಾನಗಳನ್ನು ನೀಡಿದರೆ ಅವರು ಆಳುವ ಪಕ್ಷದ ಅಜೆಂಡಾವನ್ನು ಹೇರಲು ತಮ್ಮ ಸ್ಥಾನವನ್ನು ಬಳಸಿಕೊಳ್ಳುತ್ತಾರೆ.



ಆಯೋಗದ ವರದಿಗಳ ಶಿಫಾರಸುಗಳು

ಕೇಂದ್ರ–ರಾಜ್ಯ ಸಂಬಂಧಗಳ ಪರಿಶೀಲನೆಗಾಗಿ ನೇಮಿಸಲಾದ ಎರಡು ಆಯೋಗಗಳು ಕುಲಾಧಿಪತಿಗಳಾಗಿ ರಾಜ್ಯಪಾಲರ ಪಾತ್ರದ ಬಗ್ಗೆ ಟಿಪ್ಪಣಿ ಮಾಡಿರುವುದನ್ನು ಗಮನಿಸುವುದು ಇಲ್ಲಿ ಪ್ರಸ್ತುತವಾಗುತ್ತದೆ. 1988ರಲ್ಲಿ ವರದಿಯನ್ನು ಸಲ್ಲಿಸಿದ ಸರ್ಕಾರಿಯಾ ಆಯೋಗವು 'ಮುಖ್ಯಮಂತ್ರಿ ಅಥವಾ ಸಂಬಂಧಪಟ್ಟ ಇತರ ಸಚಿವರೊಂದಿಗೆ ಸಮಾಲೋಚನೆ ನಡೆಸುವುದರಿಂದ ರಾಜ್ಯಪಾಲರಿಗೆ ನಿಶ್ಚಿತವಾಗಿಯೂ ಅನುಕೂಲವಿದೆ' ಎಂದು ಅಭಿಪ್ರಾಯ ಪಟ್ಟಿದೆ. ವಿಶೇಷವಾಗಿ ರಾಜ್ಯಪಾಲರು ಚಾನ್ಸಲರ್ ಆಗಿ ಕಾರ್ಯನಿರ್ವಹಿಸುವ ಬಗ್ಗೆ ನಿರ್ದಿಷ್ಟವಾಗಿ ಉಲ್ಲೇಖಿಸಿರುವ ಸರ್ಕಾರಿಯಾ ಆಯೋಗ, ಇಂಥ ಮಹತ್ವದ ವಿಚಾರಗಳಲ್ಲಿ 'ಸಚಿವರೊಂದಿಗೆ ರಾಜ್ಯಪಾಲರು ಸಮಾಲೋಚಿಸುವುದು ಅಪೇಕ್ಷಣೀಯ' ಎಂದೂ ಹೇಳಿದೆ. ಆದರೆ, ಈ ಎರಡೂ ಶಿಫಾರಸುಗಳನ್ನು ಪಾಲಿಸಲಾಗಿಲ್ಲ.

ಪುಂಛಿ ಆಯೋಗದ ಅಭಿಪ್ರಾಯಗಳು

ಪುಂಛಿ ಆಯೋಗ, ಅಂಥದ್ದೇ ಇನ್ನೊಂದು ಆಯೋಗವಾಗಿದೆ. ಸರ್ಕಾರಿಯಾ ಆಯೋಗ ವರದಿ ಸಲ್ಲಿಸಿದ ಎರಡು ದಶಕದ ನಂತರ, 2010ರಲ್ಲಿ ಅದು ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿತ್ತು. ತನ್ನ ಹಿಂದಿನ ಆಯೋಗ ಹೇಳಿದ್ದಕ್ಕಿಂತಲೂ ಕಟುವಾದ ಶಿಫಾರಸುಗಳನ್ನು ಪುಂಛಿ ಆಯೋಗ ಮಾಡಿದೆ ಹಾಗೂ ಈ ರೀತಿ ಹೇಳಿದೆ: 'ರಾಜ್ಯಪಾಲರನ್ನು ವಿವಿಗಳ ಕುಲಾಧಿಪತಿಯನ್ನಾಗಿ ಮಾಡುವ ಹಾಗೂ ಆ ಮೂಲಕ, ಐತಿಹಾಸಿಕವಾಗಿ ಕೆಲವು ಪ್ರಸ್ತುತತೆ ಹೊಂದಿರಬಹುದಾದ ಅಧಿಕಾರಗಳನ್ನು ಅವರಿಗೆ ನೀಡುವ ಪ್ರಸ್ತುತತೆಯು ಕಾಲ ಮತ್ತು ಸನ್ನಿವೇಶಗಳೊಂದಿಗೆ ಬದಲಾಗಿದೆ'.

'ವಿವಿ ಶಿಕ್ಷಣವನ್ನು ನಿಯಂತ್ರಿಸುವ ಬಯಕೆ ಸಚಿವ ಸಂಪುಟಕ್ಕೆ ಸಹಜವಾಗಿಯೇ ಇರುತ್ತದೆ. ಹಾಗಾಗಿ ಕಾರ್ಯಗಳು ಮತ್ತು ಅಧಿಕಾರಗಳ ನಡುವೆ ಘರ್ಷಣೆ ನಡೆಯುವಂಥ ಪರಿಸ್ಥಿತಿಯನ್ನು ಮುಂದುವರಿಸುವ ಅಗತ್ಯವಿಲ್ಲ. ಯಾವುದೇ ಕಾನೂನಿನಡಿ ರಾಜ್ಯಪಾಲರಿಗೆ ಸಾಂದರ್ಭಿಕವಾಗಿ ಕಾರ್ಯಗಳನ್ನು ನಿಯೋಜಿಸಬಾರದು. ಅವರ ಪಾತ್ರ ಸಾಂವಿಧಾನಿಕ ನಿಯಮಗಳಿಗೆ ಮಾತ್ರವೇ ಸೀಮಿತವಾಗಬೇಕು' ಎಂಬುದೂ ಪುಂಛಿ ಆಯೋಗದ ಅಭಿಪ್ರಾಯವಾಗಿದೆ.

ಬಿಜೆಪಿಯ ಒಕ್ಕೂಟವಾದದ ವಿರೋಧಿ

ಬಿಜೆಪಿ ಸರಕಾರಕ್ಕೆ ಇಂಥ ಶಿಫಾರಸುಗಳು ಕಹಿ ಕಷಾಯವಿದ್ದಂತೆ ಎನ್ನುವುದರಲ್ಲಿ ಅಚ್ಚರಿಯೇನೂ ಇಲ್ಲ. ಬಿಜೆಪಿ ತಾತ್ವಿಕವಾಗಿಯೂ ಒಕ್ಕೂಟ ತತ್ವಕ್ಕೆ ವಿರುದ್ಧವಾಗಿದ್ದು ಕೇಂದ್ರೀಕರಣದ ಪರವಾಗಿದೆ. ಹಾಗಾಗಿ, ಕೇಂದ್ರ–ರಾಜ್ಯ ಸಂಬಂಧಗಳ ಆಯೋಗಗಳ ಶಿಫಾರಸುಗಳನ್ನು ಅನುಷ್ಠಾನಗೊಳಿಸುವಲ್ಲಿ ಅಥವಾ ರಾಜ್ಯಪಾಲರ ಅಧಿಕಾರಗಳನ್ನು ಮೊಟಕುಗೊಳಿಸುವಲ್ಲಿ ಬಿಜೆಪಿ ಆಸಕ್ತವಾಗಿಲ್ಲ.

ಈ ನಿಯಮಾವಳಿಗಳನ್ನು ಜಾರಿಗೊಳಿಸಲು ರಾಜ್ಯಗಳು ಅಥವಾ ಯಾವುದೇ ಸಂಸ್ಥೆ ವಿಫಲವಾದರೆ ಅವುಗಳ ವಿರುದ್ಧ ಕ್ರಮಕೈಗೊಳ್ಳುವ ಪ್ರಸ್ತಾಪನೆಯು ಈ ಕರಡಿನ ಅತ್ಯಂತ ಕರಾಳ ಅಂಶವಾಗಿದೆ. ಇಂಥ ಸಂಸ್ಥೆಗಳು ಯುಜಿಸಿ ಯೋಜನೆಗಳಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಲಾಗುತ್ತದೆ, ಡಿಗ್ರಿ ಕಾರ್ಯಕ್ರಮಗಳನ್ನು ನೀಡುವುದರಿಂದ ನಿರ್ಬಂಧಿಸಲಾಗುತ್ತದೆ ಹಾಗೂ ಯುಜಿಸಿ ಕಾನೂನಿನಡಿ ನಿರ್ವಹಿಸಲಾಗುವ ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿಯಿಂದ ತೆಗೆದು ಹಾಕಲಾಗುತ್ತದೆ.

ಅನುದಾನ ಆಯೋಗದ ಅಧಿಕಾರವನ್ನು ಮೀರುವುದು

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಈ ನಿಯಮಾವಳಿಗಳು ಯುಜಿಸಿ ನಮೂದಿಸಿದ ಬಲವಂತದ ಕ್ರಮಗಳಾಗಿವೆ. ತನ್ನ ದಾರಿಗೆ ಬರುವಂತೆ ಹಾಗೂ ತನ್ನ ತಾಳಕ್ಕೆ ಕುಣಿಯುವಂತೆ ಎಲ್ಲ ವಿವಿಗಳಿಗೆ ಹಾಕುವ ಧಮಕಿಯಾಗಿದೆ. ಯುಜಿಸಿ, ಪ್ರಮುಖವಾಗಿ ನಾನಾ ವಿವಿಗಳಿಗೆ ಹಣದ ನೆರವನ್ನು ವಿತರಿಸಲು ರಚಿಸಲಾದ ಸ್ವಾಯತ್ತ ಸಂಸ್ಥೆಯೇ ಹೊರತು ಅವುಗಳ ನಿಯಂತ್ರಣಕ್ಕೆ ಇರುವಂಥದ್ದಲ್ಲ. ಯುಜಿಸಿಯ ಈ ಮೂಲ ತತ್ವವನ್ನೇ ಹೊಸ ಮಾರ್ಗಸೂಚಿ ಉಲ್ಲಂಘಿಸುತ್ತದೆ.

ಕಡಿಮೆ ಶೈಕ್ಷಣಿಕ ಗುಣಮಟ್ಟದ ಶಿಫಾರಸುಗಳು

ಕರಡಿನಲ್ಲಿ ಇತರ ಕೆಲವು ಪ್ರಮುಖ ಶಿಫಾರಸುಗಳೂ ಇವೆ. ಅವುಗಳು ಕೂಡ ದೇಶದ ಉನ್ನತ ಶಿಕ್ಷಣದ ಆರೋಗ್ಯಕ್ಕೆ ಒಳ್ಳೆಯದಲ್ಲ. ಈ ನಿಯಮಾವಳಿಗಳ ಮೂಲಕ ಅಕಾಡೆಮಿಕ್‌ಯೇತರ ವ್ಯಕ್ತಿಗಳನ್ನು ವಿವಿಗಳ ವಿಸಿಗಳಾಗಿ ನೇಮಿಸುವುದನ್ನು ಕಾನೂನುಬದ್ಧಗೊಳಿಸುವುದು ಯುಜಿಸಿ ಬಯಕೆಯಾಗಿದೆ. ಹಿಂದೆ ಐಪಿಎಸ್ ಮತ್ತು ಐಎಎಸ್ ಅಧಿಕಾರಿಗಳನ್ನು ವಿಸಿಗಳಾಗಿ ನೇಮಿಸಿದ ದೃಷ್ಟಾಂತಗಳನ್ನು ನಾವು ಕಂಡಿದ್ದೇವೆ. ಈಗ ಕೈಗಾರಿಕೆಯೊಂದಿಗೆ ಸಂಬಂಧಪಟ್ಟವರನ್ನು ಕೂಡ, ಅದರಲ್ಲೂ ವಿಶೇಷವಾಗಿ ಖಾಸಗಿ ರಂಗದ ಉದ್ಯಮ ಸಂಬಂಧಿತರನ್ನು ವಿಸಿಗಳಾಗಿ ಕೂರಿಸಲು ಹೊಸ ನಿಯಮ ಅವಕಾಶ ನೀಡಲಿದೆ. ಇದು ವಿಶ್ವವಿದ್ಯಾಲಯಗಳ ಸ್ವರೂಪದ ಮೇಲೆಯೇ ನಡೆಸುವ ದಾಳಿಯಾಗಿದೆ ಮತ್ತು ಅವುಗಳನ್ನು ವಿಶೇಷವಾಗಿ ಖಾಸಗಿ ಕೈಗಾರಿಕೆಗಳ ಉಪಸಂಸ್ಥೆಗಳನ್ನಾಗಿ ಮಾಡುವ ಪ್ರಯತ್ನವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಅಕಾಡೆಮಿಕ್‌ಗಳನ್ನು ವಿಸಿಗಳಾಗಿ ನೇಮಿಸುವ ಬಗ್ಗೆ ತಲೆಕೆಡಿಸಿಕೊಳ್ಳದಂತೆ

ಪುಟ 12 ಕ್ಕೆ



ಫೋಟೋದಲ್ಲಿ: ಡಾ.ಬಸವರಾಜ ಗುಳೇದಾಳ್, ರಾಜ್ಯ ಸಮಿತಿ ಅಧ್ಯಕ್ಷ ಶಿವಪ್ಪ, ಕಾರ್ಯದರ್ಶಿ ವಿಜಯಕುಮಾರ್

ಬೆಂಗಳೂರು: ವಿಶ್ವವಿದ್ಯಾಲಯಗಳ ಅನುದಾನ ಆಯೋಗ (UGC) 2025 ರ ಉನ್ನತ ಶಿಕ್ಷಣ ಕರಡು (ವಿಶ್ವವಿದ್ಯಾಲಯ ಪ್ರಾಧ್ಯಾಪಕರು ಮತ್ತು ಕಾಲೇಜುಗಳಲ್ಲಿ ಶಿಕ್ಷಕರ ಮತ್ತು ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿ ಮತ್ತು ಮುಂಬಡ್ತಿಯ ಕನಿಷ್ಠ ಅರ್ಹತೆಗಳು ಮತ್ತು ಉನ್ನತ ಶಿಕ್ಷಣದಲ್ಲಿ ಗುಣಮಟ್ಟವನ್ನು ನಿರ್ವಹಿಸುವ ಕ್ರಮಗಳು) ನಿಯಮಗಳ ಪ್ರಸ್ತಾಪವನ್ನು SFI ಕರ್ನಾಟಕ ರಾಜ್ಯ ಸಮಿತಿ ತಿರಸ್ಕರಿಸಿದೆ ಎಂದು ರಾಜ್ಯಾಧ್ಯಕ್ಷ ಶಿವಪ್ಪ ಮತ್ತು ರಾಜ್ಯ ಕಾರ್ಯದರ್ಶಿ ವಿಜಯ್ ಕುಮಾರ್ ಟಿ.ಎಸ್. ಜಂಟಿ ಹೇಳಿಕೆ ನೀಡಿದ್ದಾರೆ.



ಜನ ಚಳುವಳಿಗಳ ಸಮರಶೀಲ ನಾಯಕ ಸಂಗಾತಿಗಳ ಪ್ರೀತಿಯ ಒಡನಾಡಿ ಜಿ.ಸಿ. ಬಯ್ಯಾರೆಡ್ಡಿ

ಆರ್. ರಾಮಕೃಷ್ಣ

ಕುಟುಂಬದ ಹಿನ್ನೆಲೆ

ಜಿ.ಸಿ. ಬಯ್ಯಾರೆಡ್ಡಿಯವರು ಹುಟ್ಟಿದ್ದು ಅಕ್ಟೋಬರ್ 10, 1960 ರಂದು. ಅವಿಭಜಿತ ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ಗಡಿಗವಾರಪಲ್ಲಿಯಲ್ಲಿ. ಅವರ ತಾತ ಒಂದಷ್ಟು ಜಮೀನು ಇದ್ದ ಭೂಮಾಲಕರಾಗಿದ್ದರು. ಬಯ್ಯಾರೆಡ್ಡಿಯವರ ತಂದೆ ಜಿ.ಎಸ್. ಚೌಡಪ್ಪ. ತಾಯಿ ಬಯ್ಯಮ್ಮ. 1917 ರಲ್ಲಿ ಹುಟ್ಟಿದ ಚೌಡಪ್ಪನವರು 7 ತರಗತಿಯಲ್ಲಿ ಇರುವಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದವರು. 1930 ರ ಸುಮಾರಿನಲ್ಲಿ ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ವಕೀಲರಾದ ಪಟ್ಟಾಭಿರಾಮನ್, ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕೆ. ಚೆಂಗಲರಾಯರೆಡ್ಡಿ, ಎಂ.ವಿ. ಕೃಷ್ಣಪ್ಪ ಮುಂತಾದವರ ತಂಡದಲ್ಲಿ ಕಾಂಗ್ರೆಸ್ ಕಾರ್ಯಕರ್ತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ ಆಗಿನ ನಾಯಕರ ಸಂಪರ್ಕಕ್ಕೆ ಬಂದವರಾಗಿದ್ದರು.

ಬಾಲ್ಯಕಾಲದ ಪ್ರಭಾವಗಳು

1962 ರಲ್ಲಿ ಚಿಂತಾಮಣಿ ವಿಧಾನ ಸಭಾ ಕ್ಷೇತ್ರದಿಂದ ಆಗಿನ ಕಾಂಗ್ರೆಸ್ ವಿರೋಧಿ ಕೂಟವಾದ 'ಸಂಯುಕ್ತ ರಂಗ'ದ ಭಾಗವಾಗಿ ಅವಿಭಜಿತ ಕಮ್ಯೂನಿಸ್ಟ್ ಪಕ್ಷ –ಸಿಪಿಐ ನಿಂದ, ಸೈಕಲ್ ಗುರುತಿನಲ್ಲಿ ಸ್ಪರ್ಧಿಸಿ ಗೆದ್ದು ಶಾಸಕರಾಗಿದ್ದ ಟಿ.ಕೆ. ಗಂಗೀರೆಡ್ಡಿ ತುಳವನೂರು, ಬಯ್ಯಾರೆಡ್ಡಿಯವರ ತಾಯಿಯ ಅಣ್ಣ ವಿ. ಸೀತಪ್ಪ ಚಿಲಕಲ ನೇರ್ಪು, ತಂದೆ ಜಿ.ಎಸ್. ಚೌಡಪ್ಪ ಈ ಮೂವರೂ ಸಂಬಂಧಿಗಳು ಹಾಗೂ ಆ ಭಾಗದ ಸ್ವಾತಂತ್ರ್ಯ ಹೋರಾಟಗಾರರು. ಈ ಮೂವರು ಜೈಲಿಗೆ ಹೋಗಿದ್ದರು. ವಿ. ಸೀತಪ್ಪನವರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರೂ ಆಗಿದ್ದರು. ಬಯ್ಯಾರೆಡ್ಡಿಯವರು ಸಣ್ಣವನಿದ್ದಾಗಿನಿಂದ ಹಿಡಿದು ಕಾಲೇಜಿಗೆ ಬರುವವರೆಗೂ ದಿನ ನಿತ್ಯ ಸ್ವಾತಂತ್ರ್ಯ ಚಳುವಳಿಯ ವಿಷಯಗಳು, ನಾನಾ ಸಾಮಾಜಿಕ–ರಾಜಕೀಯ ವಿಚಾರಗಳು ಚರ್ಚೆಯಾಗುತ್ತಿದ್ದ ವಾತಾವರಣದಲ್ಲಿ ಬೆಳೆದರು. ವಕೀಲರಾಗಿರುವ ಬಯ್ಯಾರೆಡ್ಡಿಯವರ ಅಣ್ಣ ಜಿ.ಸಿ. ಶಿವಶಂಕರ್ ಅವರು ಸಹ ಕಾಲೇಜಿನಲ್ಲಿ ಓದುವಾಗ ವಿದ್ಯಾರ್ಥಿ ಮುಖಂಡರಾಗಿ, ಸುಮಾರು 25 ವರ್ಷ ಪಂಚಾಯ್ತಿ ಸದಸ್ಯರಾಗಿ ಸಹ ದುಡಿದಿದ್ದಾರೆ. ಮತ್ತೊಬ್ಬ ಅಣ್ಣ ಜಿ.ಸಿ. ಶಿವರಾಮ್ ಸಹ ಕಾಂಗ್ರೆಸ್ ಪಕ್ಷದ ಮುಖಂಡರು.

ವಿದ್ಯಾರ್ಥಿ ಚಳುವಳಿಗೆ ಸೇರಿದ್ದು..

ಜಿ.ಸಿ. ಬಯ್ಯಾರೆಡ್ಡಿಯವರ ಇಡೀ ಕುಟುಂಬದಲ್ಲಿ ಒಂದು ಬಗೆಯ ವೈಚಾರಿಕ ವಾತಾವರಣ ಇತ್ತು. ಪೂಜೆ, ಪುನಸ್ಕಾರಗಳು ಹೆಚ್ಚು ಇರುತ್ತಿರಲಿಲ್ಲ. 1973 ನೇ ಇಸವಿಯಲ್ಲಿ ಬಯ್ಯಾರೆಡ್ಡಿಯವರು 7 ನೇ ತರಗತಿಯಲ್ಲಿ ಓದುತ್ತಿದ್ದಾಗ ಬಯ್ಯಾರೆಡ್ಡಿಯವರ ಸೋದರ ಮಾವ ಸೀತಪ್ಪ ಚಿಂತಾಮಣಿ ವಿಧಾನ ಸಭೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ. ಈಗಿನ ಚಿಂತಾಮಣಿ ಕ್ಷೇತ್ರದ ಶಾಸಕರು, ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ. ಸುಧಾಕರರವರ ಅಪ್ಪ ಚೌಡರೆಡ್ಡಿಯವರು ಆಗ ಬಂಡಾಯ ಕಾಂಗ್ರೆಸ್ ಅಭ್ಯರ್ಥಿ. ಚಿಂತಾಮಣಿ ಕ್ಷೇತ್ರದ ಅಭ್ಯರ್ಥಿ ಯಾರಾಗಬೇಕು ಎಂಬ ಬಗೆಗೆ ಕಾಂಗ್ರೆಸ್‌ನಲ್ಲಿ ಒಡಕಿತ್ತು. ಎಐಸಿಸಿ ಪರವಾಗಿ ನೀಲಂ ಸಂಜೀವ ರೆಡ್ಡಿಯವರು ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿ ಸೀತಪ್ಪನವರ ಪರವಾಗಿ, ಹಾಗೂ ಕೆಪಿಸಿಸಿ ಆಂಜನೇಯ ರೆಡ್ಡಿ ಪರವಾಗಿತ್ತು. ಆಂಜನೇಯ ರೆಡ್ಡಿ ದೊಡ್ಡ ಭೂಮಾಲಕರು. ಸ್ವಾತಂತ್ರ್ಯಕ್ಕೂ ಮುಂಚೆ ಅವರು ಬ್ರಿಟೀಷರಿಗೆ ಸಹಾಯಕರಾಗಿದ್ದವರು. ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಸೇರಿದ್ದರು. ಇವರ ಬಗೆಗೆ ಎಐಸಿಸಿಗೆ ತಕರಾರು ಇತ್ತು. ಹಾಗಾಗಿ ಸೀತಪ್ಪನವರಿಗೆ ಕಾಂಗ್ರೆಸ್‌ನ ಅಧಿಕೃತ ಟಿಕೆಟ್ ದೊರೆಯಿತು. ಆಗ ಕಾಂಗ್ರೆಸ್‌ಗೆ ಇದ್ದುದು ಜೋಡೆತ್ತಿನ ಗುರುತು. ಆದರೆ ಚುನಾವಣೆಯಲ್ಲಿ ಕೆಪಿಸಿಸಿ ಗುಪ್ತವಾಗಿ ಆಂಜನೇಯ ರೆಡ್ಡಿಗೆ ಬೆಂಬಲ ನೀಡಿತು. ಆಂಜನೇಯ ರೆಡ್ಡಿಯವರ ಮಗ ಚೌಡರೆಡ್ಡಿಯವರು ಆನೆ ಗುರುತಿನ ಮೇಲೆ ಬಂಡಾಯ ಕಾಂಗ್ರೆಸ್ ಆಗಿ ಸ್ಪರ್ಧಿಸಿದರು. ಆಂಜನೇಯ ರೆಡ್ಡಿಯವರನ್ನು ಸೋಲಿಸುವುದು ಮುಖ್ಯ ಗುರಿ ಎಂದು ಪ್ರತಿಪಾದಿಸಿದ ಸಿಪಿಐ(ಎಂ) ಮುಖಂಡ ಗಂಗೀರೆಡ್ಡಿಯವರು, ಕಮ್ಯೂನಿಸ್ಟ್ ಪಕ್ಷವು ಸೀತಪ್ಪ ಅವರನ್ನು ಬೆಂಬಲಿಸಬೇಕು ಎಂದು ಪ್ರತಿಪಾದಿಸಿದರು. ಅದೇ ಸಮಯದಲ್ಲಿ ಗಂಗೀರೆಡ್ಡಿ ಕಮ್ಯೂನಿಸ್ಟ್ ಪಕ್ಷವನ್ನು ಬಿಟ್ಟರು. ಕಮ್ಯೂನಿಸ್ಟ್ ಪಕ್ಷದ ಪ್ರಭಾವವಿದ್ದ ಚಿಂತಾಮಣಿ ಕ್ಷೇತ್ರವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಆಗಿನ ಯುವಜನ ಮುಖಂಡರಾಗಿದ್ದ 28 ವರ್ಷದ ಜಿ.ವಿ. ಅಶ್ವಥ ನಾರಾಯಣರೆಡ್ಡಿ (ಜಿ.ವಿ.ಶ್ರೀರಾಮರೆಡ್ಡಿಯವರ ಅಣ್ಣ)ಯವರನ್ನು ಸಿಪಿಐ(ಎಂ) ಪಕ್ಷದಿಂದ ಅಭ್ಯರ್ಥಿಯನ್ನಾಗಿ ಮಾಡಲಾಯಿತು. ಚೌಡರೆಡ್ಡಿ ಗೆದ್ದರು. ಸೀತಪ್ಪನವರು ತೀರಾ ಕಡಿಮೆ ಮತಗಳ ಅಂತರದಿಂದ ಸೋತರು. ಅಶ್ವಥ ನಾರಾಯಣ ರೆಡ್ಡಿಯವರು ಸಹ ಸರಿ ಸುಮಾರು ಸೀತಪ್ಪನವರಷ್ಟೆ ಮತ ಗಳಿಸಿದ್ದರು.



ವಿ. ಗೋಪಾಲಗೌಡ, ಜಿ.ವಿ. ಶ್ರೀರಾಮರೆಡ್ಡಿ ಮುಂತಾದವರೆಲ್ಲಾ ವಿದ್ಯಾರ್ಥಿ ಮುಖಂಡರಾಗಿ ಎಸ್.ಎಫ್.ಐ. ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಕಮ್ಯೂನಿಸ್ಟ್ ಪಕ್ಷದ ಚುನಾವಣಾ ಪ್ರಚಾರದ ಭಾಗವಾಗಿ ಎರಡು ಟ್ರಾಕ್ಟರ್‌ಗಳು ಬಯ್ಯಾರೆಡ್ಡಿಯವರ ಊರಿಗೆ ಬಂದು ಪ್ರಚಾರ ಮಾಡಿದ್ದಕ್ಕೂ ಬಯ್ಯಾರೆಡ್ಡಿಯವರು ಸಾಕ್ಷಿಯಾಗಿದ್ದರು. ಇದು ಬಯ್ಯಾರೆಡ್ಡಿಯವ ಬಾಲ್ಯ ಕಾಲದ ಚಿಂತಾಮಣಿ ತಾಲ್ಲೂಕಿನ ರಾಜಕೀಯ ವಾತಾವರಣ.

ಕಾಂಗ್ರೆಸ್ ಒಲವು

1975 ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಯಿತು. ಆಗ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸು ಬಡವರಿಗೆ ಭೂಮಿ ಕೊಡುತ್ತಿದ್ದಾರೆ, 20 ಅಂಶಗಳ ಕಾರ್ಯಕ್ರಮವನ್ನು ಜಾರಿ ಮಾಡುತ್ತಿದ್ದಾರೆ, ಇಂದಿರಾ ಗಾಂಧಿಯವರು ಬಡವರ ಪರ ಇದ್ದಾರೆ ಎಂಬ ಭಾವನೆಗಳ ಆಧಾರದಲ್ಲಿ ಬಯ್ಯಾರೆಡ್ಡಿಯವರು ಆಗ ಕಾಂಗ್ರೆಸ್ ಪಕ್ಷದ ಪರವಾಗಿದ್ದರು. ಚಿಂತಾಮಣಿಯಲ್ಲಿ ಇಂದಿರಾಗಾಂಧಿಯವರು ಪಾಲ್ಗೊಂಡ ಬಹಿರಂಗ ಸಭೆಯೊಂದು ನಡೆದಾಗ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಚಿಂತಾಮಣಿಯಲ್ಲಿ ವಿದ್ಯಾರ್ಥಿಗಳಾದ ಹರೀಂದ್ರ, ಶಿವಾರೆಡ್ಡಿ, ಸುಬ್ಬಾರೆಡ್ಡಿ, ಬಯ್ಯಾರೆಡ್ಡಿ ಮುಂತಾದವರು ಸ್ನೇಹಿತರಾಗಿದ್ದರು. ಕಾಲೇಜು ಚುನಾವಣೆ ಬಂದಾಗ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಸಂಘಟನೆಯಾದ ಎನ್.ಎಸ್.ಯು.ಐ.ನಿಂದ ಸ್ಪರ್ಧಿಸಬೇಕೆಂಬ ಆಸಕ್ತಿಯೂ ಬಯ್ಯಾರೆಡ್ಡಿಯವರಿಗೆ ಇತ್ತು. ಆಗಿನ ಎನ್.ಎಸ್.ಯು.ಐ. ನಾಯಕರಾಗಿದ್ದ ಬಿ.ಕೆ. ಹರಿಪ್ರಸಾದ್ ಅವರನ್ನು ನೋಡಲು ಬೆಂಗಳೂರಿಗೆ ಬಂದು ಭೇಟಿ ಸಾಧ್ಯವಾಗದೇ ವಾಪಸ್ ಹೋಗಿದ್ದರು.

ಎಸ್.ಎಫ್.ಐ. ಸೆಳೆಯುವ ಯತ್ನಗಳು

ಆಗ ಎಸ್.ಎಫ್.ಐ. ಸಂಘಟನೆಯ ಎರಡನೇ ತಲೆಮಾರಿನ ನಾಯಕರಾದ ಮುನಿ ನಾರಾಯಣಸ್ವಾಮಿ, ಕೆ.ವಿ. ಸತ್ಯ ನಾರಾಯಣ ಮುಂತಾದವರು ಚಿಂತಾಮಣಿಯಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸಲು ಕೆಲಸ ಮಾಡುತ್ತಿದ್ದರು. ಅವರು ಬಯ್ಯಾರೆಡ್ಡಿಯವರನ್ನು ಎಸ್.ಎಫ್.ಐ. ಸಂಘಟನೆಗೆ ಸೆಳೆಯಬೇಕೆಂದು ಪ್ರಯತ್ನಿಸುತ್ತಿದ್ದರು. ಆಗಿನ ಎಸ್.ಎಫ್.ಐ. ರಾಜ್ಯ ಮುಖಂಡರಾಗಿದ್ದ ಎಸ್.ಆರ್. ಆರಾಧ್ಯ ಅವರು ಚಿಂತಾಮಣಿಗೆ ಬಂದು, ಎಸ್.ಎಫ್.ಐ. ಸೇರುವವರು, ಕಮ್ಯೂನಿಸ್ಟ್ ಪಕ್ಷ ಸೇರಲೇಬೇಕೆಂದೇನೂ ಇಲ್ಲವೆಂದು ಹೇಳಿ ಬಯ್ಯಾರೆಡ್ಡಿಯವರ ಮನವೊಲಿಸಿ ಎಸ್.ಎಫ್.ಐ. ಸೇರಲು ಒಪ್ಪಿಸಿದರು. ಹೀಗೆ ಬಯ್ಯಾರೆಡ್ಡಿಯವರು 1978 ರಲ್ಲಿ ಎಸ್.ಎಫ್.ಐ. ಸೇರಿದರು.

ಎಸ್.ಆರ್. ಆರಾಧ್ಯ ಅವರು ತಮ್ಮ ವಿಚಾರ, ವರ್ಚಸ್ಸಿನಿಂದ ಬಯ್ಯಾರೆಡ್ಡಿಯವರನ್ನು ಸಾಕಷ್ಟು ಪ್ರಭಾವಿಸಿದರು. ನಂತರ ಮುನಿ ನಾರಾಸ್ವಾಮಿಯವರು ನೆರೆಯ ಆಂಧ್ರದ ಚಾರಿತ್ರಿಕ ತೆಲಂಗಾಣ ಹೋರಾಟ, ಹಾಗೂ ಆ ಭೂಮಿ ಹಕ್ಕಿಗಾಗಿ ನಡೆದ ಆ ಐತಿಹಾಸಿಕ ಹೋರಾಟವನ್ನು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರಕಾರವು ದಮನ ಮಾಡಿದ ರೀತಿಯ ಕುರಿತು, ಬೆಂಗಳೂರಿನ ಕನಕಪುರ ರಸ್ತೆಯ ಪ್ರಸಿದ್ಧ 'ತಾತಗುಣಿ' ಎಸ್ಟೇಟ್ ಕಾರ್ಮಿಕರ ಹೋರಾಟ, ಅವರಿಗೆ ಆಗುತ್ತಿದ್ದ ಅನ್ಯಾಯಗಳ ಬಗೆಗೆ, ವಿವರಿಸಿದ್ದು ಸಹ ಬಯ್ಯಾರೆಡ್ಡಿಯವರ ಮೇಲೆ ಸಾಕಷ್ಟು ಪ್ರಭಾವ ಬೀರಿತು. ಬಯ್ಯಾರೆಡ್ಡಿಯವರು ವಿದ್ಯಾರ್ಥಿ ಚಳುವಳಿಯಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡತೊಡಗಿದರು.

ಜನ ಚಳುವಳಿಯಲ್ಲಿ ಹೆಜ್ಜೆಗಳು

ಆ ಸಮಯದಲ್ಲಿ ಬಯ್ಯಾರೆಡ್ಡಿಯವರಿಗೆ ಟಿ.ಬಿ.(ಕ್ಷಯ) ಕಾಯಿಲೆಯಿಂದಾಗಿ ಆರೋಗ್ಯದ ಸಮಸ್ಯೆ ಎದುರಾಯಿತು. ಆದರೂ ಸಂಘಟನೆಯ ಕೆಲಸ ನಿಲ್ಲಿಸಲಿಲ್ಲ. ಸಂಗಾತಿಗಳಾದ ಹರೀಂದ್ರ, ಶಿವಾರೆಡ್ಡಿ ಮುಂತಾದವರ ಜೊತೆ ಉತ್ಸಾಹದಲ್ಲಿ ಕೆಲಸ ಮಾಡಿದರು. ಈ ಹಂತದಲ್ಲಿ ಚಿಂತಾಮಣಿಯಲ್ಲಿ ಎಸ್.ಎಫ್.ಐ. ಮೂರನೇ ರಾಜ್ಯ ಸಮ್ಮೇಳನವನ್ನು ನಡೆಸಬೇಕೆಂದು ತೀರ್ಮಾನವಾಗಿ ಅದನ್ನು ಯಶಸ್ವಿಗೊಳಿಸಲು ಶ್ರಮಿಸಿದರು. ಈ ಮಧ್ಯೆ ಚಿಂತಾಮಣಿಯ ಕಾಂಗ್ರೆಸ್ ಮುಖಂಡರು, (ಮುಂದೆ ರಾಜ್ಯ ಸರಕಾರದಲ್ಲಿ ಮಂತ್ರಿಯೂ ಆದ) ಕೆ.ಎಂ. ಕೃಷ್ಣಾರೆಡ್ಡಿಯವರು ಬಯ್ಯಾರೆಡ್ಡಿ ಮತ್ತು ಅವರ ತಂದೆ ಇಬ್ಬರನ್ನೂ ತಮ್ಮ ಮನೆಗೆ ಕರೆಸಿಕೊಂಡು ಎಸ್.ಎಫ್.ಐ. ಸಂಘಟನೆಗೆ ರಾಜಿನಾಮೆ ನೀಡುವಂತೆ ಬಯ್ಯಾರೆಡ್ಡಿ ಮತ್ತು ಮತ್ತೊಬ್ಬ ತಮ್ಮ ಸಂಬಂಧಿ ವಿದ್ಯಾರ್ಥಿಯ ಮೇಲೆ ಒತ್ತಡ ಹೇರಿ ತಾಕೀತು ಮಾಡಿದರು. ಕಮ್ಯೂನಿಸ್ಟ್ ಚಳುವಳಿಗೂ, ಎಸ್.ಎಫ್.ಐ.ಗೂ ಸಂಬಂಧ ಕಲ್ಪಿಸಿ ಕಮ್ಯೂನಿಸ್ಟರನ್ನು ನಿಂದಿಸಿ ಮಾತನಾಡಿದರು. ಆ ಹಂತದಲ್ಲಿ ಸ್ಥಳೀಯ ಕಮ್ಯೂನಿಸ್ಟ್ ಪಕ್ಷಕ್ಕೆ ಸಂಬಂಧಿಸಿದ ವಿಷಯದಲ್ಲಿ ಆಕ್ಷೇಪಣೆಗಳನ್ನು ಹೊಂದಿದ್ದ ಬಯ್ಯಾರೆಡ್ಡಿಯವರು ಕಮ್ಯೂನಿಸ್ಟ್ ಪಕ್ಷಕ್ಕೂ ತನಗೂ ಸಂಬಂಧವಿಲ್ಲವೆಂದೂ, ತಾನು ಎಸ್.ಎಫ್.ಐ.ಗೆ ರಾಜಿನಾಮೆ ನೀಡುವುದಿಲ್ಲವೆಂದು ದೃಢವಾಗಿ ಉತ್ತರಿಸಿ ವಿದ್ಯಾರ್ಥಿ ಚಳುವಳಿಯೊಂದಿಗೆ ಗಟ್ಟಿಯಾಗಿ ನಿಂತರು. ಆ ಸಮಯದಲ್ಲಿ ಎಂ.ಕೆ. ಭಟ್ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಆಗಿದ್ದು, ವಿದ್ಯಾರ್ಥಿ ಸಮ್ಮೇಳನದ ಯಶಸ್ಸಿಗೆ ಬೆಂಬಲ ನೀಡಿದ್ದ ಅವರು ಬಯ್ಯಾರೆಡ್ಡಿಯವರು ಕಮ್ಯೂನಿಸ್ಟ್ ವಿಚಾರಧಾರೆಗಳನ್ನು ಅರಿಯಲು ನೆರವಾದರು. ಎಸ್.ಎಫ್.ಐ. ಸಮ್ಮೇಳನದ ಸಿದ್ಧತೆಯ ಭಾಗವಾಗಿ ನಿಧಿ ಸಂಗ್ರಹ ಇತ್ಯಾದಿಗಳಿಗೆ ಜನರ ಬಳಿ ತೆರಳಿದಾಗ, ಬಯ್ಯಾರೆಡ್ಡಿಯವರಿಗೆ ಜಿಲ್ಲೆಯ ಜನರಿಂದ ಪುಟ 10 ಕ್ಕೆ



ಜನ ಚಳುವಳಿಗಳ ಸಮರಶೀಲ ನಾಯಕ..... ಪುಟ 9 ರಿಂದ

ಚಿಂತಾಮಣಿ ತಾಲ್ಲೂಕಿನ ಹೋರಾಟಗಳು ಸೇರಿದಂತೆ, ಎ.ಕೆ.ಗೋಪಾಲನ್ ಅವರ ನೇತೃತ್ವದ ಭೂಮಿ ಹೋರಾಟಗಳು, ಎ.ಕೆ.ಜಿ.ಯವರ ಸರಳತೆ, ಎಕೆಜಿ, ಮಳ್ಳೂರು ಪಾಪಣ್ಣ ಮುಂತಾದವರ ಬದುಕು-ವ್ಯಕ್ತಿತ್ವದ ಬಗೆಗೆ ತಿಳಿಯಿತು. ಕಮ್ಯೂನಿಸ್ಟ್ ಚಳುವಳಿಯ ಬಗೆಗೆ ಅಪಾರ ಗೌರವ ಮೂಡಿತು.

ಮುಂದೆ ಬಯ್ಯಾರೆಡ್ಡಿಯವರು 1981 ರಲ್ಲಿ ಮುಂಬೈನಲ್ಲಿ ನಡೆದ ಎಸ್.ಎಫ್.ಐ. ಅಖಿಲ ಭಾರತ ಸಮ್ಮೇಳನದಲ್ಲಿ ಪಾಲ್ಗೊಂಡರು. ಹರೀಂದ್ರ, ಶಿವಾರೆಡ್ಡಿ, ಬಯ್ಯಾರೆಡ್ಡಿಯವರ ತಂಡದ ಶ್ರಮದಿಂದ ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಮಾಲೂರು ಹೊರತುಪಡಿಸಿ ಬಹುತೇಕ ಎಲ್ಲ ತಾಲ್ಲೂಕುಗಳಿಗೆ ಎಸ್.ಎಫ್.ಐ. ವಿಸ್ತರಿಸಿತು. ಘಟಕಗಳು ರಚನೆಯಾಗಿ ಹಲವಾರು ಹೋರಾಟಗಳು ನಡೆದವು.

ಐತಿಹಾಸಿಕ ನರಗುಂದ,
ನವಲಗುಂದ ರೈತ ಬಂಡಾಯದಲ್ಲಿ ಭಾಗಿ

ಆರೋಗ್ಯ ಸಮಸ್ಯೆಯ ಜೊತೆಗೇ ಕೆಲಸ ಮಾಡುತ್ತಿದ್ದ ಬಯ್ಯಾರೆಡ್ಡಿಯವರಿಗೆ ಬೆಂಗಳೂರಿನ ಆಸ್ಪತ್ರೆಯಲ್ಲಿ ಆಗಿನ ಎಸ್.ಎಫ್.ಐ. ರಾಜ್ಯ ಮುಖಂಡರಾಗಿದ್ದ ಎಸ್.ಆರ್. ಆರಾಧ್ಯ ಚಿಕಿತ್ಸೆ ಕೊಡಿಸುತ್ತಿದ್ದರು. ಈ ಮಧ್ಯೆ ಗುಂಡೂರಾಯರ ನೇತೃತ್ವದ ದೌರ್ಜನ್ಯ, ದಬ್ಬಾಳಿಕೆ, ಜನವಿರೋಧಿ ನೀತಿಗಳ ವಿರುದ್ಧ 1981 ರಲ್ಲಿ ಐತಿಹಾಸಿಕ ನರಗುಂದ, ನವಲಗುಂದ ರೈತ ಬಂಡಾಯ ಸ್ಫೋಟಿಸಿತು.

ಆಗಿನ ಮುಖ್ಯಮಂತ್ರಿ ಗುಂಡೂರಾಯರು ಚಳುವಳಿ ಮಾಡುತ್ತಿದ್ದ ರೈತರನ್ನು 'ಬಾಡಿಗೆ ರೈತರು' ಎಂದು ಕರೆದು ಅವಮಾನಿಸಿದ್ದು ಎಲ್ಲ ಕಡೆ ಆಕ್ರೋಶವನ್ನು ಹುಟ್ಟು ಹಾಕಿತ್ತು. ಈ ದುಷ್ಟತನದ ಧೋರಣೆ ವಿರುದ್ಧ ವ್ಯಾಪಕವಾಗಿ ಪ್ರತಿಭಟನೆಗಳು ಆರಂಭವಾದವು. ಕೋಲಾರ ಜಿಲ್ಲೆಯಲ್ಲಿ ಎಸ್. ಎಫ್.ಐ.ನಿಂದ ಪ್ರತಿಭಟನೆ ನಡೆಯಿತು. ಸುಮಾರು 1,500 ವಿದ್ಯಾರ್ಥಿಗಳ ಬೃಹತ್ ಮೆರವಣಿಗೆ ಹೊರಟಿತ್ತು. 300 ರಷ್ಟಿದ್ದ ದೊಡ್ಡ ಪೊಲೀಸ್ ಪಡೆ ಮೆರವಣಿಗೆಯನ್ನು ತಡೆಯಲು ಪ್ರಯತ್ನಿಸುತ್ತಿತ್ತು. ಕಾಲೇಜಿನಿಂದ ಸುಮಾರು 200-300 ಮೀಟರ್ ದೂರದಲ್ಲಿ ಸರ್ಕಲ್‌ನಲ್ಲಿ ಘರ್ಷಣೆ-ಗಲಾಟೆಗಳು ಶುರುವಾಯಿತು. ಪೊಲೀಸರು ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿದರು. 'ಟಿಯರ್ ಗ್ಯಾಸ್'ಗಳನ್ನು ಸಿಡಿಸಿದರು. ವಿದ್ಯಾರ್ಥಿಗಳು ಪೊಲೀಸರ ದೌರ್ಜನ್ಯವನ್ನು ತೀವ್ರವಾಗಿ ಪ್ರತಿಭಟಿಸಿದರು. ಕೊನೆಗೆ ಪೊಲೀಸರು ಗುಂಡು ಹಾರಿಸಿ ಫೈರಿಂಗ್‌ನಲ್ಲಿ ಶಿವಾನಂದ ಎಂಬ ಯುವಕ ಪ್ರಾಣ ಕಳೆದುಕೊಂಡ. ಈ ಸಂದರ್ಭದಲ್ಲಿ ಬಯ್ಯಾರೆಡ್ಡಿ ಮುಂತಾದವರು ಪೊಲೀಸರಿಂದ ತಪ್ಪಿಸಿಕೊಳ್ಳಲು ಸುರಕ್ಷಿತ ಜಾಗ ಹುಡುಕಿಕೊಂಡು ಬೆಂಗಳೂರಿನ ಸುಲ್ತಾನ್ ಪೇಟೆಯಲ್ಲಿದ್ದ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಕಚೇರಿಗೆ ಬಂದರು. ಅಲ್ಲಿನ ಸಂಗಾತಿಗಳ ಪರಿಚಯ-ಬಾಂಧವ್ಯ ಬೆಳೆಯಿತು.

ಆಗ ನರಗುಂದ-ನವಲಗುಂದ ರೈತ ಚಳುವಳಿಯನ್ನು ಸಮನ್ವಯ ಮಾಡುತ್ತಿದ್ದ ಕೇಂದ್ರವು ಈಗ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ ಇರುವ ಜಾಗದಲ್ಲಿತ್ತು. ಜನತಾ ಪಕ್ಷ, ಸಿಪಿಐ, ಸಿಪಿಐ(ಎಂ) ಮುಂತಾದ ಪಕ್ಷಗಳೆಲ್ಲಾ ಸೇರಿ 'ಜನತಾ ರಂಗ' ಎಂಬ ವೇದಿಕೆಯನ್ನು ಮಾಡಿಕೊಂಡು ರೈತ ಚಳುವಳಿಯ ಬೆಂಬಲಕ್ಕೆ ನಿಂತಿದ್ದವು. ಚಿಂತಾಮಣಿಯ ಹೋರಾಟಗಾರರು ಉಳಿಯಲು ಬಯ್ಯಾರೆಡ್ಡಿಯವರನ್ನು ಆ ರೈತ ಚಳುವಳಿಯ ಕೇಂದ್ರಕ್ಕೆ ಕಳಿಸಿಕೊಡಲಾಯಿತು. ಅವರು ಆ ಟೆಂಟ್‌ನಲ್ಲಿ 2-3 ದಿನ ಇದ್ದರು. ರೈತರು ಜಾತಾದಲ್ಲಿ ಸಾಗಿ ಬರುವಾಗ ಜನರು ಕೊಟ್ಟ ರೊಟ್ಟಿ ಹೆಚ್ಚಾಗಿ ಅವನ್ನು ಆ ಟೆಂಟ್‌ನಲ್ಲಿ ಸಂಗ್ರಹ ಮಾಡಿ ಇಡಲಾಗಿತ್ತು. ಅಷ್ಟು ಜನ ಬೆಂಬಲ ಚಳುವಳಿಗೆ ಇತ್ತು. ಬಯ್ಯಾರೆಡ್ಡಿಯವರು ಇದಕ್ಕೆಲ್ಲಾ ಸಾಕ್ಷಿಯಾದರು.

ಚಿಂತಾಮಣಿ ಹೋರಾಟದ ಪ್ರಕರಣದಲ್ಲಿ ಬಯ್ಯಾರೆಡ್ಡಿಯವರು ಎ-2. ಅಂದರೆ ಎರಡನೇ ಆರೋಪಿ. ಬೆಂಗಳೂರಿನಿಂದ ಹೋರಾಟಗಾರರಿಗೆ ವಕೀಲ ಸಂಗಾತಿಗಳ ಸಹಾಯ, ಮಾರ್ಗದರ್ಶನ ದೊರಕಿತು. ಮತ್ತೊಂದು ಕಡೆ ರೈತ ಚಳುವಳಿಯ ಕಾವು ಜೋರಾಗುತ್ತಿತ್ತು. ಬಾಗೇಪಲ್ಲಿಯಲ್ಲಿ ರೈತರ ಪ್ರತಿಭಟನೆಯ ಮೇಲೆ ಗೋಲಿಬಾರ್ ನಡೆದು ಇಬ್ಬರು ರೈತರು ಪ್ರಾಣ ಕಳೆದುಕೊಂಡಿದ್ದರು. ಗೋಲಿಬಾರ್ ವಿರುದ್ಧ, ರೈತ ಚಳುವಳಿಗೆ ಸೌಹಾರ್ದತೆಯಾಗಿ ಚಿಂತಾಮಣಿಯಿಂದ ಹುತಾತ್ಮ ಶಿವಾನಂದ ಹಾಗೂ ರೈತರ ನೆನಪಿನಲ್ಲಿ ಜ್ಯೋತಿಯನ್ನು ಬೆಂಗಳೂರಿಗೆ ತರುವ ಪಾದಯಾತ್ರೆಯೊಂದನ್ನು ಯೋಜಿಸಲಾಗಿತ್ತು. ಆ ಪಾದಯಾತ್ರೆಯನ್ನು ಸಂಘಟಿಸಿದವರಲ್ಲಿ ಬಯ್ಯಾರೆಡ್ಡಿಯವರೂ ಒಬ್ಬರು. ಪಾದಯಾತ್ರೆಯು ಬೆಂಗಳೂರಿಗೆ ತಲುಪಿದಾಗ ಬೆಂಗಳೂರಿನ ಜನ ಭಾರಿ ಸಂಖ್ಯೆಯಲ್ಲಿ ಬರಮಾಡಿಕೊಂಡರು.

ರಾಜ್ಯ ರಾಜಕೀಯ ಪರಿಸ್ಥಿತಿಯನ್ನೇ ಬದಲಿಸಿದ ಆ ಐತಿಹಾಸಿಕ ರೈತ ಹೋರಾಟ, ರೈತ-ಕಾರ್ಮಿಕರ ಸಖ್ಯತೆ ಇವುಗಳನ್ನು ಕಂಡು ಬಯ್ಯಾರೆಡ್ಡಿಯವರು ಚಳುವಳಿಯಲ್ಲಿ ಇನ್ನಷ್ಟು ಗಟ್ಟಿಯಾದರು. ರೈತ-ಕಾರ್ಮಿಕರ-ವಿದ್ಯಾರ್ಥಿಗಳ ಈ ಹೋರಾಟದ ಫಲವಾಗಿ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮ ಕಾಂಗ್ರೆಸೇತರ ಸರಕಾರವಾದ ಜನತಾ ಪಕ್ಷದ ಸರಕಾರ ಅಧಿಕಾರಕ್ಕೆ ಬಂದಿತು.

1984 ರಲ್ಲಿ ಬೆಂಗಳೂರಿನಲ್ಲಿ ನಡೆದ ಎಸ್. ಎಫ್.ಐ. ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಯಾದ ಬಯ್ಯಾರೆಡ್ಡಿಯವರು 1988 ರ ಜನವರಿಯಲ್ಲಿ ಗುಲ್ಬರ್ಗಾ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾದರು. ಈ ಸಮ್ಮೇಳನದಲ್ಲಿ ಎಸ್.ವೈ.ಗುರುಶಾಂತ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಈ ಜೋಡಿ ಕರ್ನಾಟಕ ರಾಜ್ಯವ್ಯಾಪಿ ವಿದ್ಯಾರ್ಥಿ ಚಳುವಳಿಯನ್ನು ಬಲಗೊಳಿಸಲು ಶ್ರಮಿಸಿತು. ಐ.ಟಿ.ಐ.ವಿದ್ಯಾರ್ಥಿಗಳ ಹೋರಾಟ, ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ಬಸ್‌ಪಾಸ್ ರದ್ದತಿ ವಿರುದ್ಧ ಯಶಸ್ವಿ ಹೋರಾಟ, ರೇಷ್ಮೆ ಕೃಷಿ ವಿದ್ಯಾರ್ಥಿಗಳ ಹೋರಾಟ, ಶಿಕ್ಷಣ ಶುಲ್ಕಗಳ ಏರಿಕೆ ವಿರುದ್ಧದ ಹಲವು ಹೋರಾಟಗಳು, ಹಾಸ್ಟೆಲ್ ವಿದ್ಯಾರ್ಥಿಗಳ ಹೋರಾಟ ಹೀಗೆ ಹತ್ತು ಹಲವು ಹೋರಾಟಗಳನ್ನು ರೂಪಿಸುವಲ್ಲಿ ಬಯ್ಯಾರೆಡ್ಡಿಯವರು ನಿರ್ಣಾಯಕ ಪಾತ್ರವಹಿಸಿದರು. ಶಿಕ್ಷಣದ ವ್ಯಾಪಾರೀಕರಣ, ಖಾಸಗೀಕರಣ, ಕೋಮುವಾದೀಕರಣದ ವಿರುದ್ಧದ ರಾಜ್ಯವ್ಯಾಪಿ ಪ್ರಚಾರಾಂದೋಲನದ ಪ್ರಧಾನ ಚಾಲಕ ಶಕ್ತಿಯಾಗಿ ಬಯ್ಯಾರೆಡ್ಡಿಯವರು ದುಡಿದರು.

ವಿಷಮ ವಾತಾವರಣದಲ್ಲೂ..

ಬಯ್ಯಾರೆಡ್ಡಿಯವರು ವಿದ್ಯಾರ್ಥಿ ಚಳುವಳಿಯ ರಾಜ್ಯನಾಯಕರಾಗಿ ಬಂದ ಸಂದರ್ಭವು ದೇಶದಲ್ಲಿ ಕೋಮುವಾದಿ ಶಕ್ತಿಗಳು ಇಟ್ಟಿಗೆ ಯಾತ್ರೆ, ರಥಯಾತ್ರೆ ಮುಂತಾದ ಯಾತ್ರೆಗಳ ಮೂಲಕ ಜನರಲ್ಲಿ ಕೋಮುದ್ವೇಷವನ್ನು ಹರಡುತ್ತಾ ತಮ್ಮ ವಿಕೃತ ಹೆಡೆಗಳನ್ನು ಎತ್ತುತ್ತಿದ್ದ ಕಾಲವಾಗಿತ್ತು. ಮತ್ತೊಂದೆಡೆ ಅಂತರರಾಷ್ಟ್ರೀಯವಾಗಿ ಸೋವಿಯತ್ ರಷ್ಯಾ ಮತ್ತು ಪೂರ್ವ ಯೂರೋಪಿನ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಗಳು ಕುಸಿಯುತ್ತಿದ್ದ ಸಂದರ್ಭವಾಗಿತ್ತು. ಇಂತಹ ವಿಷಮ ಸಾಮಾಜಿಕ ವಾತಾವರಣದಲ್ಲಿಯೂ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ ಘೋಷಣೆಗಳನ್ನು ಉಳ್ಳ ವಿದ್ಯಾರ್ಥಿ ಚಳುವಳಿಯ ತೀವ್ರತೆ ಕಡಿಮೆಯಾಗದಂತೆ, ಕಾವು ಕಳೆದುಕೊಳ್ಳದಂತೆ ಕಾರ್ಯಕರ್ತರಲ್ಲಿ ನೈತಿಕ ಸ್ಥೈರ್ಯವನ್ನು ತುಂಬುವಲ್ಲಿ ಬಯ್ಯಾರೆಡ್ಡಿಯವರು ಪ್ರಮುಖ ಪಾತ್ರವಹಿಸಿದರು. ಆ ಕಾಲಘಟ್ಟದಲ್ಲಿ ಜಗತ್ತಿನ ಉದ್ದಗಲದ 'ಯುದ್ಧ-ಬೇಡ - ಶಾಂತಿ ಬೇಕು' ಎಂಬ ಆಂದೋಲನದ ಭಾಗವಾಗಿ, ಹಾಗೆಯೇ ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟಗಾರ ನೆಲ್ಸನ್ ಮಂಡೆಲಾ ಅವರ ಬಿಡುಗಡೆಗಾಗಿ ನಡೆದ ವ್ಯಾಪಕ ಆಂದೋಲನ ಸಹಿ ಸಂಗ್ರಹ ಚಳುವಳಿಗಳಲ್ಲಿಯೂ, ಕೋಮುವಾದದ ಅಪಾಯಗಳನ್ನು ಮನಗಾಣಿಸಿ, ಕೋಮುಸೌಹಾರ್ದತೆಯನ್ನು ಬೆಸೆಯುವ ಉದ್ದೇಶದ ನಾನಾ ಕಾರ್ಯ ಚಟುವಟಿಕೆಗಳ ಯಶಸ್ಸಿನಲ್ಲಿಯೂ ಸಕ್ರಿಯ ಪಾತ್ರ ವಹಿಸಿದರು. ಮುಂದೆ ಬಾಬರಿ ಮಸೀದಿ ನಾಶದ ವಿರುದ್ಧ, ಸಮಾಜದ ಸಾಮರಸ್ಯದ ರಕ್ಷಣೆಗಾಗಿ ವಿದ್ಯಾರ್ಥಿಗಳ ನಡುವೆ ನಡೆಸಲಾದ ವ್ಯಾಪಕ ಸಹಿ ಸಂಗ್ರಹ-ಪ್ರಚಾರಾಂದೋಲನ ಅಂತಹ ಮತ್ತೊಂದು ಉದಾಹರಣೆ. ಸಾಮ್ರಾಜ್ಯಶಾಹಿ ಅಮೇರಿಕದ ದಿಗ್ಬಂಧನಗಳಿಂದ ಬಿಕ್ಕಟ್ಟಿಗೆ ಸಿಲುಕಿದ ಸಮಾಜವಾದಿ ಕ್ಯೂಬಾ ದೇಶಕ್ಕೆ ಸೌಹಾರ್ದ ಬೆಂಬಲವನ್ನು ಕ್ರೋಢೀಕರಿಸಿ, ಸಹಾಯ ನೀಡುವ ದೇಶವ್ಯಾಪಿ ಆಂದೋಲನವನ್ನು ರಾಜ್ಯದಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳ ನಡುವೆ ಯಶಸ್ವಿಗೊಳಿಸುವಲ್ಲಿ ಮುತುವರ್ಜಿ ವಹಿಸಿದರು. ರಾಜ್ಯದ ವಿದ್ಯಾರ್ಥಿಗಳಿಂದ ಕ್ಯೂಬಾದ ವಿದ್ಯಾರ್ಥಿಗಳಿಗೆ ಪೆನ್ನು, ಪೆನ್ಸಿಲ್ಲು, ಲೇಖನ ಸಾಮಾಗ್ರಿಗಳನ್ನು ಸಂಗ್ರಹಿಸಿ ಕೊಡಲಾಯಿತು. ರಾಜ್ಯದ ಆ ಕಾಲದ ದಲಿತ, ರೈತ, ಕಾರ್ಮಿಕ, ಮಹಿಳಾ, ಕೂಲಿಕಾರ ಮುಂತಾದ ನಾನಾ ಜನಚಳುವಳಿಗಳಿಗೆ ಸೌಹಾರ್ದ ಬೆಂಬಲವನ್ನು ಕ್ರೋಢೀಕರಿಸುವುದು ಮುಂತಾದವುಗಳಲ್ಲಿ ಬಯ್ಯಾರೆಡ್ಡಿಯವರು ಮುಖ್ಯ ಪಾತ್ರವನ್ನು ವಹಿಸಿದರು.

ಅಧ್ಯಯನ ಶಿಬಿರಗಳು

ರಾಜ್ಯ ಕೇಂದ್ರ ಬೆಂಗಳೂರಿನಲ್ಲಿ ಎಸ್. ಎಫ್.ಐ.ನಿಂದ ಸಂಘಟಿಸಲಾಗುತ್ತಿದ್ದ 'ಅಧ್ಯಯನ ಕೂಟ'ಗಳು ಆ ಕಾಲದ ಹತ್ತು ಹಲವು ವಿಷಯಗಳ ಬಗೆಗೆ ವಿದ್ಯಾರ್ಥಿ ಕಾರ್ಯಕರ್ತರಿಗೆ ವೈಚಾರಿಕ ಸ್ಪಷ್ಟತೆ ನೀಡಿದವು. ವಿದ್ಯಾರ್ಥಿ ಚಳುವಳಿಯ ಕಾರ್ಯಕರ್ತರಿಗಾಗಿ ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಸಂಘಟಿಸಲಾಗುತ್ತಿದ್ದ ರಾಜ್ಯಮಟ್ಟದ ಒಂದು ವಾರ ಕಾಲದ ಅಧ್ಯಯನ ಶಿಬಿರಗಳು ವಿದ್ಯಾರ್ಥಿ ಚಳುವಳಿಯ ಕಾರ್ಯಕರ್ತರು, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಸ್ಪಷ್ಟತೆ ಮತ್ತು ಸ್ಫೂರ್ತಿ ಪಡೆದುಕೊಳ್ಳುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದವು. ಪ್ರತಿ ಕಾರ್ಯಕರ್ತರ ವೈಯುಕ್ತಿಕ ಆಸಕ್ತಿ, ಗುಣ-ಸ್ವಭಾವ, ಸಮಸ್ಯೆಗಳನ್ನು ಅರಿತು ಅವುಗಳಿಗೆ ಸ್ಪಂದಿಸಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಅವರು ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ತೊಡಗುವಂತೆ ಮಾಡುವಲ್ಲಿ, ಉತ್ತಮ ಕಾರ್ಯಕರ್ತರನ್ನಾಗಿ ರೂಪಿಸುವಲ್ಲಿ ಬಯ್ಯಾರೆಡ್ಡಿಯವರು ವಿಶೇಷ ಪಾತ್ರವಹಿಸಿದರು.

ಗ್ಯಾಟ್-ಡಂಕೆಲ್
ಜಾಗತೀಕರಣ ನೀತಿಗಳ ವಿರುದ್ಧ

1991ರಲ್ಲಿ ಆರಂಭವಾದ ಜಾಗತೀಕರಣದ ನೀತಿಗಳ ಮುಂದುವರಿಕೆಯಾಗಿ 1994 ರಲ್ಲಿ ಭಾರತವು 'ಗ್ಯಾಟ್-ಡಂಕೆಲ್' ಒಪ್ಪಂದಗಳಿಗೆ ಸಹಿ ಹಾಕುವ ವಿರುದ್ಧ ನಡೆದ ಚಳುವಳಿಗಳಲ್ಲಿ ಬಯ್ಯಾರೆಡ್ಡಿಯವರು ಪ್ರಮುಖ ಪಾತ್ರ ವಹಿಸಿದರು. ಕೇಂದ್ರ ಸರಕಾರಿ ಕಚೇರಿಗಳ ಮುತ್ತಿಗೆಗಳು, 'ಜೈಲ್ ಭರೋ' ಹೋರಾಟದ ಭಾಗವಾಗಿ ಒಂದು ವಾರ ಕಾಲದ (ಬೆಂಗಳೂರು ಸೆಂಟ್ರಲ್) 'ಜೈಲುವಾಸ'ದ ಚಳುವಳಿಯಲ್ಲಿ ವಿದ್ಯಾರ್ಥಿ ಕಾರ್ಯಕರ್ತರೊಂದಿಗೆ ಪಾಲ್ಗೊಂಡಿದ್ದರು. ಈ ಚಳುವಳಿಯ ಭಾಗವಾಗಿ ಮುಂದೆ 'ರಾಜಭವನ್ ಮುತ್ತಿಗೆ'ಯಂತಹ ತೀವ್ರತರದ ಹೋರಾಟದಲ್ಲಿ ರಾಜ್ಯದಲ್ಲಿ ಅದೇ ಮೊದಲ ಬಾರಿಗೆ ಬಳಸಲಾದ 'ವಾಟರ್ ಜೆಟ್' ಹಾಗೂ ಪೊಲೀಸರ ಲಾಠಿಗಳಿಗೆ ಎದೆಯೊಡ್ಡಿ ನಿಂತು, ತಲೆ ಬುರುಡೆ ಒಡೆದು ರಕ್ತ ಸೋರಿದರೂ ಹಿಮ್ಮೆಟ್ಟದೇ ಪ್ರತಿಭಟನೆಯಲ್ಲಿ ಗಟ್ಟಿಯಾಗಿ ನಿಂತವರಲ್ಲಿ ಜಿ.ಸಿ.ಬಯ್ಯಾರೆಡ್ಡಿಯವರೂ ಒಬ್ಬರು.

ಈ ಹೋರಾಟದಲ್ಲಿ ಪೊಲೀಸರ ಅಮಾನುಷ ಹಲ್ಲೆಯಿಂದ ವಿಮಾ ನೌಕರರ ಚಳುವಳಿಯ ಕೆ.ವಿ. ಶ್ರೀನಿವಾಸನ್ ಅವರು ಹೃದಯಾಘಾತಕ್ಕೆ ಒಳಗಾದರು. ಆರ್. ಶ್ರೀನಿವಾಸ್, ಪಿ. ಜಗನ್ನಾಥ್ ಮುಂತಾದವರ ತಲೆ ಒಡೆಯಿತು. ಸುರೇಂದ್ರ ರಾವ್ ಮುಂತಾದವರ ಕೈಮುರಿಯಿತು. ಮಿಲ್ಕಿಯೋರ್ ಮುಂತಾದವರ ಹಲ್ಲುಗಳು ಮುರಿದವು. ಇನ್ನೂ ಹಲವರು ತೀವ್ರವಾಗಿ ಗಾಯಗೊಂಡರು.

ಬಯ್ಯಾರೆಡ್ಡಿಯವರು ವಿದ್ಯಾರ್ಥಿ ಚಳುವಳಿಯಿಂದ 1994 ರಲ್ಲಿ ಬಿಡುಗಡೆಯಾದ ನಂತರ ಕರ್ನಾಟಕ ಪ್ರಾಂತ ರೈತ ಸಂಘದ ಜವಾಬ್ದಾರಿಯನ್ನು ವಹಿಸಿಕೊಂಡು ಸಾಮೂಹಿಕ ಚಳುವಳಿಯನ್ನು ಕಟ್ಟಲು ಶ್ರಮಿಸಿದರು. ಮುಂದೆ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ, ನಂತರ ರಾಜ್ಯ ಅಧ್ಯಕ್ಷರಾಗಿ ಇಲ್ಲಿಯವರೆಗೂ ಕೆಲಸ ಮಾಡುತ್ತಾ ಬಂದಿದ್ದರು.

ಬಯ್ಯಾರೆಡ್ಡಿಯವರು 1991 ರಲ್ಲಿ ಮಂಗಳೂರಿನಲ್ಲಿ ನಡೆದ ಸಿಪಿಐ(ಎಂ)ನ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. ನಂತರ 1996 ಕೋಲಾರದಲ್ಲಿ ಪಕ್ಷದ ಸಮ್ಮೇಳನದ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿ, ಇಲ್ಲಿಯವರೆಗೂ ದುಡಿಯುತ್ತಾ ಬಂದಿದ್ದರು.

ಸಿಪಿಐ(ಎಂ) ರಾಜ್ಯ ಸಮಿತಿಯ ಸದ್ಯದ ಕೆಲವು ವಿಶೇಷ ಯೋಜನೆಗಳ ಜಾರಿಯಲ್ಲೂ ಅವರು ಬಹಳ ಮುತುವರ್ಜಿ ವಹಿಸಿದ್ದರು. ಚಳುವಳಿಯ ಹಳೆಯ ಮುಖಂಡರು, ಕಾರ್ಯಕರ್ತರ ಅಥವಾ ಅವರ ಕುಟುಂಬ ಸದಸ್ಯರ ಕಷ್ಟಗಳಿಗೆ 'ಸಾಂತ್ವನ' ಎಂಬ ಕಾರ್ಯಯೋಜನೆ ಮೂಲಕ ಸ್ಪಂದಿಸುವುದು, ನೆರವಾಗುವುದು. ಪಕ್ಷದ ರಾಜ್ಯ ಸಮಿತಿ ಕಚೇರಿಯ ಕಟ್ಟಡ ಮೇಲೆ, ಸಭೆ ಸಮಾರಂಭಗಳಿಗೆ ಈಗಿರುವುದಕ್ಕಿಂತಲೂ ದೊಡ್ಡದಾದ ಒಂದು ಸಭಾಭವನ ನಿರ್ಮಿಸುವುದು ಮತ್ತು ಹೆಚ್ಚಿನ ಕೋಣೆಗಳನ್ನು ಕಟ್ಟಿಕೊಳ್ಳುವುದು. ಪಕ್ಷದ ರಾಜ್ಯ ಸಮಿತಿ ಅಡಿ ಸುಸಜ್ಜಿತ ಗ್ರಂಥಾಲಯವೊಂದನ್ನು ರೂಪಿಸಿಕೊಳ್ಳುವುದು. ಇವೇ ಆ ಕೆಲವು ಯೋಜನೆಗಳು. ತೀವ್ರ ಅನಾರೋಗ್ಯದ ನಡುವೆಯೂ ಬಯ್ಯಾರೆಡ್ಡಿಯವರು ಪಕ್ಷದ ಈ ಯೋಜನೆಗಳ ಜಾರಿಗೆ ತುಂಬು ಆಸಕ್ತಿಯಿಂದ ಕಟಿಬದ್ಧರಾಗಿ ಶ್ರಮಿಸುತ್ತಿದ್ದರು. ತಮ್ಮ ಬದುಕಿನ ಕೊನೆಯ ದಿನಗಳವರೆಗೆ ಬಯ್ಯಾರೆಡ್ಡಿಯವರಲ್ಲಿ ಚಳುವಳಿಯ ವಿಷಯದಲ್ಲಿ ಅದೇ ಉತ್ಸಾಹ ಮತ್ತು ಬದ್ಧತೆ ಉಳಿದುಕೊಂಡಿದ್ದವು.

ಡಿಸೆಂಬರ್ 29 ರಿಂದ 31, 2024 ರವರೆಗೆ ತುಮಕೂರಿನಲ್ಲಿ ನಡೆದ ಸಿಪಿಐ(ಎಂ) 24 ನೇ ರಾಜ್ಯ ಸಮ್ಮೇಳನದಲ್ಲಿ ಅನಾರೋಗ್ಯದ ಕಾರಣದಿಂದಾಗಿ ಭಾಗಿಯಾಗಲು ಬಯ್ಯಾರೆಡ್ಡಿ ಯವರಿಗೆ ಸಾಧ್ಯವಾಗಲಿಲ್ಲ. ಬಯ್ಯಾರೆಡ್ಡಿಯವರದು ಯಾವಾಗಲೂ ನಗುಮೊಗವೇನೂ ಆಗಿರುತ್ತಿರಲಿಲ್ಲ. ಹಲವಾರು ಸಾರಿ ಅವರು ಗಂಭೀರರಾಗಿರುವಂತೆ ಕಾಣುತ್ತಿದ್ದರು. ಆದರೆ ಒಂದು ವಾರ ಕಾಲ ಐ.ಸಿ.ಯು.ನಲ್ಲಿದ್ದು ತೀರಿಕೊಂಡಿದ್ದರೂ, ಜನವರಿ 4 ರಂದು ಇ.ಎಂ.ಎಸ್. ಭವನದ ಮುಂದೆ ಗಾಜಿನ ಪೆಟ್ಟಿಗೆ ಅವರನ್ನು ಇರಿಸಲಾಗಿದ್ದಾಗ ಅವರ ಮುಖದಲ್ಲಿ ವಿಶೇಷವಾದ ನಗುಮೊಗದ ಕಳೆ ಎದ್ದು ಕಾಣುತ್ತಿತ್ತು. ಆ ನಗು ಕಮ್ಯೂನಿಸ್ಟ್ ಕಾರ್ಯಕರ್ತರ ಬಗೆಗೆ ಅವರಿಗಿದ್ದ ಅಪಾರ ಪ್ರೀತಿ-ಕಾಳಜಿಯ ಸಂಕೇತದಂತೆ ಕಾಣುತ್ತದೆ. ಕಾಂ. ಜಿ.ಸಿ. ಬಯ್ಯಾರೆಡ್ಡಿಯವರಿಗೆ ಕೆಂಪು ವಂದನೆಗಳು.

(ಮಾಹಿತಿ ಮೂಲ: ಬಯ್ಯಾರೆಡ್ಡಿಯವರ ಕುಟುಂಬದ ಹಿನ್ನೆಲೆ, ಬಾಲ್ಯದ ಪ್ರಭಾವ, ಅವರ ಆರಂಭ ಕಾಲದ ಚಳುವಳಿಯ ಅನುಭವಗಳ ಮಾಹಿತಿ ಮೂಲ ಬಯ್ಯಾರೆಡ್ಡಿಯವರೇ ಬರೆದಿರುವ ಬರಹಗಳು.)

ರೈಲ್ವೆ ರಹಸ್ಯ ಮತದಾನದ ಚುನಾವಣೆಗಳು– ಎರಡು CITU ಯೂನಿಯನ್‌ಗಳ ಮಾನ್ಯತೆ

ಆರ್. ಇಳಂಗೋವನ್

2024ರ ಡಿಸೆಂಬರ್ 4,5,6, ರಂದು 17 ವಲಯಗಳಲ್ಲಿ, ಎರಡು ಉತ್ಪಾದನಾ ಘಟಕಗಳಲ್ಲಿ ಚಿತ್ತರಂಜನ್ ಲೊಕೊಮೋಟಿವ್ ವರ್ಕ್ಸ್ ಅಂಡ್ ರೈಲ್ ಕೋಚ್ ಫ್ಯಾಕ್ಟರಿ, ಕಪುರ್ತಲಾದಲ್ಲಿ ನಡೆದ ರಹಸ್ಯ ಮತದಾನದ ಚುನಾವಣೆಯಲ್ಲಿ ಸಿಐಟಿಯು ಸಂಯೋಜಿತವಾದ ಎರಡು ಸಂಘಗಳು ಮಾನ್ಯತೆ ಪಡೆದಿವೆ. ದಕ್ಷಿಣ ರೈಲ್ವೇಯಲ್ಲಿ, 'ದಕ್ಷಿಣ ರೈಲ್ವೆ ಎಂಪ್ಲಾಯಿಸ್ ಯೂನಿಯನ್ (ಡಿಆರ್‌ಇಯು)' ಮತ್ತು ಚಿತ್ತರಂಜನ್ ಲೊಕೊಮೋಟಿವ್ ವರ್ಕ್ಸ್ ನಲ್ಲಿ 'ಚಿತ್ತರಂಜನ್ ಲೊಕೊಮೋಟಿವ್ ವರ್ಕ್ಸ್ ಲೇಬರ್ ಯೂನಿಯನ್ (ಸಿಎಲ್‌ಡಬ್ಲ್ಯೂಎಲ್‌ಯು)' ಎರಡೂ ಸಂಘಗಳು ಚುನಾವಣೆಯಲ್ಲಿ ಉತ್ತಮ ಮನ್ನಣೆ ಗಳಿಸಿಕೊಂಡಿವೆ.

ದೆಹಲಿ ಹೈಕೋರ್ಟ್‌ನಲ್ಲಿ ಸಿಐಟಿಯು ಸಂಯೋಜಿತ ದಕ್ಷಿಣ ರೈಲ್ವೇ ಎಂಪ್ಲಾಯಿಸ್ ಯೂನಿಯನ್ (DREU) ದಾಖಲು ಮಾಡಿದ ಪ್ರಕರಣವನ್ನು ಅನುಸರಿಸಿ, ರೈಲ್ವೆ ಕಾರ್ಮಿಕ ಸಂಘಟನೆಗಳ ಮಾನ್ಯತೆ (ಭಾರತೀಯ ರೈಲ್ವೆಯಲ್ಲಿ ಸದಸ್ಯತ್ವ ಪರಿಶೀಲನೆ)ಗಾಗಿ ರಹಸ್ಯ ಮತದಾನದ ಚುನಾವಣೆಗಳನ್ನು ನಡೆಸಬೇಕೆಂಬ ಹೈಕೋರ್ಟ್ ಆದೇಶಗಳನ್ನು ರೈಲ್ವೇ ಸಚಿವಾಲಯವು ಜಾರಿಮಾಡಿದೆ. ಮಾನ್ಯತೆಗಾಗಿ ಚುನಾವಣೆಯನ್ನು ನ್ಯಾಯಾಲಯವು ಕಡ್ಡಾಯಗೊಳಿಸಿದ ನಂತರ CLW ನಲ್ಲಿ ನಡೆದ ಮೊದಲ ರಹಸ್ಯ ಮತದಾನದ ಚುನಾವಣೆ ಇದಾಗಿದೆ.

ಚುನಾವಣೆಯನ್ನು ಮತ್ತಷ್ಟು ಮುಂದೂಡುವ ಪ್ರಯತ್ನ ವಿಫಲ

ಸುಪ್ರೀಂ ಕೋರ್ಟಿನ ಆದೇಶದಂತೆ 2007ರಿಂದ ಭಾರತೀಯ ರೈಲ್ವೆಯಲ್ಲಿ ರಹಸ್ಯ ಮತದಾನದ ಚುನಾವಣೆಗಳು ನಡೆಯುತ್ತಿವೆ. 2013ರಲ್ಲಿ ಎರಡನೇ ಬಾರಿಗೆ ಚುನಾವಣೆ ನಡೆದಿತ್ತು. ನಿಗದಿತ ವಿಧಿವಿಧಾನಗಳ ಪ್ರಕಾರ ಮೂರನೇ ಚುನಾವಣೆ 2019ರಲ್ಲಿ ನಡೆಯಬೇಕಿತ್ತು. 2020 ಕೈಗಾರಿಕಾ ಸಂಬಂಧಗಳು ಕೋಡ್ ಆಧಾರಿತ ಗುರುತಿಸುವಿಕೆಗಾಗಿ ನಿಯಮಗಳನ್ನು ಹೊಂದಿರುವ ನೆಪದಲ್ಲಿ ರೈಲ್ವೇ ಸಚಿವಾಲಯವು ಚುನಾವಣೆಗಳನ್ನು ನಡೆಸದಿರಲು ನಿರ್ಧರಿಸಿತು. ಆದರೆ ಕಾರ್ಮಿಕ ಸಂಘಟನೆಗಳಿಂದ ತೀವ್ರ ವಿರೋಧದಿಂದಾಗಿ ರಾಜ್ಯ ಸರ್ಕಾರಗಳು ನಿಯಮಗಳನ್ನು ರೂಪಿಸಲಿಲ್ಲ. ಇದರಿಂದಾಗಿ ಕೇಂದ್ರಕ್ಕೆ ತನ್ನ ಉದ್ದೇಶವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ. ಅಸ್ತಿತ್ವದಲ್ಲಿರುವ ನಿಯಮಗಳ ಆಧಾರದ ಮೇಲೆ ಚುನಾವಣೆಗಳನ್ನು ನಡೆಸಲು DREU ಮನವಿಯಿಂದಾಗಿ ವಿಳಂಬವಾಗಿಯಾದರೂ ಚುನಾವಣೆಗೆ ಅವಕಾಶ ಕಲ್ಪಿಸಿದೆ. ಮಳೆಗಾಲ, ರಾಜ್ಯ ವಿಧಾನಸಭೆ ಚುನಾವಣೆ, ಗೂಡ್ಸ್ ಚಟುವಟಿಕೆಗಳ ಭರಾಟೆ ಇತ್ಯಾದಿ ಕಾರಣಗಳನ್ನು ಮುಂದಿಟ್ಟುಕೊಂಡು ರೈಲ್ವೆ ಸಚಿವಾಲಯ ಚುನಾವಣೆಯನ್ನು ಮುಂದೂಡಲು ಸಾಕಷ್ಟು ಪ್ರಯತ್ನಿಸಿದರೂ, ಅಂತಿಮವಾಗಿ ಚುನಾವಣೆ ನಡೆಸುವಂತೆ ನ್ಯಾಯಾಲಯವು ಆದೇಶಿಸಿತು.

ನಿಯಮಗಳ ಪ್ರಕಾರ, ನಿರ್ದಿಷ್ಟ ಸಂದರ್ಭಗಳಲ್ಲಿ ಎರಡು ಒಕ್ಕೂಟಗಳನ್ನು ಗುರುತಿಸಬಹುದು. ಅವು ಮುಖ್ಯವಾಗಿ ರೈಲ್ವೆ ವಲಯ ಅಥವಾ ಉತ್ಪಾದನಾ ಘಟಕದಲ್ಲಿನ ಒಟ್ಟು ಮತದಾರರಲ್ಲಿ ಎರಡು ಒಕ್ಕೂಟಗಳು ಶೇಕಡಾ 30 ಮತಗಳನ್ನು ಪಡೆದರೆ, ಎರಡಕ್ಕೂ ಮಾನ್ಯತೆ ನೀಡಲಾಗುತ್ತದೆ. ಒಂದು ಒಕ್ಕೂಟವು ಒಟ್ಟು ಮತದಾರರಲ್ಲಿ 30 ಪ್ರತಿಶತವನ್ನು ಪಡೆದುಕೊಂಡು, ಇನ್ನೊಂದು ಒಕ್ಕೂಟವು ಚಲಾವಣೆಯಾದ ಮಾನ್ಯ ಮತಗಳಲ್ಲಿ 35 ಪ್ರತಿಶತವನ್ನು ಪಡೆದುಕೊಂಡರೂ ಎರಡೂ ಒಕ್ಕೂಟಗಳಿಗೆ ಮಾನ್ಯತೆ ನೀಡಲಾಗುತ್ತದೆ. ಒಟ್ಟು ಮತದಾರರಲ್ಲಿ ಶೇ. 15ರಷ್ಟು ಮತಗಳನ್ನು ಗಳಿಸುವ ಒಕ್ಕೂಟಕ್ಕೆ ಸೂಚನಾ ಫಲಕಗಳನ್ನು ಹಾಕುವುದಕ್ಕೆ, ಗೇಟ್ ಮೀಟಿಂಗ್‌ಗಳನ್ನು ನಡೆಸುವುದಕ್ಕೆ ಅರ್ಹತೆ ಸಿಗುತ್ತದೆ. ಈ ನಿಬಂಧನೆಯು ಸಣ್ಣ ಸಮುದಾಯಗಳಿಗೆ ಪ್ರಯೋಜನಕಾರಿಯಾಗಿದ್ದರೂ, ಇದನ್ನು ಪ್ರಮುಖವಾಗಿ ಆರೆಸ್ಸೆಸ್ ಬೆಂಬಲಿತ ಭಾರತೀಯ ರೈಲು ಮಜ್ದೂರ್ ಸಂಘ (BRMS)ದ ಅನುಕೂಲಕ್ಕಾಗಿ ಪರಿಚಯಿಸಲಾಗಿದೆ. ಭಾರತೀಯ ರೈಲ್ವೇ ಚುನಾವಣೆಯಲ್ಲಿ ಪ್ರಮುಖ ಸ್ಪರ್ಧಿಗಳೆಂದರೆ AIRF ಮತ್ತು NFIR ಯೂನಿಯನ್‌ಗಳು. AIRF ಸಂಘವು HMS ನೊಂದಿಗೆ ಸಂಯೋಜಿತವಾಗಿದ್ದರೆ, NFIR ಸಂಘವು INTUC ಯೊಂದಿಗೆ ಸಂಯೋಜಿತವಾಗಿದೆ. ಈ ಎರಡೂ ಸಂಘಗಳು ಚುನಾವಣೆಗಳಿಲ್ಲದೆ ತಮ್ಮ ಮಾನ್ಯತೆ ಪಡೆದ ಸ್ಥಾನಮಾನವನ್ನು ಉಳಿಸಿಕೊಂಡವು. ಇದು ರೈಲ್ವೆ ಕಾರ್ಮಿಕರಲ್ಲಿ ಆ ಸಂಘಗಳ ಮೇಲಿನ ಅಸಮಾಧಾನಕ್ಕೆ ಕಾರಣವಾಯಿತು. ಈ ಸಂಘಗಳ ಮುಖಂಡರು ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ಮತ್ತು ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್)ಗಳಿಗೆ ಬೆಂಬಲ ನೀಡುತ್ತಿದ್ದಾರೆ. ಅಲ್ಲದೆ, ಖಾಸಗೀಕರಣ, ಹೊರಗುತ್ತಿಗೆ, ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದು, ಹೊಸ ಹುದ್ದೆಗಳ ಸೃಷ್ಟಿಗೆ ನಿಷೇಧ, ಭದ್ರತಾ ನಿಯಮಗಳ ಉಲ್ಲಂಘನೆಯನ್ನು ಪರಿಣಾಮಕಾರಿಯಾಗಿ ಪ್ರತಿಭಟಿಸದಿರುವುದು, ಹೂಡಿಕೆ ವಿಸ್ತರಣೆ ಮತ್ತು ಭದ್ರತೆಗಾಗಿ ಮೂಲಸೌಕರ್ಯಗಳ ಸೃಷ್ಟಿ ಇವುಗಳಿಗಾಗಿ ಒತ್ತಡ ತರುವಲ್ಲಿ ವಿಫಲರಾಗಿದ್ದಾರೆ ಎಂಬ ಟೀಕೆಗಳು ಕೇಳಿಬಂದಿವೆ.

ಮತ್ತೊಂದು ಒಕ್ಕೂಟ, ಇಂಡಿಯನ್ ರೈಲ್ ಮಜ್ದೂರ್ ಸಂಘ (BRMS), RSS-ಸಂಯೋಜಿತ BMS ಗೆ ಸಂಯೋಜಿತವಾಗಿದೆ. ರೈಲ್ವೆಯಲ್ಲಿ ಇದರ ಉಪಸ್ಥಿತಿಯು ತೀರಾ ಕಡಿಮೆ. ಆದಾಗ್ಯೂ, BRMS ಗೆ ಬೆಂಬಲ ನೀಡುವಂತೆ ಅಖಿಲ ಭಾರತ ಎಸ್ಸಿ ಮತ್ತು ಎಸ್ಟಿ ರೈಲ್ವೆ ನೌಕರರ ಸಂಘ ಮತ್ತು ಅಖಿಲ ಭಾರತ ಒಬಿಸಿ ರೈಲ್ವೆ ನೌಕರರ ಸಂಘಕ್ಕೆ ರೈಲ್ವೆ ಸಚಿವರು ಆದೇಶಿಸಿದ್ದಾರೆ ಎಂಬ ಮಾಹಿತಿ ಇದೆ. ಅನೇಕ ರೈಲ್ವೇ ವಲಯಗಳಲ್ಲಿ ಪ್ರಬಲವಾದ ಪರ್ಯಾಯದ ಅನುಪಸ್ಥಿತಿಯಲ್ಲಿ, AIRF ಮತ್ತು NFIR ಒಂದೊಂದೂ 13 ರೈಲ್ವೆ ವಲಯಗಳಲ್ಲಿ ಮಾನ್ಯತೆ ಪಡೆಯುವಲ್ಲಿ ಯಶಸ್ವಿಯಾಗಿದೆ. ನಿಯಮಗಳ ಪ್ರಕಾರ, ಒಂದು ಸಂಘವು ಮಾನ್ಯತೆ ಪಡೆಯಲು ಕನಿಷ್ಠ ಆರು ರೈಲ್ವೆಯಲ್ಲಿ ಮನ್ನಣೆ ಪಡೆದಿರಬೇಕು. ಭಾರತೀಯ ರೈಲ್ವೆಯಲ್ಲಿ ಮತದಾನ ಮಾಡಿದವರ ಒಟ್ಟು ಮಾನ್ಯ ಮತಗಳಲ್ಲಿ ಶೇಕಡಾ 15ರಷ್ಟು ಪಡೆದಿರಬೇಕು. ಭಾರತೀಯ ರೈಲ್ವೇ ಜೊತೆಗೆ ಉತ್ಪಾದನಾ ಘಟಕಗಳಲ್ಲಿ ಎರಡು ಸಿಐಟಿಯು ಸಂಯೋಜಿತ ಸಂಘಗಳಿವೆ. ದಕ್ಷಿಣ ರೈಲ್ವೇಯಲ್ಲಿ, 'ದಕ್ಷಿಣ ರೈಲ್ವೆ ಎಂಪ್ಲಾಯಿಸ್ ಯೂನಿಯನ್ (ಡಿಆರ್‌ಇಯು)' ಮತ್ತು ಚಿತ್ತರಂಜನ್ ಲೊಕೊಮೋಟಿವ್ ವರ್ಕ್ಸ್ ನಲ್ಲಿ 'ಚಿತ್ತರಂಜನ್ ಲೊಕೊಮೋಟಿವ್ ವರ್ಕ್ಸ್ ಲೇಬರ್ ಯೂನಿಯನ್' ಈ ಚುನಾವಣೆಯಲ್ಲಿ ಎರಡೂ ಸಂಘಗಳು ಉತ್ತಮ ಮನ್ನಣೆ ಗಳಿಸಿಕೊಂಡಿವೆ.

106 ವರ್ಷದ ಇತಿಹಾಸ ಹೊಂದಿರುವ DREU

ದಕ್ಷಿಣ ರೈಲ್ವೆ ಎಂಪ್ಲಾಯಿಸ್ ಯೂನಿಯನ್ (DREU) ಎಂಬುದು 1918ರಲ್ಲಿ ಸ್ಥಾಪನೆಯಾದ ಒಂದು ಐತಿಹಾಸಿಕ ಸಂಘಟನೆಯಾಗಿ 106 ವರ್ಷ ಪೂರೈಸಿದೆ. ಸ್ವಾತಂತ್ರ್ಯ ಹೋರಾಟವನ್ನು ಕಾರ್ಮಿಕರ ಬೇಡಿಕೆಗಳೊಂದಿಗೆ ಜೋಡಿಸಿ, ರಾಜಿ ರಹಿತ ಹೋರಾಟಗಳನ್ನು ಆರಂಭಿಸಿದ ಶ್ರೀಮಂತ ಪರಂಪರೆಯು ಈ ಸಂಘಕ್ಕೆ ಇದೆ. ಸ್ವಾತಂತ್ರ್ಯಾ ನಂತರ, ಡಿಆರ್‌ಇಯು ರೈಲ್ವೆ ಕಾರ್ಮಿಕರ ಸಮಸ್ಯೆಗಳನ್ನು ನಿರಂತರವಾಗಿ ಪರಿಹರಿಸುತ್ತಲೇ, ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಮತ್ತು ಜನವಿರೋಧಿ ನೀತಿಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿ ನಿಂತಿದೆ. ರಾಷ್ಟ್ರೀಯ ಪಿಂಚಣಿ ಯೋಜನೆ, ಏಕೀಕೃತ ಪಿಂಚಣಿ ಯೋಜನೆ, ಖಾಸಗೀಕರಣ, ಹೊರಗುತ್ತಿಗೆ ಮುಂತಾದ ನವ ಉದಾರವಾದಿ ನೀತಿಗಳ ವಿರುದ್ಧ ಸಂಘವು ವಿವಿಧ ಹೋರಾಟಗಳಿಗೆ ನಾಯಕತ್ವ ನೀಡುತ್ತಾ ಬಂದಿದೆ. ರೈಲ್ವೇ ಕಾಯಿದೆಯಡಿ ದೊಡ್ಡ ಸಂಖ್ಯೆಯಲ್ಲಿ ನೇಮಕಗೊಂಡ ಕ್ಯಾಶುಯಲ್ ಕಾರ್ಮಿಕರನ್ನು ಕಾಯಂ ಮಾಡುವಲ್ಲಿ ಮತ್ತು ಅಪ್ರೆಂಟಿಸ್‌ಗಳ ಉದ್ಯೋಗಾವಕಾಶವನ್ನು ಸುಧಾರಿಸುವಲ್ಲಿಯೂ ಇದು ಯಶಸ್ವಿ ಪಾತ್ರವನ್ನು ವಹಿಸಿದೆ. ಈ ಚಟುವಟಿಕೆಯು 2007ರಲ್ಲಿ ನಡೆದ ಮೊದಲ ರಹಸ್ಯ ಮತದಾನದ ಚುನಾವಣೆಯಲ್ಲಿ ಮತ್ತು ಈಗ ಮೂರನೇ ಚುನಾವಣೆಯಲ್ಲಿ ಗೆಲುವು ಸಾಧಿಸಲು DREU ಗೆ ಸಹಾಯ ಮಾಡಿತು. AIR ಮತ್ತು ಅದರ ಅಂಗಸಂಸ್ಥೆ SRMUನ ಕಾರ್ಮಿಕ ವಿರೋಧಿ ಭಾವನೆಗಳನ್ನು ಕಾರ್ಮಿಕರಲ್ಲಿ ಬಹಿರಂಗಪಡಿಸಿದ್ದು DREU ಗೆಲುವಿಗೆ ಕೊಡುಗೆ ನೀಡಿತು.

ಶೇ. 34.11ರಷ್ಟು ಮತ ಗಳಿಸಿತು

ಈ ಚುನಾವಣೆಗಳಲ್ಲಿ, ಆಖಿಇಗಿ ಅನ್ನು ಆಲ್ ಇಂಡಿಯಾ ಸ್ಟೇಷನ್ ಮಾಸ್ಟರ್ಸ್ ಅಸೋಸಿಯೇಷನ್ (AISMA), ಆಲ್ ಇಂಡಿಯಾ ಲೋಕೋ ರನ್ನಿಂಗ್ ಸ್ಟಾಫ್ ಅಸೋಸಿಯೇಷನ್ (AILRSA) ಮತ್ತು RLLF (VCK ಪಾರ್ಟಿಯೊಂದಿಗೆ ಸಂಯೋಜಿತವಾಗಿದೆ) ಸೇರಿದಂತೆ ಒಂಬತ್ತು ಸಂಘಗಳು ಬೆಂಬಲಿಸಿದವು.



ಕೇವಲ 15,000 ಸದಸ್ಯರು ಮಾತ್ರ ಇರುವ ಡಿಆರ್ ಇಯು ಈ ಚುನಾವಣೆಯಲ್ಲಿ 26,151 ಮತಗಳನ್ನು ಗಳಿಸಿದೆ. ಇದು ಒಟ್ಟು 76,653 ಮತದಾರರಲ್ಲಿ ಶೇ. 34.11ರಷ್ಟಿದೆ. ಆದಾಗ್ಯೂ, ಇದಕ್ಕೆ ವಿರುದ್ಧವಾಗಿ AIRF-ಸಂಯೋಜಿತ SRMU, ಮತಗಳನ್ನು ಪಡೆದುಕೊಳ್ಳಲು ಹಣ, ಬಿರಿಯಾನಿ ಮತ್ತು ಮದ್ಯದ ವಿತರಣೆ ಮಾಡಿದೆ ಎಂಬ ಆರೋಪಗಳ ಹೊರತಾಗಿಯೂ, DREU ಗಿಂತ 107 ಮತಗಳ ಅಲ್ಪ ಮುನ್ನಡೆಯೊಂದಿಗೆ ಶೇ. 34.25 ಮತಗಳನ್ನು ಪಡೆದಿದೆ. 2013ರ ಚುನಾವಣೆಯಲ್ಲಿ SRMU ಶೇ. 43ರಷ್ಟು ಮತಗಳನ್ನು ಪಡೆದು ಏಕೈಕ ದೊಡ್ಡ ಸಂಘವಾಗಿ ಹೊರಹೊಮ್ಮಿದ್ದರೂ ಈಗ ತನ್ನ ಪ್ರಾಬಲ್ಯ ಕಳೆದುಕೊಂಡಿರುವುದನ್ನು ಇದು ಸೂಚಿಸುತ್ತದೆ.

NFIR (INTUC ಯೂನಿಯನ್) ನ ಅಂಗಸಂಸ್ಥೆಯು SRES-AIRF ಯೂನಿಯನ್‌ಗೆ ಪ್ರತಿಸ್ಪರ್ಧಿಯಾಗಿ ತಾನೇ ಪ್ರತ್ಯೇಕವಾಗಿ ಪ್ರಚಾರ ಮಾಡಿತಾದರೂ, ಕೇವಲ 16 ಪ್ರತಿಶತ ಮತಗಳನ್ನು ಗಳಿಸಿತು. ಸತತ ಮೂರನೇ ಚುನಾವಣೆಯಲ್ಲೂ ಮಾನ್ಯತೆ ಪಡೆಯುವಲ್ಲಿ ಅದು ವಿಫಲವಾಯಿತು. ಎಸ್ಸಿ ಮತ್ತು ಎಸ್ಟಿ ಸಂಘಗಳ ಬೆಂಬಲ ಪಡೆದರೂ ಕೂಡಾ BRMS (ಆರೆಸ್ಸೆಸ್ ಬೆಂಬಲಿತ) ಕಾರ್ಮಿಕ ಸಂಘವು ಕೇವಲ ನಾಲ್ಕು ಪ್ರತಿಶತ ಮತಗಳನ್ನು ಗಳಿಸುವಲ್ಲಿ ಯಶಸ್ವಿಯಾಯಿತು.

ವಿಜಯೋತ್ಸವದ ಬೃಹತ್ ಬಹಿರಂಗ ಸಭೆ

ಭಾರಿ ಮಳೆ ಇದ್ದರೂ 18 ಡಿಸೆಂಬರ್ 2024 ರಂದು ಚೆನ್ನೈನಲ್ಲಿನ ಪ್ರಧಾನ ವ್ಯವಸ್ಥಾಪಕರ ಕಚೇರಿಯಲ್ಲಿ ವಿಜಯೋತ್ಸವದ ಬೃಹತ್ ಬಹಿರಂಗ ಸಭೆ ನಡೆಯಿತು. ಸಮಾವೇಶಕ್ಕೆ ಕಾರ್ಯಾಧ್ಯಕ್ಷ ಜಾನಕಿರಾಮನ್ ಅಧ್ಯಕ್ಷತೆ ವಹಿಸಿದ್ದರು. ಸಮಾವೇಶದಲ್ಲಿ ಮಾಜಿ ಸಂಸದ ಟಿ.ಕೆ. ರಂಗರಾಜನ್, ಸಿಐಟಿಯು ಅಧ್ಯಕ್ಷರಾದ ಜಿ.ಸುಕುಮಾರನ್, ಉಪಾಧ್ಯಕ್ಷ ಎ.ಕೆ.ಪದ್ಮನಾಭನ್, ಡಿಆರ್‌ಇಯು ಪ್ರಧಾನ ಕಾರ್ಯದರ್ಶಿ ವಿ.ಹರಿಲಾಲ್ ಮಾತನಾಡಿದರು. ದಕ್ಷಿಣ ರೈಲ್ವೆಯ ಎಲ್ಲ ಕಾರ್ಮಿಕರ ಕಲ್ಯಾಣಕ್ಕಾಗಿ ಶ್ರಮಿಸುವುದಾಗಿ ಎಲ್ಲ ಮುಖಂಡರು ಭರವಸೆ ನೀಡಿದರು. ಚಿತ್ತರಂಜನ್ ಲೊಕೊಮೋಟಿವ್ ವರ್ಕ್ಸ್ (CLW), ಅಬಿಥ ಲೇಬರ್ ಯೂನಿಯನ್ (CLWLU) 7,551 ರಲ್ಲಿ 3,026 ಮತಗಳನ್ನು (ಶೇ. 43.2) ಗಳಿಸಿವೆ. AIRF-ಸಂಯೋಜಿತ ಒಕ್ಕೂಟವು ಕೇವಲ 138 ಮತಗಳನ್ನು ಗಳಿಸಿದರೆ, NFIR-ಸಂಯೋಜಿತ ಒಕ್ಕೂಟವು 2,895 ಮತಗಳನ್ನು (ಶೇಕಡಾ 41) ಗಳಿಸಿತು.

'ಚಿತ್ತರಂಜನ್ ಲೊಕೊಮೋಟಿವ್ ವರ್ಕ್ಸ್' ಅನ್ನು ಸರ್ಕಾರಿ ವಲಯದಲ್ಲಿ ಉಳಿಸಿಕೊಳ್ಳುವ ಹೋರಾಟದಲ್ಲಿ ಸಿಐಟಿಯುನ ಸಂಯೋಜಿತ ಸಂಘಟನೆಯಾದ CLWLU ಮುಂಚೂಣಿಯಲ್ಲಿ ನಿಂತಿದೆ. ಇದು ಕಾರ್ಮಿಕರ ಹಕ್ಕುಗಳನ್ನು ನಿರಂತರವಾಗಿ ಸಮರ್ಥಿಸುತ್ತಿದೆ. ಮಾತ್ರವಲ್ಲ, AIRF ಮತ್ತು NFIR ಸಂಘಟನೆಗಳ ಸರ್ಕಾರದ ಪರವಾದ ನೀತಿಗಳನ್ನು ಬಹಿರಂಗಪಡಿಸಿದೆ. ಕೇಂದ್ರ ಸರ್ಕಾರ ನವ ಉದಾರೀಕರಣ ನೀತಿಗಳನ್ನು ಬಲವಾಗಿ ವಿರೋಧಿಸುತಿದೆ. ಅದಕ್ಕಾಗಿಯೇ ಕಾರ್ಮಿಕರು CLWLU ಗೆ ಫೆಡರೇಷನ್ ಇಲ್ಲದಿದ್ದರೂ ಅತಿ ಹೆಚ್ಚು ಮತ ಹಾಕಿದ್ದಾರೆ. ಈಗ ರೈಲ್ವೆ ಕಾರ್ಮಿಕರನ್ನು ಸಂಘಟಿಸುವಲ್ಲಿ DREU ಮತ್ತು CLWLU ಎರಡೂ ಪ್ರಮುಖ ಪಾತ್ರ ವಹಿಸುತ್ತಿವೆ. ಖಾಸಗೀಕರಣ, ಎನ್‌ಪಿಎಸ್ ಮತ್ತು ಯುಪಿಎಸ್ ಅನ್ನು ತಡೆಯುವುದರೊಂದಿಗೆ ಇತರ ಕೇಂದ್ರ ಸರ್ಕಾರಿ ಸಂಘಟನೆಗಳೊಂದಿಗೆ ಸೇರಿ ಎಂಟನೇ ವೇತನ ಆಯೋಗದ ರಚನೆಗಾಗಿ ಪ್ರಯತ್ನಿಸುವುದು ಈಗ ಅವರ ಮುಖ್ಯ ಗುರಿಯಾಗಿದೆ.

ಕೃಪೆ: ನವತೆಲಂಗಾಣ
ಅನು: ಸಿಚಿ

ರೈತರು ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ ಶಾಸನಾತ್ಮಕ ಖಾತ್ರಿಗಾಗಿ ಒತ್ತಾಯಿಸಿ ನಿರ್ಣಯ

ದೇಶಕ್ಕೆ ಅನ್ನ ನೀಡುವ ರೈತ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ, ಕೃಷಿ ಲಾಭದಾಯಕವಲ್ಲ ಎಂದು ನಿರ್ಧರಿಸಿ ವ್ಯವಸಾಯವನ್ನು ಬಿಟ್ಟು ಗುಳೆ ಹೊರಟಿದ್ದಾನೆ. ಮತ್ತೊಂದೆಡೆ ಕೃಷಿ ಮೇಲೆ ಹೂಡಿಕೆ ಮಾಡಿದ್ದ ಬಂಡವಾಳ ವಾಪಸ್ ಬರದೆ, ಮಾಡಿದ ಸಾಲವನ್ನು ತೀರಿಸಲಾಗದೆ ಆತ್ಮಹತ್ಯೆಯ ದಾರಿಯನ್ನು ತುಳಿಯುತ್ತಿದ್ದಾನೆ. ಇದು ಪ್ರಸ್ತುತ ಕೃಷಿ ಕ್ಷೇತ್ರ ಅನುಭವಿಸುತ್ತಿರುವ ಬಹಳ ದೊಡ್ಡ ಸವಾಲಾಗಿದೆ.

ಮೂರು ಕರಾಳ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯ ಗಡಿಗಳಲ್ಲಿ ನಡೆದ ಐತಿಹಾಸಿಕ ರೈತ ಚಳುವಳಿಯ ಸಂದರ್ಭದಲ್ಲಿ ರೈತರು ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಗೊಳಿಸುವ ಶಾಸನವನ್ನು ರಚಿಸುವಂತೆ ಕೇಂದ್ರ ಸರ್ಕಾರವನ್ನು ರೈತ ಚಳುವಳಿಗಳು ಆಗ್ರಹಿಸಿದ್ದವು. ಈ ಬೇಡಿಕೆಯನ್ನು ಈಡೇರಿಸುವುದಾಗಿ ಭರವಸೆ ನೀಡಿದ್ದ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎಂಎಸ್‌ಪಿ ಖಾತ್ರಿಗಾಗಿ ಕಾನೂನು ಜಾರಿಗೊಳಿಸುವ ಬಗ್ಗೆ ನಿರಾಕರಿಸಿ, ರೈತ ಸಮುದಾಯಕ್ಕೆ ಮೋಸ ಮಾಡಿದೆ.

ಭಾರತದ ಬಹುಪಾಲು ರೈತರು ತಾವು ಬೆಳೆದ ಬೆಳೆಗಳನ್ನು ಲಾಭದಾಯಕ ಬೆಲೆಗೆ ಮಾರಲು ಸಾಧ್ಯವಾಗುತ್ತಿಲ್ಲ. ಹಾಗೂ ಇತ್ತೀಚಿನ ವರ್ಷಗಳಲ್ಲಿ ಬೆಲೆಗಳ ಹಾವು ಏಣಿ ಆಟದಲ್ಲಿ ರೈತ ಸಮುದಾಯ ನಲುಗಿದೆ. ಭಾರತದಲ್ಲಿ ಬಹುಪಾಲು ರೈತರು ತಮ್ಮ ಉತ್ಪನ್ನಗಳನ್ನು ಎಂಎಸ್‌ಪಿಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. 2019ರ ಅಂಕಿ ಅಂಶಗಳ ಪ್ರಕಾರ ಶೇ.91ರಷ್ಟು ಭತ್ತ ಮತ್ತು ಶೇ.83ರಷ್ಟು ಗೋಧಿಯನ್ನು ರೈತರು ಎಂಎಸ್‌ಪಿಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದಾರೆ.

ಕಳೆದ ಮೂರು ದಶಕಗಳಲ್ಲಿ ನವ ಉದಾರವಾದಿ ನೀತಿಗಳಿಂದಾಗಿ ಕೃಷಿ ಕ್ಷೇತ್ರಕ್ಕೆ ಸಾರ್ವಜನಿಕ ಬೆಂಬಲ ಕಡಿಮೆಯಾಗಿದೆ. ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ, ಯಂತ್ರೋಪಕರಣ, ಡೀಸೆಲ್ ಬೆಲೆಗಳು ವಿಪರೀತ ಹೆಚ್ಚಳವಾಗಿವೆ, ವಿದ್ಯುತ್ ಮೇಲಿನ ಸಬ್ಸಿಡಿ ಕಡಿತಗೊಳಿಸಲಾಗಿದೆ. ಬ್ಯಾಂಕ್ ಸಾಲದ ಲಭ್ಯತೆಯೂ ಕಡಿಮೆಯಾಗಿದೆ. ಇದರಿಂದಾಗಿ ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳವಾಗಿದೆ. ಕೃಷಿಗೆ ಸಂಬಂಧಿಸಿದ ಹಲವು ಕ್ಷೇತ್ರಗಳನ್ನು ಖಾಸಗಿಯವರಿಗೆ ಬಿಟ್ಟುಕೊಡಲಾಗಿದೆ. ಈ ಎಲ್ಲಾ ಕಾರಣಗಳಿಂದ ರೈತ ಸಮುದಾಯಕ್ಕೆ ಲಾಭದಾಯಕವೆನಿಸಿಲ್ಲ.



ರೈತರು ತಾವು ಯಾವ ಬೆಳೆಯನ್ನು ಬೆಳೆಯಬೇಕು ಎಂಬುದನ್ನು ನಿರ್ಧರಿಸುವುದು ಅವರು ಬೆಳೆದ ಬೆಳೆಗೆ ಸಿಗುವ ಬೆಲೆಯ ಆಧಾರದಲ್ಲಿ. ಬೆಳೆ ಬೆಳೆಯಲು ತಗುಲುವ ವೆಚ್ಚವನ್ನು ಭರಿಸುವ ಬೆಳೆಗಳನ್ನು ಮಾತ್ರ ರೈತರು ಆಯ್ಕೆ ಮಾಡಿಕೊಳ್ಳುತ್ತಾರೆ. ಇದು ಒಟ್ಟಾರೆ ಕೃಷಿ ಬೆಳವಣಿಗೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಕೃಷಿ ತಜ್ಞ ಡಾ.ಎಂ.ಎಸ್.ಸ್ವಾಮಿನಾಥನ್ ಅವರ ಅಧ್ಯಕ್ಷತೆಯ ರಾಷ್ಟ್ರೀಯ ಕೃಷಿ ಆಯೋಗವು ಶಿಫಾರಸ್ಸು ಮಾಡಿದ ಸೂತ್ರವನ್ನು ಬಳಸಿಕೊಂಡು ಎಂಎಸ್‌ಪಿ ನೀಡಲು ಸರ್ಕಾರ ನಿರಾಕರಿಸಿದೆ. ಎ2+ಎಫ್‌ಎಲ್ ಉತ್ಪಾದನಾ ವೆಚ್ಚದ ಜೊತೆ ಶೇಖಡ 50ರಷ್ಟು ಲಾಭಾಂಶವನ್ನು ಸೇರಿಸಿ ಬೆಲೆ ನಿಗದಿ ಮಾಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಸುಳ್ಳು ಹೇಳುತ್ತಿದೆ. ಆದರೆ ಸರ್ಕಾರದ ಎ2+ಎಫ್‌ಎಲ್ ಲೆಕ್ಕಾಚಾರದಲ್ಲಿ ರೈತರು ಮಾಡುವ ಎಲ್ಲಾ ವೆಚ್ಚಗಳು ಒಳಗೊಂಡಿರುವುದಿಲ್ಲ. ಆದ್ದರಿಂದಲೇ ದೇಶದ ಎಲ್ಲಾ ರೈತ ಚಳುವಳಿಗಳೂ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚದ ಜೊತೆಗೆ (ಸಿ2+50%) ಶೇ.50ರಷ್ಟು ಲಾಭಾಂಶವನ್ನು ಸೇರಿಸಿ ಬೆಲೆ ನಿಗದಿ ಮಾಡಬೇಕೆಂದು ಆಗ್ರಹಿಸುತ್ತಿವೆ.

ರೈತರು ತಮ್ಮ ಬೆಳೆಗಳಿಗೆ ಲಾಭದಾಯಕ ಬೆಲೆಗಳಿಂದ ವಂಚಿತರಾಗಿದ್ದರೂ, ಕೋವಿಡ್ 19ರ ಸಂಕಷ್ಟದ ಸಂದರ್ಭದಲ್ಲೂ ದೇಶದ ಆಹಾರ ಭದ್ರತೆಯನ್ನು ಕಾಪಾಡುವಲ್ಲಿ ರೈತ ಸಮುದಾಯ ಬಹಳ ದೊಡ್ಡ ಕೊಡುಗೆಯನ್ನು ನೀಡಿದೆ. ಈ ಸಂದರ್ಭದಲ್ಲಿ ಆಹಾರಧಾನ್ಯಗಳ ದಾಸ್ತಾನು 1196 ಲಕ್ಷ ಟನ್ ದಾಟಿತ್ತು. ಆದರೆ ಸರ್ಕಾರ ಎಲ್ಲರಿಗೂ ಆಹಾರ ಧಾನ್ಯಗಳನ್ನು ಒದಗಿಸುವ ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು ನಿರಾಕರಿಸಿತು.

ಕಳೆದ ಮೂರು ದಶಕಗಳ ನವಉದಾರೀಕರಣ ನೀತಿಗಳು ಕೃಷಿ ಅಭಿವೃದ್ಧಿ ಮತ್ತು ಸಾರ್ವತ್ರಿಕ ಪಡಿತರ ವಿತರಣಾ ವ್ಯವಸ್ಥೆ ಮೇಲಿನ ಸಾರ್ವಜನಿಕ ಹೂಡಿಕೆಗಳನ್ನು ಕಡಿತಗೊಳಿಸಿ ಸಮತೋಲನವನ್ನು ನಾಶಪಡಿಸಿವೆ. ರೈತರಿಗೆ ಬೆಲೆ ಖಾತ್ರಿಯನ್ನು ಒದಗಿಸಲು ಮತ್ತು ಸ್ಥಿರ ಮಟ್ಟದ ಸಾರ್ವಜನಿಕ ದಾಸ್ತಾನುಗಳನ್ನು ನಿರ್ವಹಿಸಲು 1960ರಲ್ಲಿ ರಚಿಸಲಾದ ಕನಿಷ್ಠ ಬೆಂಬಲ ಬೆಲೆ ಮತ್ತು ಸಾರ್ವಜನಿಕ ಸಂಗ್ರಹಣೆಯ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸಲಾಗುತ್ತಿಲ್ಲ.

ಈ ಕೆಳಗಿನ ಅಂಶಗಳನ್ನು ಸಮ್ಮೇಳನವು ಸರ್ಕಾರಕ್ಕೆ ಒತ್ತಾಯಿಸುತ್ತದೆ

1. ಕೃಷಿಗೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು, ಕೃಷಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.
2. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನ ಆಧಾರದಲ್ಲಿ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗಳನ್ನು ಸಿ2+50% ಸೂತ್ರದ ಆಧಾರದಲ್ಲಿ ನಿಗದಿಪಡಿಸುವ ಕಾನೂನನ್ನು ಖಾತ್ರಿಪಡಿಸಬೇಕು.
3. ಅಕ್ಕಿ ಮತ್ತು ಗೋಧಿ ಹೊರತುಪಡಿಸಿ ಉಳಿದ ಎಲ್ಲಾ ಬೆಳೆಗಳಿಗೂ ಸಂಗ್ರಹಣೆ ಮತ್ತು ವಿತರಣೆಗಾಗಿ ಸೌಲಭ್ಯಗಳನ್ನು ಒದಗಿಸಬೇಕು.
4. ಉಗ್ರಾಣ, ಪ್ರಾಥಮಿಕ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಆಹಾರದ ವಿತರಣೆಯಲ್ಲಿ ರೈತರ ಸಹಕಾರಿ ಸಂಘಗಳಿಗೆ ಬೆಂಬಲವನ್ನು ಒದಗಿಸುವುದು.
5. ಎಲ್ಲಾ ಪ್ರಮುಖ ಬೆಳೆಗಳು, ತೋಟಗಾರಿಕಾ ಬೆಳೆಗಳು, ಪಶುಸಂಗೋಪನೆ ಉತ್ಪನ್ನಗಳು ಮತ್ತು ಸಣ್ಣ ಅರಣ್ಯ ಉತ್ಪನ್ನಗಳನ್ನು ಒಳಗೊಂಡಿರುವ ಎಲ್ಲಾ ಉತ್ಪನ್ನಗಳ ಸಂಗ್ರಹಣೆಯನ್ನು ಖಚಿತಪಡಿಸಬೇಕು, ಕನಿಷ್ಠ ಬೆಂಬಲ ಬೆಲೆಗಳ ಗ್ಯಾರಂಟಿ ಒದಗಿಸಲು ಕಾನೂನನ್ನು ಜಾರಿಗೊಳಿಸಬೇಕು.

2021ರಲ್ಲಿ ದೇಶದ ರೈತ ಸಮುದಾಯಕ್ಕೆ ನೀಡಿದ ಭರವಸೆಯಂತೆ ಎಂಎಸ್‌ಪಿ ಖಾತರಿಯನ್ನು ಒದಗಿಸಲು ಕಾನೂನನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ರೈತರನ್ನು ಸಜ್ಜುಗೊಳಿಸಲು ಮತ್ತು ಹೋರಾಟವನ್ನು ತೀವ್ರಗೊಳಿಸಲು ಸಿಪಿಐಎಂ 24ನೇ ಕರ್ನಾಟಕ ರಾಜ್ಯ ಸಮ್ಮೇಳನವು ನಿರ್ಣಯ ಕೈಗೊಂಡಿದೆ.

ಅಲ್ಪಸಂಖ್ಯಾತರ ಹಕ್ಕು, ಸವಲತ್ತುಗಳನ್ನು ಖಾತರಿ ಪಡಿಸಲು ಆಗ್ರಹಿಸಿ ನಿರ್ಣಯ

ದೇಶದ ರಾಜಕಾರಣ ಹೆಚ್ಚು ಹೆಚ್ಚು ಕೋಮು ವಾದೀಕರಣಗೊಳ್ಳುತ್ತಿರುವ, ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಮರ, ಕ್ರೈಸ್ತರ ವಿರೋಧಿ ಭಾವನೆಗಳು ರಾಜಕಾರಣದ ಪ್ರಧಾನ ದಾಳಗಳಾಗುತ್ತಿರುವ ಪ್ರಸಕ್ತ ಕಾಲಘಟ್ಟದಲ್ಲಿ ಅಲ್ಪಸಂಖ್ಯಾತ ಸಮುದಾಯಗಳು ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಲು, ಸವಲತ್ತುಗಳನ್ನು ಪಡೆದುಕೊಳ್ಳಲು ಅಸಾಧ್ಯವಾಗುವ ಸ್ಥಿತಿ ಎದುರಾಗಿದೆ.

ಬಹಳ ಪ್ರಧಾನವಾಗಿ ಮುಸ್ಲಿಂ ಅಲ್ಪಸಂಖ್ಯಾತರು ದೊಡ್ಡ ರೀತಿಯಲ್ಲಿ ತಾರತಮ್ಯಕ್ಕೆ ಗುರಿಯಾಗುತ್ತಿದ್ದಾರೆ. ಹಿಜಾಬ್, ಆಝಾನ್ ಗಳಂತಹ ಅವರ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳ ಮೇಲೆ ಹಸ್ತಕ್ಷೇಪ ನಡೆಸಲಾಗುತ್ತಿದೆ. ಪುರಾತನ ಕಾಲದ ಧಾರ್ಮಿಕ ಕೇಂದ್ರಗಳ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ಹಕ್ಕು ಸ್ಥಾಪಿಸುವ ಯತ್ನಗಳು ಹೆಚ್ಚುತ್ತಿದೆ. ದ್ವೇಷ ಭಾಷಣ, ಗುಂಪು ಹಿಂಸೆ, ಕೋಮು ಗಲಭೆ, ಅವಹೇಳನಗಳಿಂದ ಕಂಗೆಟ್ಟಿರುವ ಮುಸ್ಲಿಂ ಸಮುದಾಯ ಬಹಿರಂಗವಾದ ತಾರತಮ್ಯ, ದಾಳಿ, ಹಲ್ಲೆ, ಅವಮಾನಗಳಿಂದ ರಕ್ಷಣೆ ನೀಡಿದರೂ ಸಾಕು ಎಂಬ ಅಸಹಾಯಕತೆಗೆ ತಲುಪಿದೆ. ಅದರಾಚೆಗೆ ಸರಕಾರದ ನೀತಿಗಳು, ಯೋಜನೆಗಳಲ್ಲಿ ತಮಗೆ ಸಿಗಬೇಕಾದ ಪಾಲಿಗೆ ಧ್ವನಿ ಎತ್ತುವುದನ್ನು ಮರೆತು ಬಿಟ್ಟಿದೆ, ಅಥವಾ ಆ ರೀತಿ ಧ್ವನಿ ಎತ್ತುವ ಶಕ್ತಿಯನ್ನೇ ಕಳೆದುಕೊಂಡಿದೆ.

ಸಾಚಾರ್ ಸಮಿತಿಯ ವರದಿಯು ಹಲವು ವಿಷಯಗಳಲ್ಲಿ ದಲಿತರಿಗಿಂತಲೂ ಮುಸ್ಲಿಮರು ಕೆಟ್ಟ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎಂದು ಆಧಾರ ಸಹಿತ ಉಲ್ಲೇಖಿಸಿರುವುದು ಕಣ್ಣು ಮುಂದೆ ಇದೆ. ಹೀಗಿದ್ದರೂ, ಸರಕಾರಗಳು ಮುಸ್ಲಿಮರನ್ನು ಓಲೈಸುತ್ತಿವೆ, ಸರಕಾರದ ಸಂಪತ್ತು ಮುಸ್ಲಿಮರ ಪಾಲಾಗುತ್ತಿದೆ ಎಂಬ ಬಲಪಂಥೀಯ ಪ್ರಚಾರ ದೇಶದಲ್ಲಿ ಬಲವಾಗಿ ಹರಡಿದೆ. ಇದರಿಂದಾಗಿ ಕರ್ನಾಟಕದಂತಹ ಜಾತ್ಯಾತೀತ ಪಕ್ಷಗಳು ಆಡಳಿತ ನಡೆಸುವ ರಾಜ್ಯಗಳಲ್ಲಿಯೂ ಮುಸ್ಲಿಮರ ಅಭಿವೃದ್ದಿಗಾಗಿ ಯೋಜನೆಗಳನ್ನು ರೂಪಿಸಲು ಸರಕಾರಗಳು ಹಿಂದೇಟು ಹಾಕುತ್ತಿವೆ. ಮುಸ್ಲಿಂ ವಸತಿ ಬಡಾವಣೆಗಳು ಕೊಳಗೇರಿಗಳಾಗಿಯೇ ಮುಂದುವರಿಯುತ್ತಿವೆ. ಮುಸ್ಲಿಂ ಸಮುದಾಯದ ಅಭಿವೃದ್ದಿಗಾಗಿ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರುವುದು, ಬಜೆಟ್‌ನಲ್ಲಿ ಅನುದಾನ ಒದಗಿಸುವುದನ್ನು ಈ ಸರಕಾರಗಳು ಬಹುತೇಕ ಕೈಬಿಟ್ಟಿವೆ. ಬಿಜೆಪಿ ಸರಕಾರಗಳ ಆಡಳಿತದಲ್ಲಿ ಮುಸ್ಲಿಮರಿಗೆ ಈ ಹಿಂದೆ ಇದ್ದಂತಹ ಅಲ್ಪ ಪ್ರಮಾಣದ ಮೀಸಲಾತಿ, ಕೆಲವು ಯೋಜನೆಗಳನ್ನೂ ಕೈಬಿಟ್ಟಿರುವುದನ್ನು ನಾವು ಕಾಣುತ್ತಿದ್ದೇವೆ. ಉದಾಹರಣೆಗೆ, ಕರ್ನಾಟಕದಲ್ಲಿ ಮುಸ್ಲಿಮರಲ್ಲಿ ಹಿಂದುಳಿದ ವಿಭಾಗಗಳಿಗೆ ಇದ್ದ ನಾಲ್ಕು ಶೇಕಡಾ ಮೀಸಲಾತಿಯನ್ನು ಬಿಜೆಪಿ ಸರಕಾರದ ಅವಧಿಯಲ್ಲಿ ರದ್ದುಗೊಳಿಸಿ ಬಲಿಷ್ಠ ಜಾತಿಗಳಿಗೆ ಹಂಚುವ ನಿರ್ಧಾರ ಕೈಗೊಂಡದ್ದು, ಹಲವು ಕಲ್ಯಾಣ ಯೋಜನೆಗಳ ಹಣಕಾಸು ಅನುದಾನಕ್ಕೆ ಕತ್ತರಿ ಹಾಕಿದ್ದನ್ನು ನಾವು ಗಮನಿಸಬಹುದು. ಆ ತರುವಾಯ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದರೂ ನಿಯಮ ಬಾಹಿರವಾಗಿ ರದ್ದುಗೊಳಿಸಿದ ಮುಸ್ಲಿಂ ಮೀಸಲಾತಿಯನ್ನು ಮರುಸ್ಥಾಪಿಸಲು ಹಿಂದೇಟು ಹಾಕುತ್ತಿರುವುದನ್ನು ಗಮನಿಸಬಹುದು.

ಈ ಎಲ್ಲಾ ಬೆಳವಣಿಗೆಗಳು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಅಭದ್ರತೆಯ ಭಾವನೆಯನ್ನು ತೀವ್ರಗೊಳಿಸಿದೆ. ಆ ಸಮುದಾಯಗಳ ಅಭಿವೃದ್ಧಿಯ ಸಾಧ್ಯತೆಯನ್ನು ದೊಡ್ಡ ಪ್ರಮಾಣದಲ್ಲಿ ತಡೆದಿದೆ. ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತಲಾಗದ ಸ್ಥಿತಿಗೆ ಆ ಸಮುದಾಯಗಳನ್ನು ತಳ್ಳಿದೆ. ಅಲ್ಪಸಂಖ್ಯಾತರ ಜೊತೆಗೆ ಇಂತಹ ತಾರತಮ್ಯ, ಹಕ್ಕುಗಳ ನಿರಾಕರಣೆ ಪ್ರಜಾಪ್ರಭುತ್ವ ದೇಶಕ್ಕೆ ಭೂಷಣ ಅಲ್ಲ. ಆರೋಗ್ಯಕರ ದೇಶ ನಿರ್ಮಾಣಕ್ಕೂ ಇದು ತೊಡಕು. ಭಾರತದ ಸಂವಿಧಾನ ಸರ್ವರ ಅಭಿವೃದ್ಧಿಯ ಪರಿಕಲ್ಪನೆ ಹೊಂದಿದೆ. ದುರ್ಬಲರ ಪರವಾದ ನಿಲುವುಗಳನ್ನು ಎತ್ತಿಹಿಡಿಯುತ್ತದೆ. ಈ ರೀತಿಯ ತಾರತಮ್ಯ ದೇಶದ ಒಟ್ಟಾರೆ ಹಿತಾಸಕ್ತಿಗೆ ಪೂರಕವಲ್ಲ. ಮುಸ್ಲಿಮರು ಸೇರಿದಂತೆ ಧಾರ್ಮಿಕ ಅಲ್ಪಸಂಖ್ಯಾತರಿಗೆ ಅವರ ಹಕ್ಕುಗಳನ್ನು ಖಾತರಿಪಡಿಸಬೇಕು, ಸಂವಿಧಾನ ಬದ್ಧವಾದ ಮೀಸಲಾತಿಯನ್ನು ಕಲ್ಪಿಸಬೇಕು, ಕಲ್ಯಾಣ ಯೋಜನೆಗಳು, ಅದಕ್ಕೆ ಬೇಕಾದ ಅನುದಾನಗಳನ್ನು ಒದಗಿಸಬೇಕು, ಅಭಿವೃದ್ದಿಯಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಸರಿಯಾದ ಪಾಲು ದೊರಕಬೇಕು, ಅವರ ಧಾರ್ಮಿಕ ಹಕ್ಕುಗಳ ಮೇಲಿನ ಹಸ್ತಕ್ಷೇಪ ಕೊನೆಗೊಳ್ಳಬೇಕು, ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿ ರದ್ದುಗೊಳಿಸಿರುವ ಮುಸ್ಲಿಂ ಮೀಸಲಾತಿಯನ್ನು ತಡಮಾಡದೆ ಮರುಸ್ಥಾಪಿಸಬೇಕು, ಅವರ ಧಾರ್ಮಿಕ ಸ್ಥಳಗಳ ಮೇಲೆ ಹಕ್ಕು ಸ್ಥಾಪಿಸುವ ಮತೀಯವಾದಿ ಶಕ್ತಿಗಳ ಪ್ರಯತ್ನಗಳನ್ನು ಕಾನೂನಾತ್ಮಕವಾಗಿಯೆ ನಿರ್ಬಂಧಿಸಬೇಕು ಎಂದು ಸಿಪಿಐಎಂ ಪಕ್ಷದ 24ನೇ ರಾಜ್ಯ ಸಮ್ಮೇಳನ ಆಗ್ರಹಿಸಿದೆ.

ಹೊಸ ಯುಜಿಸಿ ನಿಯಮಗಳು....... ಪುಟ 8 ರಿಂದ

ನಮ್ಮ ದೇಶದಲ್ಲಿ ಸ್ಥಾಪನೆಯಾಗಿರುವ ಎಲ್ಲ ಖಾಸಗಿ ವಿವಿಗಳಿಗೆ ಅದು ಸರ್ವ ಸ್ವಾತಂತ್ರ್ಯವನ್ನು ಕೊಡಲಿದೆ. ಹಾಗೆ ಮಾಡುವುದರಿಂದ ಖಾಸಗಿ ವಿವಿಗಳ ಶೈಕ್ಷಣಿಕ ಗುಣಮಟ್ಟದೊಂದಿಗೆ ಇನ್ನಷ್ಟು ರಾಜಿ ಮಾಡಿಕೊಂಡಂತಾಗುತ್ತದೆ.


ಶಿಕ್ಷಕರ ಪ್ರತಿರೋಧ

ವಿವಿಧ ವಿವಿಗಳ ಬೋಧಕ ಸಿಬ್ಬಂದಿ, ನೇಮಕಾತಿಯ ಗುಣಮಟ್ಟ ಕುಸಿಯುತ್ತದೆ ಎನ್ನುವ ಕಾರಣಕ್ಕೆ ಈ ಎಲ್ಲ ನಿಯಮಗಳಿಗೆ ವಿರೋಧದ ದನಿಯೆತ್ತಿದ್ದಾರೆ. ಶೈಕ್ಷಣಿಕ ಕಟ್ಟುನಿಟ್ಟು ಮತ್ತು ವಿವಿಗಳ ಗುಣಮಟ್ಟವನ್ನು ದುರ್ಬಲಗೊಳಿಸುವ ಪ್ರಶ್ನೆ ಮಾತ್ರವಲ್ಲದೆ ಕೆಲಸದ ಹೊರೆ ಜಾಸ್ತಿಯಾಗುತ್ತದೆ ಹಾಗೂ ತಾತ್ಕಾಲಿಕ ನೇಮಕಗಳು ಜಾಸ್ತಿಯಾಗುತ್ತವೆ ಎನ್ನುವುದು ಕೂಡ ಬೋಧಕರ ಕಳವಳಕ್ಕೆ ಕಾರಣವಾಗಿದೆ.

30 ದಿನದೊಳಗೆ ಸಲಹೆಗಳನ್ನು ನೀಡುವಂತೆ ಯುಜಿಸಿ ಈ ಕರಡನ್ನು ಸಾರ್ವಜನಿಕರ ಮುಂದಿರಿಸಿದೆ. ನಮ್ಮ ಶಿಕ್ಷಣ ವ್ಯವಸ್ಥೆ ಹಾಗೂ ದೇಶದ ಭವಿಷ್ಯದ ಬಗ್ಗೆ ಕಾಳಜಿಯಿರುವ ಎಲ್ಲರೂ ಈ ನಿಯಮಾವಳಿಗಳಿಗೆ ವಿರೋಧವನ್ನು ದಾಖಲಿಸಬೇಕು. ಈ ನಿಯಮಗಳ ವಾಪಸಾತಿಗಾಗಿ ವಿದ್ಯಾರ್ಥಿ ಮತ್ತು ಬೋಧಕ ಸಮುದಾಯವು ಎಲ್ಲ ಜನತಾಂತ್ರಿಕ ಶಕ್ತಿಗಳೊಂದಿಗೆ ಒಗ್ಗಟ್ಟಿನಿಂದ ಕೆಲಸ ಮಾಡಬೇಕು.

ಅನು: ವಿಶ್ವ





ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ಸತತ ರೂಪಾಯಿ ಕುಸಿತ ಮತ್ತು ಡಾಲರ್ ಬಲವರ್ಧನೆ, ಏಕೆ?

ಯುಎಸ್ ಡಾಲರಿಗೆ ಎದುರಾಗಿ ರೂಪಾಯಿ ಕುಸಿಯುತ್ತಲೇ ಸಾಗಿದೆ–2014ರಲ್ಲಿ 'ಅಚ್ಛೇ ದಿನ್' ಆರಂಭದಲ್ಲಿ 62.33 ರೂ. ಇದ್ದದ್ದು ಡಿಸೆಂಬರ್ 29ರಂದು 85.5 ರೂ.ಗಳಷ್ಟಾಗಿದೆ. ಈ ಕುಸಿತ ಉಂಟಾಗಿರುವುದು ಭಾರತದಲ್ಲಿ ಹಣದುಬ್ಬರ ದರವು ಯುಎಸ್‌ಗಿಂತ ಹೆಚ್ಚಿನ ಮಟ್ಟದಲ್ಲಿದೆ ಎಂಬ ಕಾರಣದಿಂದಲ್ಲ. ಡಾಲರ್ ರೂಪಾಯಿಯ ಎದುರಿಗೆ ಮಾತ್ರವಲ್ಲ, ವಿಶ್ವದ ಪ್ರಮುಖ ಕರೆನ್ಸಿಗಳ ಎದುರಿಗೂ ಬಲಗೊಂಡಿದೆ. ಅಷ್ಟೇ ಅಲ್ಲ, ಕಳೆದ ದಶಕದ ಯಾವುದೇ ಸಮಯದಲ್ಲೂ ಇದ್ದಿರದಷ್ಟು ಬಲಗೊಂಡಿದೆ ಎನ್ನಲಾಗುತ್ತಿದೆ. ಏಕೆ? ಇದಕ್ಕೆ ಸರಳ ಉತ್ತರ–ಮುಕ್ತ ವ್ಯಾಪಾರದ 'ಸದ್ಗುಣ'ಗಳ ಬಗ್ಗೆ ಐಎಂಎಫ್–ವಿಶ್ವಬ್ಯಾಂಕ್–ಡಬ್ಲ್ಯುಟಿಒ ನೀಡುವ ಉಪದೇಶಗಳು ಏನನ್ನು ಬೇಕಾದರೂ ನಂಬುವ ಮೂರನೇ ಜಗತ್ತಿನ ರಾಜಕಾರಣಿಗಳ ಕಿವಿಗೆ ಮಾತ್ರ ಇಂಪಾಗಿರುತ್ತವೆ, ಆದರೆ ಸ್ವತಃ ಮಾರುಕಟ್ಟೆಯೇ ಈ ಉಪದೇಶಗಳನ್ನು ಕಿವಿಗೆ ಹಾಕಿಕೊಳ್ಳುವುದೇ ಇಲ್ಲ ಎಂಬುದನ್ನು ಇದು ತೋರಿಸುತ್ತದೆ. ಈ ಮೂಲಕ ವಿಶ್ವ ಅರ್ಥವ್ಯವಸ್ಥೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಮೂಲಭೂತ ತರ್ಕಹೀನತೆಯು ಅನಾವರಣಗೊಳ್ಳುತ್ತಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ಕಳೆದ ಕೆಲವು ದಿನಗಳಲ್ಲಿ ಯುಎಸ್ ಡಾಲರ್ ಎದುರಾಗಿ ರೂಪಾಯಿ ಕುಸಿಯುತ್ತಿರುವ ಬಗ್ಗೆ ಭಾರತದ ವೃತ್ತ ಪತ್ರಿಕೆಗಳು ವ್ಯಾಪಕವಾಗಿ ವರದಿ ಮಾಡಿವೆ. ಕೇವಲ ಒಂದು ತಿಂಗಳ ಹಿಂದೆ, ನವೆಂಬರ್ 27ರಂದು, 84.59 ರೂಗಳಷ್ಟಿದ್ದ ಡಾಲರ್ ಮೌಲ್ಯವು ಡಿಸೆಂಬರ್ 29ಕ್ಕೆ 85.5 ರೂ.ಗಳಿಗೆ ಏರಿಕೆಯಾಗಿದೆ. ರೂಪಾಯಿಯ ಈ ಕುಸಿತವು ಅದನ್ನು ಸ್ಥಿರಗೊಳಿಸಲು ವಿದೇಶಿ ವಿನಿಮಯ ಸಂಗ್ರಹವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಇಳಿಕೆ ಮಾಡಿಕೊಂಡಿದ್ದರ (ಅಂದರೆ, ಡಾಲರ್‌ಗಳ ಮಾರಾಟದ) ಹೊರತಾಗಿಯೂ ಸಂಭವಿಸಿದೆ. ನವೆಂಬರ್ 22ರಂದು ಹೊಂದಿದ್ದ 657.89 ಶತಕೋಟಿ ಮೊತ್ತದ ಮೀಸಲು ಸಂಗ್ರಹವು ಡಿಸೆಂಬರ್ 20ರ ವೇಳೆಗೆ 644.39 ಶತಕೋಟಿಗೆ ಇಳಿದಿದೆ. ಅಷ್ಟಾಗಿಯೂ, ರೂಪಾಯಿಯ ಪತನವನ್ನು ತಡೆಯಲಾಗಿಲ್ಲ. ಮೀಸಲು ಸಂಗ್ರಹವನ್ನು ಒಂದು ವೇಳೆ ಮಾರಾಟ ಮಾಡದಿದ್ದರೆ, ಈ ಪತನವು ಇನ್ನೂ ಹೆಚ್ಚು ತೀವ್ರವಾಗಿರುತ್ತಿತ್ತು ಎಂಬುದು ಸ್ಪಷ್ಟವಾಗಿದೆ.

ಡಾಲರ್‌ಗೆ ಹೋಲಿಸಿದರೆ ರೂಪಾಯಿ ಮೌಲ್ಯವು ಬಹಳ ವರ್ಷಗಳಿಂದಲೂ ಕುಸಿತಯುತ್ತಲೇ ಬಂದಿದೆ ಮತ್ತು ಈ ಕುಸಿತವು ನಿರಂತರವಾಗಿ ಮುಂದುವರಿಯುತ್ತಲೇ ಇರುವ ಒಂದು ವಿದ್ಯಮಾನವೂ ಹೌದು. ಡಿರಿಜಿಸ್ಟ್ ಅವಧಿಯಲ್ಲಿ (ಅಂದರೆ, ನಿಯಂತ್ರಣ ನೀತಿಗಳ ಅವಧಿಯಲ್ಲಿ) ಸರ್ಕಾರವು ಡಾಲರ್‌ಗೆ ಎದುರಾಗಿ ರೂಪಾಯಿಯ ಬೆಲೆಯನ್ನು (ಮತ್ತು ಸಾಂದರ್ಭಿಕವಾಗಿ ಅದರ ಅಪಮೌಲ್ಯದ ಪ್ರಮಾಣವನ್ನು) ನಿರ್ಧರಿಸುವ ಮೂಲಕ ವಿದೇಶಿ ವಿನಿಮಯವನ್ನು ನಿಯಂತ್ರಿಸುತ್ತಿತ್ತು ಮತ್ತು ಆ ಮೂಲಕ ಅರ್ಥವ್ಯವಸ್ಥೆಯಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳಲಾಗಿತ್ತು. ಆದರೆ, ಈ ನಿಯಂತ್ರಣವನ್ನು 1991ರಲ್ಲಿ ಕಳಚಿಹಾಕಿದ ನಂತರ ರೂಪಾಯಿಯ ಮೌಲ್ಯವು ಇಳಿಯುತ್ತಲೇ ಬಂದಿದೆ. ನಿಯಂತ್ರಣಗಳನ್ನು ಕಳಚಿಹಾಕಿದ ಸಮಯದಲ್ಲಿ ವಿನಿಮಯ ದರವು ಡಾಲರ್‌ಗೆ 22.74 ರೂಪಾಯಿಗಳ ಮಟ್ಟದಲ್ಲಿತ್ತು. 2014ರಲ್ಲಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಸಮಯದಲ್ಲಿ 62.33 ರೂ.ಗಳಷ್ಟಿದ್ದ ಡಾಲರ್ ಮೌಲ್ಯವು ಈಗ 85.5 ರೂ.ಗಳ ಮಟ್ಟವನ್ನು ದಾಟಿದೆ.

ಬಹಳ ವರ್ಷಗಳಿಂದಲೂ ರೂಪಾಯಿ ಮೌಲ್ಯವು ಕುಸಿಯುತ್ತಲೇ ಬಂದಿದೆ. ಈ ಕುಸಿತವು ಭಾರತದಲ್ಲಿ ಹಣದುಬ್ಬರ ದರವು ಯುಎಸ್‌ಗಿಂತ ಹೆಚ್ಚಿನ ಮಟ್ಟದಲ್ಲಿದೆ ಎಂಬ ಕಾರಣದಿಂದ ಉಂಟಾದುದಲ್ಲ. ಹಣದುಬ್ಬರ ದರವು ನಿಸ್ಸಂಶಯವಾಗಿಯೂ ಹೆಚ್ಚಿನ ಮಟ್ಟದಲ್ಲಿದೆ. ಆದರೆ ಡಾಲರ್ ಎದುರು ರೂಪಾಯಿಯ ಮೌಲ್ಯವು ಕುಸಿಯಲು ಹಣದುಬ್ಬರವೇ ಪ್ರಾಥಮಿಕ ಕಾರಣವಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಭಾರತದಲ್ಲಿ ಹಣದುಬ್ಬರ ದರವು ಯುಎಸ್‌ಗಿಂತ ನಿರಂತರವಾಗಿ ಹೆಚ್ಚಿನ ಮಟ್ಟದಲ್ಲಿ ಇರುವುದಕ್ಕೆ ಪ್ರಮುಖ ಕಾರಣವೆಂದರೆ ರೂಪಾಯಿಯ ಮೌಲ್ಯದ ಕುಸಿತವೇ. ರೂಪಾಯಿ ಮೌಲ್ಯದ ಈ ಕುಸಿತವು ತೈಲದಂತಹ ಅಗತ್ಯ ವಸ್ತುಗಳ ಆಮದು ವೆಚ್ಚವನ್ನು ಹೆಚ್ಚಿಸುತ್ತದೆ. ತತ್ಪರಿಣಾಮವಾಗಿ ಬಳಕೆಯ ವಸ್ತುಗಳ ಬೆಲೆಗಳು ಏರುತ್ತವೆ. ರೂಪಾಯಿಯ ಕುಸಿತಕ್ಕೆ ಯಾವುದೊ ಒಂದು ಪ್ರಾಥಮಿಕ ಕಾರಣವೂ ಇರಬಹುದು. ಆದರೆ, ಒಮ್ಮೆ ಹಣದುಬ್ಬರವು ಅದರಿಂದ ಉತ್ತೇಜಿತಗೊಂಡರೆ, ಅದು ಖಂಡಿತವಾಗಿಯೂ ರೂಪಾಯಿಯ ವಿನಿಮಯ ದರದ ಮೇಲೆ ಪ್ರತಿಕ್ರಿಯೆ ರೂಪದಲ್ಲಿ ವ್ಯಕ್ತಗೊಳ್ಳುತ್ತದೆ: ಹಣದುಬ್ಬರದಿಂದಾಗಿ ಸಟ್ಟಾ ಬಾಜಿಕೋರರು ರೂಪಾಯಿ ಮತ್ತಷ್ಟು ಅಪಮೌಲ್ಯಗೊಳ್ಳುವುದನ್ನು/ ಇಳಿಕೆಯಾಗುವುದನ್ನು ನಿರೀಕ್ಷಿಸುತ್ತಾರೆ ಮತ್ತು ಮುಂದಿನ ದಿನಗಳಲ್ಲಿ ಅದು ವಾಸ್ತವವಾಗಿಯೂ ಕುಸಿಯುತ್ತದೆ. ಆದರೆ, ರೂಪಾಯಿ ಮೌಲ್ಯ ಕುಸಿತದ ಪ್ರಾಥಮಿಕ ಕಾರಣವೆಂದರೆ ಭಾರತದ ಶ್ರೀಮಂತರು ತಮ್ಮ ಸಂಪತ್ತನ್ನು ಭಾರತೀಯ ರೂಪಾಯಿಗಿಂತ ಹೆಚ್ಚಾಗಿ ಯುಎಸ್ ಡಾಲರ್ ರೂಪದಲ್ಲಿ ಇಟ್ಟುಕೊಳ್ಳಲು ಬಯಸುತ್ತಾರೆ. ಇದು ರೂಪಾಯಿಯಿಂದ ಡಾಲರ್ ಕರೆನ್ಸಿಗೆ ಹೊರಳುವ ಒಂದು ನಿರಂತರ ಬದಲಾವಣೆಗೆ ಕಾರಣವಾಗುತ್ತದೆ. ಇದು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗುತ್ತದೆ.

ಡಾಲರ್‌ಗೆ ಹೋಲಿಸಿದರೆ ದೇಶೀಯ ಕರೆನ್ಸಿಯ ವಿನಿಮಯ ದರದ ಇಂತಹ ದೀರ್ಘಾವಧಿಯ ಮತ್ತು ಸತತ ಮೌಲ್ಯಸವೆತದ ವಿದ್ಯಮಾನವು ಭಾರತಕ್ಕೆ ಮಾತ್ರ ಸೀಮಿತವಲ್ಲ. ಮೂರನೇ ಜಗತ್ತಿನ ಬಹುತೇಕ ದೇಶಗಳಲ್ಲಿ ಈ ಸಮಸ್ಯೆ ಇದ್ದೇ ಇದೆ. ರೂಪಾಯಿಯ ವಿನಿಮಯ ದರವನ್ನು ಎಂದಿಗೂ ತೇಲಲು ಬಿಡಬಾರದು, ಬದಲಿಗೆ ಡಾಲರ್ ಎದುರಿಗೆ ಲಗತ್ತಿಸಬೇಕು ಮತ್ತು ಅದನ್ನು ಡಿರಿಜಿಸ್ಟ್(ನಿಯಂತ್ರಣಗಳ) ಅವಧಿಯಲ್ಲಿದ್ದಂತೆ, ಬಂಡವಾಳದ ಹೊರ ಹರಿವಿನ ಮೇಲೆ ಹಾಗೂ ಅಗತ್ಯಕ್ಕೆ ಅನುಗುಣವಾಗಿ ವಿದೇಶಿ ವಿನಿಮಯದ ಮೇಲೆ ನಿಯಂತ್ರಣಗಳ ಮೂಲಕ ಕಾಯ್ದುಕೊಳ್ಳಬೇಕು ಎಂಬುದಕ್ಕೆ ಇದು ಒಂದು ಬಹುಮಹತ್ವದ ಕಾರಣ.

ಡಾಲರ್ ಬಲವರ್ಧನೆಯ ಒಗಟು

ರೂಪಾಯಿಯ ಈ ದೀರ್ಘಾವಧಿ ಪತನವು ಅಸಮಾನವಾಗಿ ಸಂಭವಿಸುತ್ತದೆ: ಕೆಲವು ಅವಧಿಗಳಲ್ಲಿ ಹೆಚ್ಚು ವೇಗವಾಗಿ ಬೀಳುತ್ತದೆ ಮತ್ತು ಕೆಲವು ಅವಧಿಗಳಲ್ಲಿ ಕುಸಿತದ ವೇಗವು ಕಡಿಮೆ ಇರುತ್ತದೆ. ಆದ್ದರಿಂದ ಕಳೆದ ಕೆಲವು ವಾರಗಳಲ್ಲಿ ರೂಪಾಯಿ ಮೌಲ್ಯವು ಹಠಾತ್ತಾಗಿ ಕುಸಿಯಿತು, ಏಕೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ರೂಪಾಯಿ ಏಕೆ ತೀವ್ರವಾಗಿ ಈಗ ಕುಸಿಯುತ್ತಿದೆ ಎಂಬುದರ ಬಗ್ಗೆ ಪತ್ರಿಕೆಗಳು ವ್ಯಾಪಕವಾಗಿ ಚರ್ಚಿಸುತ್ತಿವೆ. ಭಾರತದ ಹಣದುಬ್ಬರ ದರವು ಯುಎಸ್‌ಗಿಂತ ಹೆಚ್ಚಿನ ಮಟ್ಟದಲ್ಲಿದೆ; ಭಾರತದ ವ್ಯಾಪಾರ ಕೊರತೆಯು ವಿಸ್ತರಿಸುತ್ತಿದೆ ಎಂಬ ವಿವರಣೆಯನ್ನು ವ್ಯಾಖ್ಯಾನಕಾರರು ನೀಡುತ್ತಾರೆ. ಆದರೆ, ಹೆಚ್ಚು ಗಮನ ಪಡೆಯದ ಒಂದು ಅಂಶವೆಂದರೆ, ಡಾಲರ್‌ನ ಇತ್ತೀಚಿನ ಬಲವರ್ಧನೆಯು ಕೇವಲ ರೂಪಾಯಿಯ ಎದುರಿಗೆ ಮಾತ್ರವಲ್ಲ, ವಿಶ್ವದ ಪ್ರಮುಖ ಕರೆನ್ಸಿಗಳ ಎದುರಿಗೂ ಡಾಲರ್ ಬಲಗೊಂಡಿದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಭಾರತ–ನಿರ್ದಿಷ್ಟ ಅಂಶಗಳ ಹೊರತಾಗಿ, ವಿಶ್ವದ ಪ್ರಮುಖ ಕರೆನ್ಸಿಗಳ ಎದುರಿಗೆ ಡಾಲರ್ ಈಗ ಏಕೆ ಬಲಗೊಳ್ಳುತ್ತಿದೆ ಎಂಬುದಕ್ಕೆ ಕೆಲವು ಮೂಲಭೂತ ಕಾರಣಗಳಿವೆ. ಡಾಲರ್ ಈಗಿರುವಷ್ಟು ಬಲವಾಗಿ ಕಳೆದ ದಶಕದ ಯಾವುದೇ



ಸಮಯದಲ್ಲೂ ಇರಲಿಲ್ಲ: ಬ್ಲೂಮ್‌ಬರ್ಗ್ ಡಾಲರ್ ಸ್ಪಾಟ್ ಸೂಚ್ಯಂಕವು ಈ ವರ್ಷ ಶೇಕಡಾ 7ರಷ್ಟು ಏರಿಕೆಯಾಗಿದೆ. 2015ರ ನಂತರದ ಯಾವುದೇ ವರ್ಷದಲ್ಲಿ ಡಾಲರ್ ಹೊಂದಿದ್ದ ಮೌಲ್ಯಕ್ಕಿಂತಲೂ ಹೆಚ್ಚು ಬಲಗೊಂಡಿದೆ.

ಡಾಲರ್ ಬಲಗೊಳ್ಳುತ್ತಿರುವ ಅಂಶವು ಮೇಲ್ನೋಟದಲ್ಲೇ ಕುತೂಹಲಕಾರಿಯಾಗಿ ಕಾಣುತ್ತದೆ. ತಾವು ಅಧಿಕಾರ ವಹಿಸಿಕೊಂಡ ನಂತರ ಜಾರಿ ಮಾಡಲಿರುವ ಆಮದು ಸುಂಕಗಳ ಹೆಚ್ಚಳದ ಪ್ರಸ್ತಾಪವನ್ನು ಯುಎಸ್ ಅಧ್ಯಕ್ಷರಾಗಿ ಚುನಾಯಿತರಾದ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿದ್ದಾರೆ. ಐಎಂಎಫ್‌ನಿಂದ ಹಿಡಿದು ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಘಟನೆಯವರೆಗೆ ವಿವಿಧ ಅಂತಾರಾಷ್ಟ್ರೀಯ ಸಂಸ್ಥೆಗಳಿಂದ ಪ್ರತಿದಿನವೂ ಮುಕ್ತ ವ್ಯಾಪಾರದ ಶ್ಲಾಘನೆಯ ಉಪದೇಶ ವಾಣಿಯನ್ನು ನಾವು ಕೇಳುತ್ತೇವೆ. ಹಾಗಾಗಿ ಈ ಸಂಸ್ಥೆಗಳು ಟ್ರಂಪ್ ಜಾರಿ ಮಾಡಲಿರುವ ನೀತಿಯನ್ನು ಪ್ರತಿಗಾಮಿ ನೀತಿ ಎಂದು ವರ್ಗೀಕರಿಸಬೇಕು; ಯಾವುದು ಒಳ್ಳೆಯದು ಎಂಬುದು ಮಾರುಕಟ್ಟೆಗೇ 'ಎಲ್ಲರಿಗಿಂತ ಚೆನ್ನಾಗಿ ಗೊತ್ತಿದೆ' ಎಂದು ಈ ಸಂಸ್ಥೆಗಳು ನಂಬಿರುವುದರಿಂದಾಗಿ, ಈ ಮಾರುಕಟ್ಟೆ ಅಮೆರಿಕಾದ ಭವಿಷ್ಯದ ಬಗ್ಗೆ ನಂಬಿಕೆಯನ್ನು ಸ್ವಲ್ಪ ಮಟ್ಟಿಗಾದರೂ ಕಳೆದುಕೊಳ್ಳುತ್ತಿರಬೇಕು ಮತ್ತು ಅಮೆರಿಕದಿಂದ ಸಣ್ಣ ಪ್ರಮಾಣದಲ್ಲಾದರೂ ಸರಿಯೇ ಬಂಡವಾಳದ ಹೊರ ಹರಿವು ಕಾಣಬೇಕಿತ್ತು. ಅಂದರೆ ಡಾಲರ್ ಮೌಲ್ಯವು ಇಳಿಯಬೇಕಾಗಿತ್ತು. ಆದರೆ, ತದ್ವಿರುದ್ಧವಾದುದನ್ನೇ ನಾವು ಕಾಣುತ್ತಿದ್ದೇವೆ. ಇದೆಲ್ಲಕ್ಕಿಂತಲೂ ಮಿಗಿಲಾಗಿ, ಮಾರುಕಟ್ಟೆ ವೀಕ್ಷಕರಲ್ಲಿ ಅನೇಕರು ಯುಎಸ್ ಹೊಂದಲಿರುವ ರಕ್ಷಣಾತ್ಮಕ ವ್ಯಾಪಾರ ನೀತಿಯೇ ಡಾಲರ್ ಬಲವರ್ಧನೆಯ ಹಿಂದಿರುವ ಅಂಶವೆಂದು ಹೇಳುತ್ತಾರೆ. ಗೊಂದಲಮಯವಾಗಿ ತೋರುವ ಈ ವಿದ್ಯಮಾನವನ್ನು ನಾವು ವಿವರಿಸಬಹುದಾದರೂ ಹೇಗೆ?

ಒಗಟಾಗಿ ತೋರುವ ಈ ಸಮಸ್ಯೆಗೆ ಸರಳವಾಗಿ ಕೊಡಬಹುದಾದ ಒಂದು ಉತ್ತರವೆಂದರೆ, ಮುಕ್ತ ವ್ಯಾಪಾರದ ಸದ್ಗುಣಗಳ ಬಗ್ಗೆ ಅಂತಾರಾಷ್ಟ್ರೀಯ ಸಂಸ್ಥೆಗಳು ನೀಡುವ ಉಪದೇಶಗಳು ಏನನ್ನು ಬೇಕಾದರೂ ನಂಬುವ ಮೂರನೇ ಜಗತ್ತಿನ ರಾಜಕಾರಣಿಗಳ ಕಿವಿಗೆ ಮಾತ್ರ ಇಂಪಾಗಿರುತ್ತವೆ, ಆದರೆ ಸ್ವತಃ ಮಾರುಕಟ್ಟೆಯು ಈ ಉಪದೇಶವನ್ನು ಕಿವಿಗೆ ಹಾಕಿಕೊಳ್ಳುವುದೇ ಇಲ್ಲ ಎಂಬುದು. ಯುಎಸ್‌ನ ರಕ್ಷಣಾತ್ಮಕ ವ್ಯಾಪಾರ ನೀತಿಯು ದೇಶೀಯ ಉತ್ಪಾದನೆಯನ್ನು ಸ್ಥಳಾಂತರಿಸಿದ ಆಮದುಗಳನ್ನು ನಿಲ್ಲಿಸುವ ಮೂಲಕ ಆ ದೇಶದಲ್ಲಿ ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುತ್ತದೆ ಮತ್ತು ಆ ಮೂಲಕ ಉತ್ಪಾದನೆಯನ್ನು ಮತ್ತು ಉದ್ಯೋಗಾವಕಾಶವನ್ನು ಹೆಚ್ಚಿಸುತ್ತದೆ ಎಂಬುದು ಸ್ಪಷ್ಟವಾಗಿದೆ. ಜೊತೆಗೆ, ಈ ಕ್ರಮವು, ಬಂಡವಾಳಶಾಹಿ ಜಗತ್ತಿನ ಉಳಿದ ದೇಶಗಳಿಗೆ ನಷ್ಟವನ್ನುಂಟುಮಾಡಿ ಯುಎಸ್‌ನಲ್ಲಿ ಉದ್ಯೋಗ ಪರಿಸ್ಥಿತಿಯನ್ನು ಉತ್ತಮಗೊಳಿಸುತ್ತದೆ ಮಾತ್ರವಲ್ಲ, ಯುಎಸ್‌ನ ವ್ಯಾಪಾರ ಬಾಕಿಯ ಪರಿಸ್ಥಿತಿಯನ್ನೂ ಉತ್ತಮಗೊಳಿಸುತ್ತದೆ. ಹಾಗೆ ನೋಡಿದರೆ ಈ ಕ್ರಮವು ಆ ಪುಟ 14 ಕ್ಕೆ

ಜಿ.ಸಿ. ಬಯ್ಯಾರೆಡ್ಡಿಯವರ ಕುರಿತು ಗಣ್ಯರ ಶೋಕ

ದಣಿವರಿಯದ ಜನಪರ ಹೋರಾಟಗಾರ

"ಸಿಪಿಐ(ಎಂ) ನಾಯಕ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ ಅವರ ನಿಧನದಿಂದ ದುಃಖಿತನಾಗಿದ್ದೇನೆ. ಆತ್ಮೀಯ ಸ್ನೇಹಿತರಾಗಿದ್ದ ಬಯ್ಯಾರೆಡ್ಡಿಯವರು ಭೇಟಿಯಾದಾಗಲ್ಲ ದೇಶದ ರೈತರು ಮತ್ತು ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಮಾತನಾಡುತ್ತಿದ್ದರು. ಈ ಸಮುದಾಯಗಳಿಗೆ ನ್ಯಾಯ ಕೊಡಿಸಲು ತಮ್ಮ ಬದುಕನ್ನು ಅರ್ಪಿಸಿಕೊಂಡಿದ್ದ ಬಯ್ಯಾರೆಡ್ಡಿಯವರು ಒಬ್ಬ ದಣಿವರಿಯದೆ ಇದ್ದ ಜನಪರ ಹೋರಾಟಗಾರ. ಅವರ ಕುಟುಂಬ ವರ್ಗ ಮತ್ತು ಹಿತೈಷಿಗಳ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ."

ಶ್ರೀ ಸಿದ್ಧರಾಮಯ್ಯ, ರಾಜ್ಯದ ಮುಖ್ಯಮಂತ್ರಿಗಳು

ಹೋರಾಟಗಳನ್ನು ಕಟ್ಟುವಲ್ಲಿ ಮುಂಚೂಣಿಯಲ್ಲಿದ್ದವರು

"ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆಗಿದ್ದ ಶ್ರೀ ಜಿ.ಸಿ.ಬಯ್ಯಾರೆಡ್ಡಿಯವರ ನಿಧನ ವಾರ್ತೆ ಕೇಳಿ ಬಹಳ ದುಃಖವಾಯಿತು. ರಾಜ್ಯದಲ್ಲಿ ರೈತ ಕಾರ್ಮಿಕ ಹೋರಾಟಗಳನ್ನು ಕಟ್ಟುವಲ್ಲಿ ಮುಂಚೂಣಿಯಲ್ಲಿದ್ದ ಅವರು ಅನೇಕ ಜನಪರ ಹೋರಾಟಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು. ನನ್ನೊಂದಿಗೂ ಹೋರಾಟಗಳಲ್ಲಿ ಭಾಗವಹಿಸಿದ್ದರು. ಅವರ ಅಗಲಿಕೆ ನನಗೆ ಬಹಳ ನೋವುಂಟು ಮಾಡಿದೆ. ಶ್ರೀಯುತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಕುಟುಂಬ ಸದಸ್ಯರಿಗೆ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ."

ಶ್ರೀ ಎಚ್.ಡಿ. ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿಗಳು, ಹಾಲಿ ಕೇಂದ್ರ ಸಚಿವರು, ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ.

ಸಾಮಾಜಿಕ-ಸಮಾನತೆ, ಬಡವರಿಗಾಗಿ ಹೋರಾಟ

"ಬಯ್ಯಾರೆಡ್ಡಿಯವರದು ಸುದೀರ್ಘವಾದ ನಿರಂತರವಾದ ಹೋರಾಟ. ಸಾಮಾಜಿಕ-ಸಮಾನತೆ, ಬಡವರ ಬಗೆಗೆ ದೀನ ದಲಿತರ ಬಗೆಗೆ ತನ್ನ ಜೀವನವನ್ನು ಮುಡುಪಾಗಿ ಇಟ್ಟು ಹೋರಾಟ ಮಾಡಿ, ರಾಜ್ಯ ಮತ್ತು ಜಿಲ್ಲೆಯಲ್ಲಿ ಶೋಷಿತರ ಆಶಾಕಿರಣವಾಗಿ, ಬಡವರ ಬಂಧುವಾಗಿ ತಮ್ಮ ಜೀವನ ಸಮರ್ಪಣೆ ಮಾಡಿರುತ್ತಾರೆ. ಇಂತಹ ವ್ಯಕ್ತಿಯ ಅಗಲಿಕೆ, ತುಂಬಾ ದುಃಖವಾಗಿದೆ. ಈ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಕೊಡಲೆಂದು ಹಾಗೂ ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥನೆ ಮಾಡುತ್ತೇನೆ."

ಶ್ರೀ ಕೆ.ಎಚ್. ಮುನಿಯಪ್ಪ, ರಾಜ್ಯ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು

ಸ್ಪಷ್ಟ ಎಡ ಮತ್ತು ಸಮಾಜವಾದಿ ನಿಲುವು

ರಾಜ್ಯದಲ್ಲಿ ರೈತರ ಚಳುವಳಿಗೆ ಸ್ಪಷ್ಟ ಎಡ ಮತ್ತು ಸಮಾಜವಾದಿ ನಿಲುವು, ದೃಷ್ಟಿಕೋನವಿರುವಲ್ಲಿ ಅಪಾರ ಪಾತ್ರ ನಿರ್ವಹಿಸಿರುವರು. ಕೃಷಿ ಬೆಲೆ ಆಯೋಗದ ಅವಧಿಯಲ್ಲಿ ರೈತರಪರ ನಿಲುವು, ವರದಿ ಹೊರತರುವಲ್ಲಿ ನನಗೆ ಅಪಾರ ನೈತಿಕ ಬಲ ನೀಡಿರುವರು. ತಮ್ಮ ತೀವ್ರ ಅನಾರೋಗ್ಯದ ನಡುವೆಯೂ ಕೋವಿಡ್ ದಿನಗಳಲ್ಲೂ, ಕೇಂದ್ರ ರಾಜ್ಯ ಸರಕಾರಗಳ ರೈತ ವಿರೋಧಿ ನಿಲುವನ್ನು ವಿರೋಧಿಸಲು ಚಳುವಳಿಯ ಮುಂಚೂಣಿಯಲ್ಲಿದ್ದರು. ಈ ಕಾರ್ಯ ಯಶಸ್ವಾಗುವ ನಿಟ್ಟಿನಲ್ಲಿ ಬಯ್ಯಾರೆಡ್ಡಿಯವರ ಅಗಲಿಕೆ ಭರಿಸಲಾರದ ನಷ್ಟವಾಗಿದ್ದು, ಅದನ್ನು ಸರಿಪಡಿಸುವ ಜವಾಬ್ದಾರಿ ಪ್ರಾಂತ ರೈತ ಸಂಘ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ, ಸಂಯುಕ್ತ ಹೋರಾಟದ ಇತರ ನಾಯಕರ ಮೇಲಿದೆ.

ಡಾ. ಪ್ರಕಾಶ್ ಜಿ. ಕಮ್ಮರಡಿ, ಕೃಷಿ ಆರ್ಥಿಕ ತಜ್ಞರು ಮತ್ತು ಮಾಜಿ ಅಧ್ಯಕ್ಷರು ಕರ್ನಾಟಕ ಕೃಷಿ ಬೆಲೆ ಆಯೋಗ

ಜೀವದ ಪರಿವೆ ಇಲ್ಲದೇ ಹೋರಾಟ

ಕಾಮ್ರೇಡ್ ಬಯ್ಯಾರೆಡ್ಡಿ ಬದ್ಧತೆಯಿಂದ ಬಡ-ರೈತ ಕೂಲಿಕಾರರ ಪರವಾಗಿ ನಿರಂತರ ಹೋರಾಟ ಮಾಡಿದರು. ತಮ್ಮ ಜೀವದ ಪರಿವೆ ಇಲ್ಲದೇ ಜನಪರ ಹೋರಾಟ ಮಾಡಿ, ನಮ್ಮನ್ನು ಅಗಲಿ ಹೋಗಿರುವುದು ದುಃಖದ ವಿಷಯ. ರೈತ ಹೋರಾಟಗಾರರಿಗೆ ನನ್ನ ನಮನ.

ಬಿ.ಆರ್. ಪಾಟೀಲ, ಶಾಸಕರು, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳು

ಮಾದರಿಯಾಗಿದ್ದ ಸೈದ್ಧಾಂತಿಕತೆ, ಕ್ರಿಯಾಶೀಲತೆ

ಸಂಗಾತಿ ಬಯ್ಯಾರೆಡ್ಡಿಯವರ ಅಕಾಲಿಕ ಮರಣ ಇಡೀ ನಾಡಿಗೆ ದಿಗ್ಭ್ರಮೆ ಉಂಟುಮಾಡುವ ಸುದ್ದಿ. ಅವರ ನಿಧನದಿಂದ ದೇಶದ ಸ್ವಾತಂತ್ರ್ಯ ಇವುಗಳ ಬಗೆಗೆ ಹೋರಾಡುವ ಶಕ್ತಿಗೆ ದುರ್ಬಲತೆ ಬಂದಿದೆ. ಅವರ ಸಂಘಟನಾ ಶಕ್ತಿ, ತತ್ವಬದ್ಧತೆ, ಕ್ರಿಯಾಶೀಲತೆ ಎಲ್ಲ ಹೋರಾಟಗಾರರಿಗೂ ಮಾದರಿಯಾಗಿದ್ದ ಸೈದ್ಧಾಂತಿಕತೆ ವೈಯಕ್ತಿಕವಾಗಿ ನನಗೆ ಆಪ್ತತೆಯ ಸವಿ ಮೆಲುಕು ಹಾಕುವಂತಹ ಒಡನಾಟದ ಬಂಧುತ್ವವಾಗಿತ್ತು. ಅವರ ದಿವ್ಯ ನಿರ್ಗಮನಕ್ಕೆ ಅಂತರಾಳದ ಅಶ್ರುತರ್ಪಣ.

ಎಸ್.ಜಿ. ಸಿದ್ದರಾಮಯ್ಯ, ಸಾಹಿತಿಗಳು, ಮಾಜಿ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.

ಪ್ರೀತಿ, ಆತ್ಮೀಯತೆ, ವಿಶ್ವಾಸಗಳ ಮಾತುಗಳು

ಶ್ರೀ ಬಯ್ಯಾರೆಡ್ಡಿಯವರ ವ್ಯಕ್ತಿತ್ವದ ಪ್ರಭಾವ ಅವರೊಡನೆ ಒಡನಾಡಿದ ಪ್ರತಿಯೊಬ್ಬರಿಗೂ ಬೀರಿರುತ್ತದೆ. ಕೆಲವೇ ಕ್ಷಣಗಳನ್ನು ಅವರೊಡನೆ ಕಳೆದರೂ ಅವರೊಳಗಿದ್ದ ಮೂಲಭೂತ ಮಾನವೀಯ ಮೌಲ್ಯಗಳಾದ ಪ್ರೀತಿ, ಆತ್ಮೀಯತೆ, ವಿಶ್ವಾಸಗಳ ಮಾತುಗಳು ಯಾರನ್ನೂ ಬೇರೆ ಅಥವಾ ಪ್ರತ್ಯೇಕ ಎನ್ನಿಸುತ್ತಿರಲಿಲ್ಲ. ಅವುಗಳ ಜೊತೆಗೂಡಿದ ಸಮಾಜವಾದಿ ಸಿದ್ಧಾಂತಕ್ಕಿದ್ದ ಬದ್ಧತೆ ಅವರನ್ನು ಒಬ್ಬ ಸಂಪೂರ್ಣ ಚಳುವಳಿಗಾರರನ್ನಾಗಿಸಿತ್ತು.

ಚುಕ್ಕಿ ನಂಜುಂಡ ಸ್ವಾಮಿ, ಕರ್ನಾಟಕ ರಾಜ್ಯ ರೈತ ಸಂಘಟನೆ.

ಕೋಲಾರ ಜಿಲ್ಲೆಯ ಸಂಘಟನೆಯಿಂದ ದಲಿತ ಸಂಘಟನೆಯೊಂದಿಗೆ ಅನೇಕ ಹೋರಾಟಗಳಲ್ಲಿ ಕೂಡಿ-ಸಂಘಟಿತ ಕೆಂಪು ನೀಲಿ ಬೆಸುಗೆಗೆ ಕಾರಣರಾದವರು ಬಯ್ಯಾರೆಡ್ಡಿಯವರು. ಕೊನೆಯ ದಿನಗಳವರೆಗೂ ಹೋರಾಟವೇ ಜೀವ ಎಂದು ನುಡಿದಂತೆ ನಡೆದ ಸಂಗಾತಿಗೆ ಭಾವಪೂರ್ಣ ಶ್ರದ್ಧಾಂಜಲಿ.

ವಿ. ನಾಗರಾಜ, ರಾಜ್ಯ ಸಂಘಟನಾ ಸಂಯೋಜಕರು, ದಲಿತ ಸಂಘರ್ಷ ಸಮಿತಿ.

ಕೊನೆಯುಸಿರಿನ ತನಕ..

ಕಾಮ್ರೇಡ್ ಬಯ್ಯಾರೆಡ್ಡಿಯವರು ಒಬ್ಬ ಮಾದರಿ ಹೋರಾಟಗಾರರಾಗಿ ಬದುಕಿದವರು. ತಮ್ಮ ಅನಾರೋಗ್ಯದ ಮಧ್ಯೆಯೂ ಕೊನೆಯುಸಿರಿನ ತನಕ ಸಂಘಟನೆ ಹೋರಾಟಗಳಲ್ಲಿ ತೊಡಗಿಸಿಕೊಂಡವರು. ವಿದ್ಯಾರ್ಥಿ ಚಳುವಳಿಯಿಂದಲೇ ಹೋರಾಟದಲ್ಲಿ ತೊಡಗಿದ ಬಯ್ಯಾರೆಡ್ಡಿಯವರು ಪಕ್ಷದ ರೈತ ಚಳುವಳಿಯ ಪ್ರಭಾವಿ ನಾಯಕರಾಗಿ ಬೆಳೆದರು. ಅವರ ನಿಧನ ಸಿಪಿಐ(ಎಂ) ಪಕ್ಷಕ್ಕೆ, ಎಡಪಕ್ಷಗಳಿಗೂ ರಾಜ್ಯದ ಜನಪರ ಹೋರಾಟಗಳಿಗೂ ತುಂಬಲಾರದ ನಷ್ಟ. ಭಾರತ ಕಮ್ಯೂನಿಸ್ಟ್ ಪಕ್ಷದಿಂದ ಅಗಲಿದ ಸಂಗಾತಿಗೆ ಅಂತಿಮ ನಮನಗಳು.

ಡಾ. ಸಿದ್ದನಗೌಡ ಪಾಟೀಲ, ಸಾಹಿತಿಗಳು, ಸಿಪಿಐ ಕರ್ನಾಟಕ ರಾಜ್ಯ ಮುಖಂಡರು.

ದೊಡ್ಡ ಆಘಾತ

ಸಂಗಾತಿ ಬಯ್ಯಾರೆಡ್ಡಿಯವರ ಅಗಲಿಕೆ ಎಡ ಚಳುವಳಿಗೆ ದೊಡ್ಡ ಆಘಾತ. ಸಿಪಿಐ ರಾಜ್ಯ ಮಂಡಳಿ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಗಳು.

ಸಾತಿ ಸುಂದರೇಶ್, ರಾಜ್ಯ ಕಾರ್ಯದರ್ಶಿ. ಸಿಪಿಐ

ನಿಜ ನಾಯಕರು, ಹೋರಾಟಗಾರರು

ಕಳೆದ ಹತ್ತು ವರ್ಷಗಳಿಂದ ಕಾಂ.ಬಯ್ಯಾರೆಡ್ಡಿ ಅವರ ಒಡನಾಟದಲ್ಲಿದ್ದು ತುಂಬಾ ಹತ್ತಿರದಿಂದ ಅವರನ್ನು ಕಂಡಿದ್ದೇನೆ. ನಾನು ಕಂಡ ಕೆಲವೇ ನಿಜ ನಾಯಕರಲ್ಲಿ ಹೋರಾಟಗಾರರಲ್ಲಿ ಪ್ರಮುಖರು. ಜನರ ಮಧ್ಯೆ ಜನರಿಗಾಗಿ ಹೋರಾಟ ಮಾಡಿ ಸರ್ಕಾರಗಳನ್ನು ಎಚ್ಚರಿಸಿ ನ್ಯಾಯ ದೊರಕಿಸಿ ಕೊಟ್ಟ ಒಬ್ಬ ದಿಟ್ಟ ಪ್ರಾಮಾಣಿಕ, ಸೈದ್ಧಾಂತಿಕ ಹೋರಾಟಗಾರರು. ಅವರು ಸಾವು ನಿಜವಾಗಿಯೂ ತುಂಬಾ ನೋವು ತಂದಿದೆ. ಮತ್ತೆ ಹುಟ್ಟಿ ಬರುವ ಅವಕಾಶವಿದ್ದರೆ ಮತ್ತೆ ರೈತ ನಾಯಕರಾಗೇ ಹುಟ್ಟಿ ಬರಲಿ. ಕಾಮ್ರೇಡ್‌ರವರಿಗೆ ನನ್ನ ಹೃದಯಪೂರ್ವಕ ಹಸಿರು ನಮನಗಳು.

ಎಂ. ಗೋವಿಂದರಾಜು, ರಾಜ್ಯ ಕಾರ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ತುಮಕೂರು ಜಿಲ್ಲೆ.

ಇದು ಅಪೂರ್ಣ

ತುರ್ತು ಪರಿಸ್ಥಿತಿ ತರುವಾಯ ನಾವೆಲ್ಲಾ ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡೆವು. 1979 ನಲ್ಲಿ ನಾನು ಎಸ್.ಎಫ್.ಐ.ರಾಜ್ಯಕಾರ್ಯದರ್ಶಿಯಾಗಿ ಆಯ್ಕೆಯಾದ ಬಳಿಕ ಸಂಘಟನೆಯ ಪ್ರಯುಕ್ತ ಎಲ್ಲಾ ಜಿಲ್ಲೆಗಳಿಗೆ ಸಂಚರಿಸುತ್ತಿದ್ದೆನು. ಆಗ ಕೋಲಾರ ಜಿಲ್ಲೆಯಲ್ಲಿ ಎಸ್.ಎಫ್.ಐ. ಸಕ್ರಿಯವಾಗಿದ್ದು, ವಿಶೇಷವಾಗಿ ಚಿಂತಾಮಣಿ ಪ್ರದೇಶದಲ್ಲಿ ಪ್ರಬಲವಾಗಿತ್ತು.

ಎಸ್.ಆರ್. ಆರಾಧ್ಯ, ಹಿರಿಯ ಪತ್ರಕರ್ತರು, ಎಸ್.ಎಫ್.ಐ. ಮಾಜಿ ರಾಜ್ಯ ಮುಖಂಡರು.

ಸತತ ರೂಪಾಯಿ ಕುಸಿತ...... ಪುಟ 13 ರಿಂದ

ದೇಶದ ವ್ಯಾಪಾರದ ಬಾಕಿಯ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಮೂಲಕ ನಿಖರವಾಗಿ ಯುಎಸ್‌ನಲ್ಲಿ ಒಟ್ಟು ಬೇಡಿಕೆಯನ್ನು ಹೆಚ್ಚಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಯುಎಸ್ ತನ್ನ ರಕ್ಷಣಾತ್ಮಕ ವ್ಯಾಪಾರ ಕ್ರಮಗಳ ಮೂಲಕ ತನ್ನ ಪಾವತಿ ಶೇಷದ ಪರಿಸ್ಥಿತಿಯನ್ನು ಸುಧಾರಿಸುತ್ತದೆ, ಜೊತೆಗೆ ಅದರ ಉದ್ಯೋಗಾವಕಾಶಗಳನ್ನು ಮತ್ತು ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಈ ಎಲ್ಲ ಅಂಶಗಳಿಂದಾಗಿ ಯುಎಸ್ ಅರ್ಥವ್ಯವಸ್ಥೆಯು ಹದಗೆಡುವ ಬದಲು ಸುಧಾರಿಸುತ್ತದೆ ಎಂಬುದೇ ಮಾರುಕಟ್ಟೆಯು ಲೆಕ್ಕಹಾಕಿರುವಂತೆ ಕಾಣುತ್ತದೆ. ಇದು ಏನನ್ನು ನಾವು ನಂಬಬೇಕೆಂದು ಮುಕ್ತ ವ್ಯಾಪಾರದ ಸಮರ್ಥಕರು ಬಯಸುತ್ತಾರೋ ಅದಕ್ಕೆ ತದ್ವಿರುದ್ಧವಾಗಿದೆ. ಉತ್ತಮಗೊಂಡ ಈ ನಿರೀಕ್ಷೆಯ ಸಂದರ್ಭದಲ್ಲಿ ಇತರ ಪ್ರಮುಖ ಕರೆನ್ಸಿಗಳಿಗೆ ಹೋಲಿಸಿದರೆ ಡಾಲರ್ ಹೆಚ್ಚು ವಿಶ್ವಾಸಾರ್ಹವಾಗಿ ಕಾಣುತ್ತದೆ. ಆದ್ದರಿಂದ, ಇತರ ಕರೆನ್ಸಿಗಳಿಗೆ ಹೋಲಿಸಿದರೆ, ಡಾಲರ್‌ನ ವಿನಿಮಯ ದರದಲ್ಲಿ ಮೌಲ್ಯವರ್ಧನೆಯಾಗುತ್ತದೆ.

ಬಂಡವಾಳಶಾಹಿ ತರ್ಕಹೀನತೆ –ಸಟ್ಟಾಕೋರರ ಚಾಪಲ್ಯ

ಯುಎಸ್‌ನ ಈ ರಕ್ಷಣಾತ್ಮಕ ನೀತಿಯು ಅಲ್ಲಿ ಹಣದುಬ್ಬರ ದರವನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸುವುದರಲ್ಲಿ ಅನುಮಾನವಿಲ್ಲ. ಆದರೆ, ಬಂಡವಾಳಶಾಹಿ ಜಗತ್ತಿನ ಉಳಿದ ದೇಶಗಳಲ್ಲಿ ನಿಸ್ಸಂಶಯವಾಗಿ ಹಣದುಬ್ಬರ ದರವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಹೆಚ್ಚಿಸುತ್ತದೆ. ಏಕೆಂದರೆ ಹಲವಾರು ಸರಕುಗಳ ಅಂತಾರಾಷ್ಟ್ರೀಯ ಬೆಲೆಗಳನ್ನು, ವಿಶೇಷವಾಗಿ ತೈಲದಂತಹ ನಿರ್ಣಾಯಕ ಲಾಗುವಾಡು ಸರಕುಗಳ ಬೆಲೆಗಳನ್ನು, ಡಾಲರ್ ಕರೆನ್ಸಿಯಲ್ಲಿ ನಿಗದಿಪಡಿಸಲಾಗಿದೆ. ಮತ್ತು, ಡಾಲರ್ ಮೌಲ್ಯವು ಇತರ ಕರೆನ್ಸಿಗಳ ಎದುರಿಗೆ ಬಲಗೊಂಡಿರುವುದರಿಂದ, ಅದು ಇತರ ಕರೆನ್ಸಿಗಳನ್ನು ಅಪಮೌಲ್ಯಗೊಳಿಸುವ ಪರಿಣಾಮವನ್ನು ಹೊಂದಿರುತ್ತದೆ. ಆದ್ದರಿಂದ ಬಂಡವಾಳಶಾಹಿ ಜಗತ್ತಿನ ಉಳಿದ ದೇಶಗಳು ಹಣದುಬ್ಬರ ಪರಿಸ್ಥಿತಿಗೆ ತಳ್ಳಲ್ಪಡುತ್ತವೆ.

ಬಂಡವಾಳಶಾಹಿ ಜಗತ್ತಿನ ಉಳಿದ ದೇಶಗಳ ದುಡಿಯುವ ಜನರು ಎರಡು ವಿಭಿನ್ನ ಕಾರಣಗಳಿಂದಾಗಿ ತಮ್ಮ ಜೀವನಮಟ್ಟದಲ್ಲಿ ಕುಸಿತವನ್ನು ಅನುಭವಿಸುತ್ತಾರೆ: ಮೊದಲನೆಯದು, ಅಮೆರಿಕದ ರಕ್ಷಣಾತ್ಮಕ ವ್ಯಾಪಾರ ನೀತಿಯ ಕಾರಣದಿಂದಾಗಿ ಅಮೆರಿಕದ ಮಾರುಕಟ್ಟೆಯನ್ನು ಕಳೆದುಕೊಂಡ ದೇಶಗಳಲ್ಲಿ ಉದ್ಯೋಗಗಳು ನಾಶವಾಗುತ್ತವೆ. ಎರಡನೆಯದು, ಡಾಲರ್‌ಗೆ ಹೋಲಿಸಿದರೆ ಉಳಿದ ದೇಶಗಳ ಕರೆನ್ಸಿಗಳ ಅಪ-ಮೌಲ್ಯದಿಂದಾಗಿ ಈ ದೇಶಗಳಲ್ಲಿ ವೆಚ್ಚ-ತಳ್ಳು ಹಣದುಬ್ಬರ ದರದ ಏರಿಕೆಯಾಗುತ್ತದೆ. ಈ ವೆಚ್ಚ-ತಳ್ಳು ಹಣದುಬ್ಬರವನ್ನು ಈ ದೇಶಗಳ ಸರ್ಕಾರಗಳು ನಿರುದ್ಯೋಗವನ್ನು ಹೆಚ್ಚಿಸುವ ಮತ್ತು ಕಾರ್ಮಿಕರ ಚೌಕಾಶಿ ಸಾಮರ್ಥ್ಯವನ್ನು ದುರ್ಬಲಗೊಳಿಸುವ "ಮಿತವ್ಯಯ" ಕ್ರಮಗಳಿಂದ ಕಾರ್ಮಿಕರಿಗೆ ನಷ್ಟ ಉಂಟುಮಾಡುವ ಮೂಲಕ ನಿಯಂತ್ರಿಸಲು ಪ್ರಯತ್ನಿಸಿದರೆ, ಅದು ದುಡಿಯುವ ಜನರನ್ನು ಬಡತನದೆಡೆಗೆ ಕೊಂಡೊಯ್ಯುವ ಮತ್ತೊಂದು ಮಾರ್ಗವಾಗುತ್ತದೆ.

ಹೊರ ದೇಶಗಳಿಂದ ಸಾಲ ಪಡೆದ ಮೂರನೇ ಜಗತ್ತಿನ ದೇಶಗಳ ಸಂದರ್ಭದಲ್ಲಿ, ಮೇಲೆ ತಿಳಿಸಿದ ನಿರುದ್ಯೋಗ ಮತ್ತು ಹಣದುಬ್ಬರ ಮೂಲಕದ ಮಾರ್ಗಗಳ ಜೊತೆಗೆ, ದುಡಿಯುವ ಜನರ ಮೇಲೆ ಹೊರೆ ಹೆಚ್ಚಿಸುವ ಇನ್ನೊಂದು ಹೆಚ್ಚುವರಿ ಮಾರ್ಗವಿದೆ. ಬಾಹ್ಯ ಸಾಲವನ್ನು ಸಾಮಾನ್ಯವಾಗಿ ಯುಎಸ್ ಡಾಲರ್ ರೂಪದಲ್ಲಿ ಪಡೆಯುವುದರಿಂದ, ಡಾಲರ್ ಬಲಗೊಂಡ ಪರಿಣಾಮವಾಗಿ ಉಂಟಾಗುವ ಸ್ಥಳೀಯ ಕರೆನ್ಸಿಯ ಅಪ-ಮೌಲ್ಯದಿಂದಾಗಿ ಸ್ಥಳೀಯ ಕರೆನ್ಸಿ ಲೆಕ್ಕದಲ್ಲಿ ಬಾಹ್ಯ ಸಾಲದ ಮೊತ್ತ ಹೆಚ್ಚುತ್ತದೆ. ಹಾಗಾಗಿ ಅವರಿಗೆ ಸಾಲದ ಹೊರೆ ಹೆಚ್ಚು ಭಾರವಾಗುತ್ತದೆ. ಈ ಭಾರವೂ ಅಗತ್ಯವಾಗಿ ದುಡಿಯುವ ಜನರ ಮೇಲೇ ಬೀಳುತ್ತದೆ.

ಹೀಗೆ ವಿಶ್ವ ಅರ್ಥವ್ಯವಸ್ಥೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಮೂಲಭೂತ ತರ್ಕಹೀನತೆಯು ಅನಾವರಣಗೊಳ್ಳುತ್ತದೆ. ಕೋಟ್ಯಂತರ ಜನರ ಜೀವನ ಪರಿಸ್ಥಿತಿಗಳು ಕೆಲವು ಸಟ್ಟಾಬಾಜಿಕೋರರ ಹುಚ್ಚಾಟ ಮತ್ತು ಚಾಪಲ್ಯಗಳ ಮೇಲೆ ಅವಲಂಬಿತವಾಗುತ್ತವೆ. ಅಮೆರಿಕದ ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆ ಹೆಚ್ಚಬಹುದು. ಆ ಮೂಲಕ ಉದ್ಯೋಗಗಳು ಮತ್ತು ಉತ್ಪಾದನೆಯೂ ಹೆಚ್ಚಬಹುದು. ಇದು ರಕ್ಷಣಾತ್ಮಕ ವ್ಯಾಪಾರ ನೀತಿಯ ಮಹತ್ವದ ಅಂಶವೂ ಹೌದು. ಆದರೆ, ಈ ವ್ಯಾಪಾರ ನೀತಿಯು ಉಳಿದ ದೇಶಗಳ ವಿನಿಮಯ ದರಗಳ ಮೇಲೆ ಪ್ರಭಾವ ಬೀರುತ್ತದೆ. ಈ ಪ್ರಭಾವವು ಮಾರುಕಟ್ಟೆಯಲ್ಲಿ ಭಾಗವಹಿಸುವವರು ಏನು ನಿರೀಕ್ಷಿಸುತ್ತಾರೆ ಎಂಬುದರ ಮೂಲಕ ವ್ಯಕ್ತಗೊಳ್ಳುತ್ತದೆ. ಸಟ್ಟಾಕೋರ ವರ್ತನೆಗಳು ಇಂತಹ ನಿರೀಕ್ಷೆಗಳನ್ನು ಹುಟ್ಟುಹಾಕುತ್ತವೆ. ಮತ್ತು ಬಂಡವಾಳಶಾಹಿಯ ಅಡಿಯಲ್ಲಿ ಇದೇ ತಾನೇ ಮುಖ್ಯವಾಗುವುದು! ❍

ಕೆನಡಾ-ವಿಫಲ ನಾಯಕನ ನಿರ್ಗಮನ

ಶ್ರೀಮಂತ ರಾಷ್ಟ್ರದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಜನತೆ

ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ತಮ್ಮ ಸ್ಥಾನಕ್ಕೆ ಹಠಾತ್ ರಾಜೀನಾಮೆ ಘೋಷಿಸಿದ್ದಾರೆ. ನಮ್ಮ ದೇಶದ ಬಹುತೇಕ ಮಾಧ್ಯಮಗಳು ಈ ರಾಜೀನಾಮೆಗೆ ನಿಜವಾದ ಕಾರಣಗಳನ್ನು ಮುಚ್ಚಿಟ್ಟು ಬೇರೆಯದೇ ಕಥೆ ಕಟ್ಟಿ ಪ್ರಸಾರ ಮಾಡುತ್ತಿವೆ. ಆರ್ಥಿಕ ಅನಿಶ್ಚಿತತೆ, ಕೆನಡಾದ ಡಾಲರ್ ಮೌಲ್ಯ ಕುಸಿತ, ಹಣದುಬ್ಬರ ಹೆಚ್ಚಳ, ಅಗತ್ಯ ವಸ್ತುಗಳ ಬೆಲೆ ಹೆಚ್ಚಳ, ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ ಜನತೆ, ಇವೆಲ್ಲವೂ ಸರ್ಕಾರದ ವಿರುದ್ಧದ ಜನರ ಆಕ್ರೋಶಕ್ಕೆ ಕಾರಣವಾಗಿವೆ. ಶ್ರೀಮಂತ ರಾಷ್ಟ್ರ ಕೆನಡಾದಲ್ಲಿ ಆಳುವ ಲಿಬರಲ್ ಪಕ್ಷದ ವಿರುದ್ಧ ಜನರು ಅವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಸೋಲುವ ಭೀತಿ ಎದುರಾಗಿದೆ. ಜನರು ತಿರುಗಿ ಬಿದ್ದರೆ, ಅಧಿಕಾರದಲ್ಲಿ ಇರುವವರನ್ನು ಯಾವ ವಿಧದಲ್ಲಾದರೂ ಹೊರಗೆ ಹಾಕುತ್ತಾರೆ ಎಂಬುದನ್ನು ಬಾಂಗ್ಲಾದೇಶ ಮತ್ತು ಶ್ರೀಲಂಕಾದಲ್ಲಿನ ಬೆಳವಣಿಗೆಗಳು ಸ್ಪಷ್ಟಪಡಿಸಿವೆ. ಕೆನಡಾದಲ್ಲಿ ಕೂಡಾ ಲಿಬರಲ್ ಪಾರ್ಟಿ ಪರಿಸ್ಥಿತಿಯೂ ಇದೇ ಆಗಿದೆ.



53 ವರ್ಷ ವಯಸ್ಸಿನ ಜಸ್ಟಿನ್ ಟ್ರುಡೊ ಹತ್ತು ವರ್ಷಗಳ ಹಿಂದೆ ಲಿಬರಲ್ ಪಕ್ಷಕ್ಕೆ ಅಭೂತಪೂರ್ವ ಯಶಸ್ಸನ್ನು ತಂದುಕೊಟ್ಟು ಕೆನಡಾ ದೇಶದ ಪ್ರಧಾನಿಯಾದವರು. ಈಗ ಅವರ ಉಪಸ್ಥಿತಿ ಪಕ್ಷವನ್ನು ಪಾತಾಳಕ್ಕೆ ಇಳಿಸಲಿದೆ ಎಂದು ಅದೇ ಪಕ್ಷದ ನಾಯಕರು ಹೇಳುತ್ತಿದ್ದಾರೆ. ದೇಶದ ಒಳಗೆ ಮತ್ತು ವಿದೇಶಗಳಲ್ಲಿ ಉದ್ಭವಿಸಿದ ಪರಿಸ್ಥಿತಿಯಿಂದಾಗಿ ಉಸಿರುಗಟ್ಟುವಿಕೆಯೊಂದಿಗೆ ಟ್ರುಡೊ ತಮ್ಮ ಲಿಬರಲ್ ಪಕ್ಷ ಮತ್ತು ಸರ್ಕಾರದ ಹುದ್ದೆಗಳಿಗೆ ಜನವರಿ 6ರಂದು ಹಠಾತ್ ರಾಜೀನಾಮೆ ಘೋಷಿಸಿದರು. ಈ ತಿಂಗಳ 27ರಂದು ಪ್ರಾರಂಭವಾಗಬೇಕಿದ್ದ ಸಂಸತ್ ಅಧಿವೇಶನಗಳನ್ನು ಮಾರ್ಚ್ 24ರವರೆಗೆ ಸ್ಥಗಿತಗೊಳಿಸಿದರು. ತಕ್ಷಣವೇ ಸಂಸತ್ತನ್ನು ವಿಸರ್ಜಿಸಿ ಚುನಾವಣೆ ನಡೆಸಬೇಕು ಎಂದು ಪ್ರತಿಪಕ್ಷಗಳು ಒತ್ತಾಯಿಸಿವೆ. ಸಂಸತ್ತು ಆರಂಭವಾಗುತ್ತಿದ್ದಂತೆಯೇ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಮೂರು ಪ್ರಮುಖ ವಿರೋಧ ಪಕ್ಷಗಳು ಘೋಷಿಸಿವೆ. ಇದು ನಡೆದರೆ ಸರಕಾರದ ಪತನ ಖಚಿತ. ಬದಲಿ ನಾಯಕನನ್ನು ಆಯ್ಕೆ ಮಾಡುವವರೆಗೆ ಟ್ರುಡೊ ಅವರು ತಮ್ಮ ಹುದ್ದೆಯಲ್ಲಿ ಉಳಿಯುತ್ತಾರೆ. ಒಂದು ವಾರದೊಳಗೆ ಹೊಸ ನಾಯಕನನ್ನು ಆಯ್ಕೆ ಮಾಡುವುದಾಗಿ ಲಿಬರಲ್ ಪಕ್ಷ ಘೋಷಿಸಿದೆ. ಟ್ರುಡೊ ಅವರ ರಾಜೀನಾಮೆ ಘೋಷಣೆ ಹೊರಬಿದ್ದ ತಕ್ಷಣವೇ ಡೊನಾಲ್ಡ್ ಟ್ರಂಪ್ ಪ್ರತಿಕ್ರಿಯಿಸಿ, ಅಮೆರಿಕದ 51 ನೇ ರಾಜ್ಯವಾಗಿ ಕೆನಡಾ ವಿಲೀನವಾಗುವುದು ಒಳ್ಳೆಯದು ಎಂಬ ತಮ್ಮ ಹಿಂದಿನ ಹೇಳಿಕೆಯನ್ನು ಪುನರುಚ್ಚರಿಸಿದ್ದಾರೆ. ಈ ರೀತಿ ವಿಲೀನವಾದರೆ ರಷ್ಯಾ ಮತ್ತು ಚೀನಾದಿಂದ ಸ್ಪರ್ಧೆಯನ್ನು ಎದುರಿಸುವ ಅಗತ್ಯವಿರುವುದಿಲ್ಲ ಎಂದಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಸೋಲುವ ಭೀತಿ

ಪಕ್ಷದಲ್ಲಿ ಉಂಟಾದ ಒಳಜಗಳದಿಂದ ತಮ್ಮ ಖ್ಯಾತಿ ಕುಸಿದದ್ದು, ಹಣಕಾಸು ಸಚಿವರ ರಾಜೀನಾಮೆ, ಆರ್ಥಿಕ ಅನಿಶ್ಚಿತತೆ, ವಾಣಿಜ್ಯ ಯುದ್ಧಕ್ಕೆ ಡೊನಾಲ್ಡ್ ಟ್ರಂಪ್ ಅವರ ಘೋಷಣೆ ಸೇರಿದಂತೆ ಹಲವು ಕಾರಣಗಳಿಂದಾಗಿ ಟ್ರುಡೊ ತಮ್ಮ ರಾಜೀನಾಮೆಯನ್ನು ಘೋಷಿಸಿದರು. ಪಕ್ಷದಲ್ಲಿನ ಆಂತರಿಕ ಕಲಹದ ಕಾರಣದಿಂದ ಮುಂಬರುವ ಚುನಾವಣೆಯಲ್ಲಿ ಪಕ್ಷವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸುವುದಕ್ಕೆ ತಾನು ಸೂಕ್ತ ವ್ಯಕ್ತಿ ಅಲ್ಲವೆಂದು, ಈ ಅಂಶದ ಜತೆಗೆ ಸರ್ಕಾರದಲ್ಲಿನ ಬಿಕ್ಕಟ್ಟು ರಾಜೀನಾಮೆಗೆ ಕಾರಣ ಎಂದು ಹೇಳಿದ್ದಾರೆ. ರಾಜೀನಾಮೆ ನೀಡುವ ಮೊದಲು ತಮ್ಮದೇ ಪಕ್ಷದ ಹಲವು ಸಂಸದರು ಅಧಿಕಾರದಿಂದ ಇಳಿಯುವಂತೆ ಒತ್ತಾಯ ಮಾಡಿದರು. ಟ್ರೂಡೊ ಮುಂದುವರೆದರೆ ಮುಂದಿನ ಚುನಾವಣೆಯಲ್ಲಿ ಸೋಲುವುದು ಖಚಿತ ಎಂದು ಹಲವು ಸಮೀಕ್ಷೆಗಳು ಹೇಳಿವೆ. ಕಳೆದ ಎರಡು ಚುನಾವಣೆಗಳಲ್ಲಿ, ಲಿಬರಲ್ ಪಕ್ಷವು ಕಡಿಮೆ ಶೇಕಡಾವಾರು ಮತಗಳೊಂದಿಗೆ ಹೆಚ್ಚು ಸ್ಥಾನಗಳನ್ನು ಗಳಿಸಿ ಅಲ್ಪಸಂಖ್ಯಾತ ಸರ್ಕಾರವನ್ನು ರಚಿಸಿದೆ. ನ್ಯೂ ಡೆಮಾಕ್ರಟಿಕ್ ಪಾರ್ಟಿ (ಎನ್‌ಡಿಪಿ)ಗೆ ಶೇ. 17.82ರಷ್ಟು ಮತಗಳೊಂದಿಗೆ 25 ಸ್ಥಾನಗಳು ಬಂದಿವೆ. ಈ ಪಕ್ಷದ ಬೆಂಬಲದೊಂದಿಗೆ ಟ್ರುಡೊ ಸರ್ಕಾರ ನಡೆಸಿಕೊಂಡು ಬಂದಿದ್ದರು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನ್ಯೂ ಡೆಮಾಕ್ರಟಿಕ್ ಪಕ್ಷವು ತನ್ನ ಬೆಂಬಲವನ್ನು ಹಿಂತೆಗೆದುಕೊಂಡ ಕಾರಣ ಅಸ್ಥಿರ ಪರಿಸ್ಥಿತಿ ಉಂಟಾಯಿತು. ಅಕ್ಟೋಬರ್ 2025ರವರೆಗೆ ಸಂಸತ್ತಿನ ಅವಧಿ ಇದ್ದರೂ, ಯಾವುದೇ ಕ್ಷಣದಲ್ಲಾದರೂ ಸಂಸತ್ ವಿಸರ್ಜನೆ ಮತ್ತು ಮಧ್ಯಂತರ ಚುನಾವಣೆ ಬರಬಹುದು ಎಂದು ಭಾವಿಸಲಾಗಿದೆ. ಆದಾಗ್ಯೂ ವಿಷಯವನ್ನು ಅವಲಂಬಿಸಿ ತಾವು ಬೆಂಬಲಿಸುತ್ತೇವೆ ಅಥವಾ ವಿರೋಧಿಸುತ್ತೇವೆ ಎಂದು ಎನ್‌ಡಿಪಿ ಘೋಷಿಸಿದಾಗ ಸರ್ಕಾರ ನೆಮ್ಮದಿಯ ನಿಟ್ಟುಸಿರು ಬಿಟ್ಟಿತ್ತು. ಆದರೆ ಡಿ.16ರಂದು ಉಪಪ್ರಧಾನಿ ಹಾಗೂ ಹಣಕಾಸು ಸಚಿವೆ ಕ್ರಿಸ್ಟಿಯಾ ಫ್ರೀಲ್ಯಾಂಡ್ ರಾಜೀನಾಮೆ ನೀಡುವುದರೊಂದಿಗೆ ಆಡಳಿತ ಪಕ್ಷದಲ್ಲಿನ ಗೊಂದಲ ತೀವ್ರಗೊಂಡಿದೆ ಎನ್ನಬಹುದು.

ಆರ್ಥಿಕವಾಗಿ ಗಂಭೀರ ಅನಿಶ್ಚಿತತೆಯನ್ನು ಎದುರಿಸುತ್ತಿದೆ

ಎರಡು ವರ್ಷಗಳ ಹಿಂದೆ 33 ಪ್ರತಿಶತ ಕೆನಡಿಯನ್ನರು ಏರುತ್ತಿರುವ ಬೆಲೆಗಳು ಜನತೆಯ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುತ್ತಿವೆ ಎಂದು ಹೇಳಿದರೆ, 2024ರಲ್ಲಿ ಇವರ ಸಂಖ್ಯೆ ಶೇ.45ಕ್ಕೆ ಏರಿಕೆಯಾಗಿದೆ ಎಂದು ಸಾಮಾಜಿಕ ಸಮೀಕ್ಷೆಯೊಂದು ಬಹಿರಂಗಪಡಿಸಿದೆ. ಮನೆ ಬಾಡಿಗೆ ಕಟ್ಟಲು ಸಾಧ್ಯವಾಗುತ್ತಿಲ್ಲ ಎಂದು ಶೇ. 38ರಷ್ಟು ಜನರು ಹೇಳಿದ್ದಾರೆ. 2021ರಿಂದ ಬೆಲೆ ಹಣದುಬ್ಬರ ಹೆಚ್ಚಳದ ಕಾರಣದಿಂದಾಗಿ ಐದು ಜನರಲ್ಲಿ ಒಬ್ಬರು ಸಾಮಾಜಿಕ ಸಂಸ್ಥೆಗಳಿಂದ ಹೆಚ್ಚು ಕಡಿಮೆ ಆಹಾರವನ್ನು ಪಡೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಆರ್ಥಿಕ ಸಮಸ್ಯೆಗಳಿಂದ ಸ್ವಲ್ಪಮಟ್ಟಿಗೆ ಅಥವಾ ತೀವ್ರವಾಗಿ ಮಾನಸಿಕ ಒತ್ತಡಕ್ಕೊಳಗಾಗಿದ್ದೇವೆ ಎಂದು 35 ಪ್ರತಿಶತದಷ್ಟು ಜನರು ಹೇಳಿದ್ದಾರೆ. ಕಡಿಮೆ ಆದಾಯ ಗಳಿಸುವವರಲ್ಲಿ ಇಂತಹ ಸಮಸ್ಯೆಗಳು ಹೆಚ್ಚಾಗಿ ಕಂಡುಬರುತ್ತಿವೆ.

ಬಾಡಿಗೆ ಮನೆಗಳಲ್ಲಿ ವಾಸಿಸುವ ಜನರಲ್ಲಿ ಜೀವನ ಸಂತೃಪ್ತಿ ತುಂಬಾ ಕಡಿಮೆ ಇದೆ. ವೃದ್ಧರಿಗಿಂತ ಯುವಕರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವುದು ಕಂಡು ಬಂದಿದೆ. 25 ರಿಂದ 44 ವರ್ಷ ವಯಸ್ಸಿನವರಲ್ಲಿ ಶೇ. 55ರಷ್ಟು ಜನರು ಏರುತ್ತಿರುವ ಬೆಲೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ವೃದ್ಧರಲ್ಲಿ ಶೇ. 28ರಷ್ಟಿದ್ದಾರೆ. ಆಹಾರ ಬ್ಯಾಂಕ್‌ಗಳು ಮತ್ತು ಸಾಮಾಜಿಕ ಸಂಸ್ಥೆಗಳಿಂದ ಆಹಾರವನ್ನು ಪಡೆಯುವವರಲ್ಲಿ ಯುವಕರಲ್ಲಿ ಶೇ. 46-47 ರಷ್ಟಿದ್ದರೆ, ವೃದ್ಧರಲ್ಲಿ ಶೇ. 27-28ರಷ್ಟಿದ್ದಾರೆ. ಇನ್ನು ಮಕ್ಕಳ ಮೇಲೆ ಬೆಲೆ ಏರಿಕೆಯ ಋಣಾತ್ಮಕ ಪರಿಣಾಮದ ಕುರಿತು ಹೇಳುವ ಅಗತ್ಯವಿಲ್ಲ. ಆರ್ಥಿಕವಾಗಿ ಕೆನಡಾ ಗಂಭೀರ ಅನಿಶ್ಚಿತತೆಯನ್ನು ಎದುರಿಸುತ್ತಿದೆ. ಕೆನಡಾದ ಡಾಲರ್ ಮೌಲ್ಯವೂ ಕಳೆದ ವಾರ ಕುಸಿದು ಹೊಸ ದಾಖಲೆ ನಿರ್ಮಿಸಿದೆ. ಪ್ರಧಾನಿಯವರ ರಾಜೀನಾಮೆ ಘೋಷಣೆಯ ನಂತರ ಕೊಂಚ ಏರಿಕೆಯಾಗಬಹುದು ಆದರೆ ಅನಿಶ್ಚಿತತೆ ಮುಂದುವರೆಯಬಹುದು.

ಶ್ರೀಮಂತ ದೇಶಗಳಲ್ಲಿನ ಬಿಕ್ಕಟ್ಟು

ಶ್ರೀಮಂತ ದೇಶಗಳಲ್ಲಿನ ಬಿಕ್ಕಟ್ಟು 2008 ರಿಂದ ಇಂದಿನವರೆಗೂ ಕೆನಡಾದಲ್ಲಿಯೂ ಅನಿಶ್ಚಿತತೆಯ ಸೂಚ್ಯಂಕವು ತೀವ್ರ ಏರಿಳಿತಗಳಿಗೆ ಒಳಪಟ್ಟಿದೆ. 2000 ಇಸವಿಯಿಂದ 2008ರವರೆಗೆ ಇದು 50 ರಿಂದ 200ರ ನಡುವೆ ಏರಿಳಿತವಾದ ನಂತರ, ಇದು 100ರಿಂದ 400ರ ನಡುವೆ ಏರಿಳಿತ ಕಂಡಿತು. 2020ರ ಕರೋನಾ ಸಮಯದಲ್ಲಿ ಗರಿಷ್ಠ 690, ಕಳೆದ ವರ್ಷ 650 ಆಗಿತ್ತು. ಟ್ರುಡೊ ಅವರ ರಾಜೀನಾಮೆ ಘೋಷಣೆಯೊಂದಿಗೆ ಈ ವರ್ಷ ಅದು ಮತ್ತೆ ಹೆಚ್ಚಾಗುವ ಸೂಚನೆಗಳು ಕಾಣಿಸುತ್ತಿವೆ. ಹೊಸ ಸರ್ಕಾರ ರಚನೆಯಾದರೂ ಅಕ್ಟೋಬರ್ ವೇಳೆಗೆ ಚುನಾವಣೆ ನಡೆಯಲಿರುವುದರಿಂದ ಹೂಡಿಕೆದಾರರಿಗೆ ಯಾವುದೇ ನಿರ್ಧಾರ ಕೈಗೊಳ್ಳಲು ಮುಂದಾಗುವುದಿಲ್ಲ. ತಮ್ಮ ಯೋಜನೆಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯುವ ಅಥವಾ ಮುಂದೂಡುವ ಸಾಧ್ಯತೆಗಳಿವೆ. ಇದರಿಂದ ಅನಿವಾರ್ಯವಾಗಿ ಉದ್ಯೋಗದ ಮೇಲೂ ತೀವ್ರ ಪರಿಣಾಮ ಬೀರುತ್ತದೆ. ಹೊಸ ನೇಮಕಾತಿಗಳು ಸೀಮಿತವಾಗುತ್ತವೆ.

ಆಮದು ವಸ್ತುಗಳ ಮೇಲೆ ಶೇ.25ರಷ್ಟು ತೆರಿಗೆ; ಡೊನಾಲ್ಡ್ ಟ್ರಂಪ್

ಕೆನಡಾದ ಅತಿದೊಡ್ಡ ವ್ಯಾಪಾರ ಪಾಲುದಾರ ಯುನೈಟೆಡ್ ಸ್ಟೇಟ್ಸ್, ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಶೇ. 25ರಷ್ಟು ತೆರಿಗೆ ವಿಧಿಸುವುದಾಗಿ ಡೊನಾಲ್ಡ್ ಟ್ರಂಪ್ ಘೋಷಣೆ ಮಾಡಿದರು. ಆರ್ಥಿಕ ವಲಯದಲ್ಲಿ ಅನಿಶ್ಚಿತ ಪರಿಸ್ಥಿತಿ ಇರುವ ಕಾರಣದಿಂದ ಈ ವಿಷಯದಲ್ಲಿ ಕೆನಡಾದ ಚೌಕಾಶಿ ಶಕ್ತಿ ಕಡಿಮೆಯಾಗುತ್ತದೆ. ಟ್ರಂಪ್ ಕ್ರಮವು ಅಮೆರಿಕದ ಗ್ರಾಹಕರ ಮೇಲೆ ಹೊರೆಯಾದರೂ, ಕೆನಡಾದ ರಫ್ತುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. 1985ರಿಂದ ಉಭಯ ದೇಶಗಳ ನಡುವಿನ ವ್ಯಾಪಾರ ವಹಿವಾಟುಗಳಲ್ಲಿ ಕೆನಡಾ ಹೆಚ್ಚುವರಿಯಲ್ಲಿದೆ. ತಮ್ಮ ಸರಕುಗಳನ್ನು ಹೆಚ್ಚು ಆಮದು ಮಾಡಿಕೊಳ್ಳಲು ಅಮೆರಿಕಾ ಯಾವಾಗಲೂ ಒತ್ತಾಯಿಸುತ್ತಿದೆ. ಕಳೆದ ಕೆಲವು ತಿಂಗಳುಗಳಲ್ಲಿ ಪಕ್ಷದ ಹಲವು ಸಂಸದರ ಬೇಡಿಕೆಯ ಹೊರತಾಗಿಯೂ ರಾಜೀನಾಮೆ ನೀಡಲು ಟ್ರೂಡೊ ಗೆ ಇಷ್ಟವಿರಲಿಲ್ಲ. ಡಿಸೆಂಬರ್‌ನಲ್ಲಿ ನಡೆದ ಬೆಳವಣಿಗೆಗಳ ಪರಿಣಾಮದಿಂದ ರಾಜೀನಾಮೆ ನೀಡಬೇಕಾಯಿತು.

ಬಜೆಟ್ ಕೊರತೆ 60 ಶತಕೋಟಿ ಡಾಲರ್‌ಗಳಿಗೆ ಹೆಚ್ಚಳ

ಪ್ರಧಾನಿ ಜೊತೆಗಿನ ಭಿನ್ನಾಭಿಪ್ರಾಯಗಳ ಬಗ್ಗೆ ಹಣಕಾಸು ಸಚಿವ ಕ್ರಿಸ್ಟಿಯಾ ಫ್ರೀಲ್ಯಾಂಡ್ ಅವರು ತಮ್ಮ ರಾಜೀನಾಮೆ ಪತ್ರದಲ್ಲಿ ಬಹಿರಂಗಪಡಿಸಿದ್ದಾರೆ. ರಾಜಕೀಯ ಗಿಮಿಕ್‌ಗಳಿಗೆ ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಪರೋಕ್ಷವಾಗಿ ಮಾಡಿದ ಟೀಕೆಗಳ ಪತ್ರ ಬಹಿರಂಗವಾದ ನಂತರ ಒತ್ತಡ ಮತ್ತಷ್ಟು ಹೆಚ್ಚಾಯಿತು. ಈ ವರ್ಷದ ಬಜೆಟ್ ಕೊರತೆಯು 20 ಶತಕೋಟಿ ಡಾಲರ್ ಇರುತ್ತದೆ ಎಂದು ಅಂದಾಜಿಸಲಾಗಿತ್ತಾದರೂ, ಅದು 60 ಶತಕೋಟಿ ಡಾಲರ್‌ಗಳಿಗೆ ಹೆಚ್ಚಾಗಿದೆ. ಬಜೆಟ್ ಕೊರತೆ, ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವ ಭರವಸೆಯೊಂದಿಗೆ ಯುವಕನಾಗಿ ಕ್ಷೇತ್ರಕ್ಕೆ ಪ್ರವೇಶಿಸಿದ ಟ್ರುಡೊಗೆ ಯುವಜನರ ಬಾರಿ ಬೆಂಬಲದೊಂದಿಗೆ 2015ರಲ್ಲಿ ಭರ್ಜರಿ ಗೆಲುವು ಸಾಧಿಸಿದ್ದರೂ ಆಚರಣೆಯಲ್ಲಿ ಅದಕ್ಕೆ ವಿಭಿನ್ನವಾಗಿ ನಡೆದುಕೊಂಡರು. ಅವರು ಗಂಭೀರ ಭ್ರಷ್ಟಾಚಾರ ಆರೋಪವನ್ನೂ ಕೂಡಾ ಎದುರಿಸಿದ್ದಾರೆ.

ಪ್ರಧಾನಿ ಹುದ್ದೆಗೆ ಪೈಪೋಟಿ

ಟ್ರುಡೊ ರಾಜೀನಾಮೆಯಿಂದ ಆಡಳಿತಾರೂಢ ಲಿಬರಲ್ ಪಕ್ಷ ಮತ್ತು ವಿರೋಧ ಪಕ್ಷ ಕನ್ಸರ್ವೇಟಿವ್ ಪಕ್ಷದಿಂದ ಪ್ರಧಾನಿ ಹುದ್ದೆಗೆ ಪೈಪೋಟಿ ಹೆಚ್ಚಿದೆ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕ್ರಿಸ್ಟಿಯಾ ಫ್ರೀಲ್ಯಾಂಡ್, ಪ್ರಸ್ತುತ ಸಾರಿಗೆ ಸಚಿವೆಯಾಗಿರುವ ಭಾರತೀಯ ಮೂಲದ ಅನಿತಾ ಇಂದಿರಾ ಆನಂದ್ ಮತ್ತು ವಿದೇಶಾಂಗ ಸಚಿವೆ ಮೆಲಿನಾ ಜೋಲಿ ಕೂಡ ಪ್ರಮುಖ ಸ್ಪರ್ಧಿಗಳಾಗಿದ್ದಾರೆ ಎಂದು ವರದಿಯಾಗಿದೆ. ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬ್ಯಾಂಕ್ ಆಫ್ ಕೆನಡಾದ ಗವರ್ನರ್ ಆಗಿ ಸೇವೆ ಸಲ್ಲಿಸಿ, ಟ್ರುಡೊಗೆ ಸಲಹೆಗಾರರಾಗಿರುವ ಮಾರ್ಕ್ ಕಾರ್ನಿ ಕೂಡ ರೇಸ್‌ನಲ್ಲಿದ್ದಾರೆ. ಸರ್ಕಾರಕ್ಕೆ ಅಪಕೀರ್ತಿ ತಂದ ಕಾರ್ಬನ್ ತೆರಿಗೆ ಹೇರಿಕೆಯು ಅವರ ಸಲಹೆಯ ಮೇರೆಗೆ ನಡೆಯಿತು. ಮೂರು ಬಾರಿ ಹೆಚ್ಚಿನ ಮತಗಳನ್ನು ಪಡೆದರೂ ಅಗತ್ಯ ಸ್ಥಾನಗಳನ್ನು ಪಡೆಯುವಲ್ಲಿ ವಿಫಲರಾಗಿರುವ ವಿರೋಧ ಪಕ್ಷದ ನಾಯಕ ಪಿಯರ್ ಪೊಯ್ಲಿವಾರೆ ಚುನಾವಣೆಯಲ್ಲಿ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಸಿದ್ಧತೆ ನಡೆಸಿದ್ದಾರೆ.

ಒಂದು ಟಿವಿ ನಡೆಸಿದ ಸಮೀಕ್ಷೆಯಲ್ಲಿ ಪಿಯರ್ ಅವರಿಗೆ 44.2 ಶೇಕಡಾ ಜನರು ಬೆಂಬಲ ವ್ಯಕ್ತಪಡಿಸಿದರೆ, ಟ್ರುಡೊ ಅವರಿಗೆ 24 ಶೇಕಡಾ ಜನರು ಬೆಂಬಲ ವ್ಯಕ್ತಪಡಿಸಿದ್ದಾರೆ. ಕರೋನಾ ನಂತರ ವಿವಿಧ ದೇಶಗಳಲ್ಲಿ ನಡೆದ ಚುನಾವಣೆಗಳ ತೀರ್ಪುಗಳನ್ನು ನೋಡಿದರೆ, ಅಧಿಕಾರದಲ್ಲಿ ಇರುವವರೆಲ್ಲರೂ ಬಹುತೇಕ ಸೋತಿದ್ದಾರೆ. ಕೆನಡಾದಲ್ಲಿ ಕೂಡಾ ಲಿಬರಲ್ ಪಾರ್ಟಿ ಪರಿಸ್ಥಿತಿಯೂ ಇದೇ ಆಗಿದೆ. ವಿವಿಧ ಆಕರ್ಷಕ ಭರವಸೆಗಳಿಂದ ಆಕರ್ಷಿತರಾಗಿ, ಅವರನ್ನು ಹೃದಯ ಸಾಮ್ರಾಟರೆಂದು ಬೆಂಬಲಿಸಿದ ಜನರೇ ತಿರುಗಿ ಬಿದ್ದರೆ ಯಾವ ವಿಧದಲ್ಲಾದರೂ ಹೊರಗೆ ಹಾಕುತ್ತಾರೆ ಎಂಬುದನ್ನು ಬಾಂಗ್ಲಾದೇಶ ಮತ್ತು ಶ್ರೀಲಂಕಾದಲ್ಲಿನ ಬೆಳವಣಿಗೆಗಳು ಸ್ಪಷ್ಟಪಡಿಸಿವೆ. ನಮ್ಮ ದೇಶದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷಗಳು ಇದರಿಂದ ಪಾಠ ಕಲಿಯುತ್ತವೆಯೇ?

-ಸಿಜಿ

ಮಾಹಿತಿ ಕೃಪೆ: ಪ್ರಜಾಶಕ್ತಿ

NEW No. MAG(3)/NPP/205/2021-2022
JANASHAKTHI KANNADA VARA PATRIKE January 13–19, 2025 Price: Rs. 10/- Date of Publication: 10 January 2025 RNI No. KARKAN /2006/17926 Posted on 13-01-2025
Posted at BG PSO, BG - 560026 **Posted at Periodical Rate -** Rs. 2

ಸಫ್ದರ್ ಹಷ್ಮಿ ಹುತಾತ್ಮ ದಿವಸ

'ಬೋಲ್ ಮಜೂರೆ ಹಲ್ಲಾ ಬೋಲ್ ಹಲ್ಲಾ ಬೋಲ್ ಭಾಯ್, ಹಲ್ಲಾ ಬೋಲ್..'

ಕೋಮಿತಾ

ಪ್ರತಿ ವರ್ಷದಂತೆ ಈ ವರ್ಷವೂ ಜನವರಿ 1, 2025 ರ ಬೆಳಗಿನ ಚುಮು ಚುಮು ಚಳಿಯ ಬೆಳಗ್ಗೆ ದೆಹಲಿಯ ಜಂಡಾಪುರದ ಡಾ.ಅಂಬೇಡ್ಕರ್ ಉದ್ಯಾನದಲ್ಲಿ ದುಡಿಯುವ ಜನರ ಹೋರಾಟದ ಈ ಮೇಲಿನ ಸೊಲ್ಲು ಪ್ರತಿಧ್ವನಿಸಿತು. ಸಂಗಾತಿ ಸಫ್ದರ್ ಹಷ್ಮಿ ಮತ್ತು ರಾಮ್ ಬಹಾದೂರ್ ಅವರನ್ನು ನೆನೆಯಲು ಮತ್ತು 36 ನೇ ಸಫ್ದರ್ ಹಷ್ಮಿ ಹುತಾತ್ಮ ದಿನವನ್ನು ಆಚರಿಸಲು ಬಹಳ ದೊಡ್ಡ ಸಂಖ್ಯೆಯಲ್ಲಿ ಆ ಪ್ರದೇಶದ ಜನರು, ಸಾಹಿಬಾಬಾದ್ ನಿವೇಶನ 4 ರ ನಿವಾಸಿಗಳು ಅಲ್ಲಿ ಸೇರಿದ್ದರು. ಕೈಗಾರಿಕಾ ಕೆಲಸಗಳ ಸ್ವರೂಪದಲ್ಲಿ ನಿರಂತರ ಬದಲಾವಣೆಗಳು ಹಾಗೂ ವಲಸೆಗಳು ಆಗಿದ್ದಾಗ್ಯೂ 36 ವರ್ಷಗಳ ನಂತರವೂ ಸಫ್ದರ್ ನ ಹೆಸರು ಅಲ್ಲಿ ಧೈರ್ಯ ಹಾಗೂ ಪ್ರತಿರೋಧದ ಪ್ರತೀಕವಾಗಿ ಉಳಿದುಕೊಂಡಿತ್ತು. ಸಫ್ದರ್ ಮತ್ತು ರಾಮ್ ಬಹಾದೂರ್ ಅವರ ನೆನಪಿನಲ್ಲಿ ಪ್ರತಿ ವರ್ಷ ಅಲ್ಲಿ ಸಿಐಟಿಯು ಮತ್ತು ಜನ ನಾಟ್ಯ ಮಂಚ್ (ಜನಮ್) ಜಂಟಿಯಾಗಿ ಸಂಘಟಿಸುವ ಕಾರ್ಮಿಕರು ಹಾಗೂ ಕಲಾವಿದರ ಕಾರ್ಯಕ್ರಮದಲ್ಲಿ ಅಲ್ಲಿಯ ಪ್ರದೇಶದ ಜನರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಜನವರಿ 1, 1989 ರಂದು ಜಂಡಾಪುರದಲ್ಲಿ ಜನಮ್ "ಹಲ್ಲಾ ಬೋಲ್" ನಾಟಕ ಪ್ರದರ್ಶನ ಮಾಡುತ್ತಿರುವಾಗ ಕಾಂಗ್ರೆಸ್ ಪಕ್ಷದ ಗೂಂಡಾಗಳಿಂದ ಸಫ್ದರ್ ಅವ ಮೇಲೆ ಪ್ರಾಣಾಂತಿಕ ದಾಳಿಯಾಗಿತ್ತು. ನಾಟಕ ನೋಡುತ್ತಿದ್ದ ಜನರ ಭಾಗವಾಗಿದ್ದ ಕಾರ್ಮಿಕ ಸಂಗಾತಿ ರಾಮ್ ಬಹಾದೂರ್ ಆ ಗೂಂಡಾಗಳ ಗುಂಡುದಾಳಿಗೆ ತುತ್ತಾಗಿ ಪ್ರಾಣ ಕಳೆದುಕೊಂಡರು. ಮರುದಿನ ಜನವರಿ 2 ರಂದು ಆಸ್ಪತ್ರೆಯಲ್ಲಿ ಬದುಕಿಗಾಗಿ ಸೆಣೆಸುತ್ತಿದ್ದ ಸಫ್ದರ್ ಕೊನೆಯುಸಿರೆಳೆದರು. ಇದು ಕೇವಲ ಜನಮ್‌ಗೆ ಮಾತ್ರವಲ್ಲ ದೇಶಾದ್ಯಂತ ಹಲವಾರು ರಂಗಗಳಲ್ಲಿ ದುಡಿಯುತ್ತಿದ್ದ ಕಲಾವಿದರಿಗೆ ಆಘಾತವನ್ನು ಉಂಟುಮಾಡಿತು. ಇಂತಹ ಸಂದರ್ಭದಲ್ಲಿಯೂ ಜನವರಿ 4 ರಂದು ಜನಮ್‌ನ ಕಲಾವಿದರು ಮೂರು ದಿನಗಳ ಹಿಂದೆ ದಾಳಿ ನಡೆದಿದ್ದ ಸ್ಥಳಕ್ಕೆ ಹಿಂದಿರುಗಿಹೋಗಿ ಅಪೂರ್ಣವಾಗಿದ್ದ ನಾಟಕವನ್ನು ಪೂರ್ಣಗೊಳಿಸಿದರು. ಅಂದಿನಿಂದ ಭಾರತೀಯ ಪ್ರಗತಿಪರ ಸಾಂಸ್ಕೃತಿಕ ಚಳವಳಿಯ ಇತಿಹಾಸದಲ್ಲಿ ಮರೆಯಲಾರದ ಸ್ಫೂರ್ತಿದಾಯಕ ಹಾಗೂ ನಿರ್ಣಾಯಕ ದಿನವನ್ನಾಗಿ ಮಾನ್ಯಮಾಡಲಾಗಿದೆ. ಸಫ್ದರ್ ಅವರು ನಂಬಿದ್ದ ಚಿಂತನೆಗಳನ್ನು ಅವರನ್ನು ಕೊಲ್ಲುವುದರ ಮೂಲಕ ಕೊನೆಗೊಳಿಸಲಾಗುವುದಿಲ್ಲ ಎಂಬ ಸಂದೇಶವನ್ನು ಅಂದು ದಾಳಿ ಮಾಡಿದ ಶಕ್ತಿಗಳಿಗೆ ಜನಮ್‌ನ ಸಂಗಾತಿಗಳು ಮನದಟ್ಟು ಮಾಡುತ್ತಿದ್ದಾರೆ.

ಎಂದಿನಂತೆ, ಈಗಲೂ ಕೂಡ ಕಾರ್ಯಕ್ರಮ ಆರಂಭವಾಗುವ ಮೊದಲು ಬುಲಂದ್‌ಷಹರ್‌ನ ರೈತ ಕಲಾವಿದ ರತನ್ ಗಂಭೀರ್ ಬಂಡವಾಳವಾದ ಹಾಗು ಕೋಮುವಾದಿ ಶಕ್ತಿಗಳ ವಿರುದ್ಧದ ಗೀತೆಗಳನ್ನು ಹಾಡಿದರು. ಜನಮ್‌ನ ಬೃಜೇಶ್ ಅವರು ಕಾರ್ಯಕ್ರಮವನ್ನು ಶುರುಮಾಡಿ ಮಾತನಾಡುತ್ತಾ ಆ ಸಂದರ್ಭದ ಇತಿಹಾಸ ಹಾಗೂ ಮಹತ್ವದ ಕುರಿತು ಹೇಳಿದರು. ಕಮ್ಯುನಿಸ್ಟ್ ಚಳವಳಿಯ ನೇತಾರ ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿ ಸಂಗಾತಿ ಸೀತಾರಾಮ್ ಯೆಚೂರಿಯವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಹಾಗೆಯೇ 2024 ರಲ್ಲಿ ನಮ್ಮನ್ನಗಲಿದ ದೆಹಲಿ–ಎನ್‌ಸಿಆರ್‌ನ ಕಾರ್ಮಿಕ ಮುಖಂಡ ಹಾಗೂ ಸಿಪಿಐ(ಎಂ)



ಪ್ರತಿಧ್ವನಿ ದೆಹಲಿ ಮೂಲದ ಸಂಗೀತ ತಂಡ

ದೆಹಲಿ ರಾಜ್ಯ ಕಾರ್ಯದರ್ಶಿ ಕೆ.ಎಂ.ತಿವಾರಿ ಮತ್ತು ಪ್ರಗತಿಪರ ಲೇಖಕ, ಕವಿ ಹಾಗೂ ಜನ ಗೀತಕಾರ ಸಂಗಾತಿ ಕಾಂತಿ ಮೋಹನ್ ಸೊಜ್ ಅವರಿಗೂ ಶ್ರದ್ಧಾಂಜಲಿ ಸಲ್ಲಿಸಿದರು. ಮಡಿದ ಆ ಸಂಗಾತಿಗಳೆಲ್ಲರೂ ಸಫ್ದರ್ ಹಾಗೂ ಜನಮ್‌ನ ಕೆಲಸ ಕಾರ್ಯಗಳ ಬಗ್ಗೆ ತಿಳಿದವರಾಗಿದ್ದವರು. ಆರಂಭದಲ್ಲಿ ಕಾಂತಿ ಮೋಹನ್ ಜನಮ್ ಜತೆ ಕೆಲಸ ಮಾಡಿದ್ದರು. ಜನಮ್‌ನ ಹಲವಾರು ದಶಕಗಳ ಅಮೂಲ್ಯವಾದ ಕೆಲಸಗಳನ್ನು ಬಗ್ಗೆ ಸಂಗಾತಿ ಸೀತಾರಾಮ್ ಯೆಚೂರಿ ಹಾಗೂ ಸಂಗಾತಿ ತಿವಾರಿ ಬೆಂಬಲಿಸಿದ್ದರು ಮತ್ತು ಮೆಚ್ಚಿದ್ದರು ಕೂಡ. ಕಾರ್ಮಿಕ ಚಳವಳಿಯಲ್ಲಿ ಸಾಂಸ್ಕೃತಿಕ ರಂಗದ ಪಾತ್ರ ಹಾಗೂ ಮಹತ್ವ ಕುರಿತು ಅವರು ನಿರಂತರವಾಗಿ ಎತ್ತಿಹೇಳುತ್ತಿದ್ದರು.

ಸಂಯೋಜಕ ಹಾಗೂ ಗಾಯಕ ಕಾಜಲ್ ಘೋಷ್ 'ಲಾಲ್ ಜಂಡಾ ಲೇಕರ್ ಕಾಮ್ರೇಡ್ಸ್ ..' ಮತ್ತಿತರ ಕ್ರಾಂತಿಕಾರಿ ಗೀತೆಗಳನ್ನು ಹಾಡಿದರೆ ಸಂಗಾತಿ ಸುಧನ್ವ ದೇಶಪಾಂಡೆ ಪ್ಯಾಲೆಸ್ತೈನಿನ ಪ್ರಾಧ್ಯಾಪಕ ಹಾಗೂ ಲೇಖಕ ಹೈದರ್ ಈದ್ ಅವರು ಬರೆದ ಕವನವನ್ನು ಓದುವ ಮೂಲಕ ಪ್ಯಾಲೆಸ್ತೈನ್ ವಿಮೋಚನಾ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು.

'ಏಕ್ ಬೇರೋಜ್ಗಾರಿ ಕಿ ಅಧೂರಿ ಲವ್ ಸ್ಟೋರಿ' ಎಂಬ ತನ್ನ ಹೊಸ ಬೀದಿ ನಾಟಕವನ್ನು ಜನಮ್ ಪ್ರಸ್ತುತಪಡಿಸಿತು; ಅದು ನೌಟಂಕಿ ಶೈಲಿಯಲ್ಲಿದ್ದು ಹಿಂದಿ ಚಲನಚಿತ್ರ ಗೀತೆಗಳನ್ನು ಬಳಸುವ ಮೂಲಕ ದೇಶದಲ್ಲಿ ಮಿತಿಮೀರಿ ಬೆಳೆಯುತ್ತಿರುವ ನಿರುದ್ಯೋಗ ಸ್ಥಿತಿಯನ್ನು ವಿಡಂಬನೆ ಮಾಡಿತು. ಅಷ್ಟೇ ಅಲ್ಲ ಸಂಗಾತಿ ಸುಧನ್ವ ನಿರ್ದೇಶಿಸಿದ ಈ ನಾಟಕವು ಬಂಡವಾಳಶಾಹಿ ವ್ಯವಸ್ಥೆ ಮತ್ತು ಕೇಂದ್ರ ಸರ್ಕಾರದ ನಡುವಿನ ನಂಟನ್ನು ವಿಡಂಬನಾತ್ಮಕವಾಗಿ ವಿಶ್ಲೇಷಣೆ ಮಾಡಿತು.

ಕೊನೆಯಲ್ಲಿ, ಕೈಗಾರಿಕಾ ಕಾರ್ಮಿಕರು ಹಾಗೂ ಗಿಗ್ ನೌಕರರು ಅನುಭವಿಸುತ್ತಿರುವ ಅಮಾನವೀಯ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ತೋರಿಸಿದ 'ಏಕಾ ಜಿಂದಾಬಾದ್' ನಾಟಕವನ್ನು ಜನಮ್ ಪ್ರದರ್ಶಿಸಿತು. ಈ ನಾಟಕವನ್ನು ಸಿಐಟಿಯು ಪ್ರಚಾರಾಂದೋಲನದ ಭಾಗವಾಗಿ ಸಿದ್ಧಪಡಿಸಲಾಗಿತ್ತು ಮತ್ತು ಕಾರ್ಮಿಕರ ಕಾಲೋನಿಗಳಲ್ಲಿ ಹದಿನೈದು ದಿನಗಳ ಕಾಲ ಪ್ರದರ್ಶಿಸಲಾಗಿತ್ತು.

ಈ ಬಾರಿಯ ಸಫ್ದರ್ ಹುತಾತ್ಮ ದಿವಸದ ವಿಶೇಷತೆಯೆಂದರೆ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಸಹ ಕಾರ್ಯದರ್ಶಿ ವಿಕ್ರಮ್ ಸಿಂಗ್ ಅವರು ಪ್ರಧಾನ ಭಾಷಣ ಮಾಡಿದರು. ಸಫ್ದರ್‌ಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ವಿಕ್ರಮ್ ಸಿಂಗ್ ಅವರು 'ಸಫ್ದರ್‌ನ ಹತ್ಯೆಗೆ ಕಾರಣರಾದ ಗೂಂಡಾಗಳು ಈಗ ಕಾಣುತ್ತಿಲ್ಲ ಆದರೆ ಸಫ್ದರ್‌ನ ಕ್ರಾಂತಿಕಾರಿ ಗೀತೆಗಳು ಇವತ್ತಿಗೂ ಜನಮ್‌ನ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜೀವಂತವಾಗಿವೆ' ಎಂದರು. ನವ–ಉದಾರವಾದಿ ನೀತಿಗಳು ನಿರುದ್ಯೋಗದ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ ಎಂದು ವಿವರಿಸಿದ ಅವರು ಬಹಳ ಮುಖ್ಯವಾಗಿ ಯೋಜನಾ ಕಾರ್ಮಿಕರು ಹಾಗೂ ಗಿಗ್ ನೌಕರರು ತಮ್ಮ ಕನಿಷ್ಠ ಕೂಲಿಗಾಗಿ ದಿನನಿತ್ಯವೂ ಹೋರಾಡಬೇಕಾದ ಸ್ಥಿತಿ ಇದೆ. ಕಾರ್ಮಿಕರು ಯಾವುದೇ ಹೆಚ್ಚುವರಿ ಭತ್ಯೆ ಇಲ್ಲದೇ 14 ಗಂಟೆಗಳ ಕಾಲ ಕೆಲಸ ಮಾಡುವಂತೆ ಒತ್ತಾಯಿಸಲಾಗುತ್ತಿದೆ. ನಮ್ಮನ್ನಾಳುವ ಸರ್ಕಾರಗಳು – ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಉದ್ದೇಶವು "ದುಡಿಯುವ ಜನರನ್ನು ಶೋಷಣೆ ಮಾಡಿ ಬಂಡವಾಳಗಾರರಿಗೆ ಲಾಭ ಮಾಡಿಕೊಡುವುದೇ ಆಗಿದೆ" ಎಂದು ಹೇಳಿದರು.

ಮುಂದುವರಿದು ಮಾತನಾಡಿದ ವಿಕ್ರಮ್ ಸಿಂಗ್ ಅವರು "ರೈತರು ಹಾಗೂ ಕೃಷಿ ಕಾರ್ಮಿಕರು ಸಾಕಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದಾರೆ, ಆದಾಗ್ಯೂ ಭಾರತವು ಜಾಗತಿಕ ಹಸಿವಿನ ಸೂಚ್ಯಾಂಕದಲ್ಲಿ ದಯನೀಯ ಸ್ಥಾನದಲ್ಲಿದೆ. ದುಡಿಯುವ ಜನರ ಮಕ್ಕಳಿಗೆ ಪೌಷ್ಟಿಕಾಂಶಗಳು ದೊರೆಯುತ್ತಿಲ್ಲ. ಸರ್ಕಾರದ ದತ್ತಾಂಶಗಳನ್ನು ಉಲ್ಲೇಖಿಸಿ "ಆಗಸ್ಟ್ 2023 ರಲ್ಲಿ ಪೂರ್ಣ ಪೋಷಕಾಂಶಯುಕ್ತ ಒಂದು ತಟ್ಟೆ ಊಟಕ್ಕೆ ಸುಮಾರು ರೂ.100/– ಇದ್ದರೆ, ಈಗ 2024 ರಲ್ಲಿ ಅದರ ಬೆಲೆ ರೂ.152/– ಆಗಿದೆ. ಆದರೆ ಅದಕ್ಕೆ ಸರಿಸಮನಾಗಿ ದುಡಿಯುವವರ ಕೂಲಿಯ ದರ ಹೆಚ್ಚಾಗುತ್ತಿಲ್ಲ. ವಾಸ್ತವದಲ್ಲಿ ಕೂಲಿಯ ದರವು ಕಡಿಮೆಯಾಗುತ್ತಿದೆ. ಆಹಾರ ಧಾನ್ಯಗಳನ್ನು ಬೆಳೆಯುವ ರೈತರು ಪ್ರತಿನಿತ್ಯ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆತ್ಮಹತ್ಯೆಗೆ ಶರಣಾಗುತ್ತಿರುವವರ ಸಂಖ್ಯೆ ಪ್ರತಿವರ್ಷ ಏರುತ್ತಲೇ ಇದೆ, ಕೃಷಿ ಕಾರ್ಮಿಕರು, ದಿನಗೂಲಿ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯೇ ಇಂತಹ ದುಃಸ್ಥಿತಿಗೆ ಕಾರಣ ಎಂದು ಅವರು ವಿವರಿಸಿದರು. ಹಾಗೆಯೇ, ಕೋಮುವಾದದ ವಿರುದ್ಧವು ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಾ 'ಈ ತೋಳಗಳ ದ್ವೇಷವು ಮನುಷ್ಯರ ಬದುಕನ್ನೇ ನಾಶ ಮಾಡುತ್ತಿದೆ' ಎಂದು ಪರಿತಪಿಸಿದರು. 'ಹಿಂದುತ್ವ ರಾಜಕೀಯದ ವಿರುದ್ಧ ಕೆಂಬಾವುಟದ ಯೋಧರು ಮಾತ್ರವೇ ನಿರ್ಣಾಯಕವಾಗಿ ಹೋರಾಡಬಲ್ಲರು' ಎಂಬ ಆಶಯ ವ್ಯಕ್ತಪಡಿಸಿದರು.

ಈ ವರ್ಷ, ಪ್ರತಿಧ್ವನಿ ದೆಹಲಿ ಮೂಲದ ಸಂಗೀತ ತಂಡವು ಹಿಂದಿ, ಭೋಜ್‌ಪುರಿ ಹಾಗೂ ಇತರ ಭಾರತೀಯ ಭಾಷೆಗಳಲ್ಲಿ ಗೀತೆಗಳನ್ನು ಹಾಡಿದರು. ಈ ಬಾರಿಯ ಮತ್ತೊಂದು ವಿಶೇಷವೆಂದರೆ ಜನಮ್‌ನ ಯುವ ಸದಸ್ಯ ಮುಸ್ತಾಫಾ ಹಾಗೂ ಜನಮ್ ಮತ್ತು ಸಫ್ದರ್‌ನ ಮಿತ್ರ ಪ್ರಕಾಶ್ ಉಪಾಧ್ಯಾಯ ಅವರು ತಮ್ಮ ನೆನಪುಗಳನ್ನು ಹಂಚಿಕೊಂಡು ಮಾತನಾಡಿದರು.

ಇಂಗ್ಲಿಷ್ ಅನುವಾದ: ದೀಕ್ಷಾ;
ಕನ್ನಡಕ್ಕೆ: ಟಿ.ಸುರೇಂದ್ರ ರಾವ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**